ಗುತ್ತಿಗೆದಾರರು ಸೂಚಿಸಿರುವ ಷರತ್ತುಗಳನ್ನು ಕಡಿಮೆಗೊಳಿಸುವ [illegible] ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ [illegible] ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು [illegible] ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 39,31,608/–ಗಳ [illegible] ಶೇ. 13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 44,62,375/–ಗಳಿಗೆ ಕಾಮಗಾರಿಯನ್ನು, ಶ್ರೀ. ರವಿ [illegible] 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು

ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 48 ಅಪಿಬಂ 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗದಗ ಜಿಲ್ಲೆ, ಗದಗ ತಾಲ್ಲೂಕಿನ, ಕುರ್ತಕೋಟಿ ಗ್ರಾಮದ ಹತ್ತಿರ ಬಂದಾರ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 39,31,608/–ಗಳ ಮೇಲೆ ಶೇ. 13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 44,62,375/–ಗಳಿಗೆ (ನಲವತ್ನಾಲ್ಕು ಲಕ್ಷದ ಅರವತ್ತೆರಡು ಸಾವಿರದ ಮುನ್ನೂರ ಎಪ್ಪತ್ತೈದು ರೂ.ಗಳು ಮಾತ್ರ) ಶ್ರೀ. ರವಿ ತೋಡುರಕರ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2085

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಗದಗ ಜಿಲ್ಲೆ ಹಾಗೂ ತಾಲ್ಲೂಕಿನ, ಹೊಂಬಳ ಹುಯಿಲಗೋಳ ರಸ್ತೆ ಮದ್ಯದಲ್ಲಿರುವ ಆಳಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜು ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ 2009 (2) ದಿನಾಂಕ 02.03.2009
2. ದಿನಾಂಕ 03.08.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಎ.ಇ–3/2009–10/4581.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರುರವರ ದಿನಾಂಕ 05.08.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1953.

ಪ್ರಸ್ತಾವನೆ:

ಗದಗ ಜಿಲ್ಲೆ ಹಾಗೂ ತಾಲ್ಲೂಕಿನ, ಹೊಂಬಳ ಹುಯಿಲಗೋಳ ರಸ್ತೆ ಮದ್ಯದಲ್ಲಿರುವ ಆಳಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜು ನಿರ್ಮಾಣ ಕಾಮಗಾರಿಯ 165.00ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 02.03.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ರಾಜ್ಯ ಟೆಂಡರ್ ಬುಲೆಟಿನ್	25.02.2009
2	ಕರ್ನಾಟಕ ರಾಜ್ಯ ಪತ್ರ	26.02.2009
3	ಜಿಲ್ಲಾ ಟೆಂಡರ್ ಬುಲೆಟಿನ್	03.03.2009
4	ವಿಜಯ ಕರ್ನಾಟಕ	
5	ಕನ್ನಡಪ್ರಭ ದಿನ ಪತ್ರಿಕೆಯಲ್ಲಿ	06.03.2009
6	ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನ ಪತ್ರಿಕೆ	07.03.2009

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 3 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 21.07.2009ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರ ಟೆಂಡರ್ ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ಗಳನ್ನು

ದಿನಾಂಕ 27.07.2009ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ 1,48,56,821/-	
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ			ರೂ 1,48,56,821/-	
ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಜಿ.ಎನ್.ಅಗಸನಕೊಪ್ಪ, 1ನೇ ದರ್ಜೆ ಗುತ್ತಿಗೆದಾರರು	1,75,08,722./-	17.85 ಹೆಚ್ಚು	17.85 ಹೆಚ್ಚು
2	ಅಶೋಕ ಎಸ್ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು	1,80,42,074./-	21.44 ಹೆಚ್ಚು	21.44 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ. ಜಿ.ಎನ್.ಅಗಸನಕೊಪ್ಪ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 1,75,08,722/-ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.85ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,48,56,821/-ಗಳ ಮೇಲೆ ಶೇ. 13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,68,62,491/-ಗಳಿಗೆ ಕಾಮಗಾರಿಯನ್ನು ಶ್ರೀ. ಜಿ.ಎನ್.ಅಗಸನಕೊಪ್ಪ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 46 ಅಪಿಬಂ 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗದಗ ಜಿಲ್ಲೆ ಹಾಗೂ ತಾಲ್ಲೂಕಿನ, ಹೊಂಬಳ ಹುಯಿಲಗೋಳ ರಸ್ತೆ ಮಧ್ಯದಲ್ಲಿರುವ ಆಳಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜು ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 1,48,56,821/-ಗಳ ಮೇಲೆ ಶೇ. 13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,68,62,491/-ಗಳಿಗೆ (ಒಂದು ಕೋಟಿ ಅರವತ್ತೆಂಟು ಲಕ್ಷದ ಅರವತ್ತೆರಡು ಸಾವಿರದ ನಾಲ್ಕು ನೂರ ತೊಂಬತ್ತೊಂದು ರೂ.ಗಳು ಮಾತ್ರ) ಶ್ರೀ. ಜಿ.ಎನ್.ಅಗಸನಕೊಪ್ಪ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2086

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕೌಶಿಕ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2007 ದಿನಾಂಕ: 11.12.2007

2. ದಿನಾಂಕ 23/07/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ: ಮುಸದ/ತಾಂ.2/ಸ.ಇಂ-4/ಹಾಸನ/ಕೌಶಿಕದೊಡ್ಡಕೆರೆ/ಟೆಂಡರ್/2009-10 /2984.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 05.08.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08-09/1953.

ಪ್ರಸ್ತಾವನೆ:

ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕೌಶಿಕ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ 71.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 11.12.2007ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ಹಾಸನ ಜಿಲ್ಲಾ ಟೆಂಡರ್ ಬಲೆಟಿನ್	25.10.2008
2	ಕರ್ನಾಟಕ ರಾಜ್ಯ ಪತ್ರ	30.10.2008
3	ವಿಜಯ ಕರ್ನಾಟಕ ದಿನ ಪತ್ರಿಕೆ	02.11.2008
4	ಕನ್ನಡಪ್ರಭ ದಿನ ಪತ್ರಿಕೆ	01.11.2008
5	ದಿ ಟೈಮ್ಸ್ ಆಫ್ ಇಂಡಿಯ ದಿನಪತ್ರಿಕೆ	01.11.2008

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 14 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 02.03.2009ರಂದು ತೆರೆಯಲಾಗಿ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ಗಳನ್ನು ದಿನಾಂಕ 22.05.2009ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 69,56,092/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				ರೂ. 72,57,160/-
ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಕೆ.ಎ.ಇಂದ್ರೇಶ್ , 1ನೇ ದರ್ಜೆ ಗುತ್ತಿಗೆದಾರರು	83,71,027/-	20.34 ಹೆಚ್ಚು	15.34 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.34ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 72,57,160-00ಗಳ ಮೇಲೆ ಶೇಕಡ 13.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 82,00,590-00ಗಳಿಗೆ ಕಾಮಗಾರಿಯನ್ನು ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ

ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 58 ಕೆಜಿದು 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕೌಶಿಕ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ.72,57,160–00 ಗಳ ಮೇಲೆ ಶೇಕಡ 13.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 82,00,590–00ಗಳಿಗೆ (ಎಂಭತ್ತೆರಡು ಲಕ್ಷದ ಐನೂರ ತೊಂಬತ್ತು ರೂ.ಗಳು ಮಾತ್ರ) ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2087

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಶಾಂತಿಗ್ರಾಮ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ :

1 ಸರ್ಕಾರದ ಆದೇಶ ಸಂಖ್ಯೆ:ಸನೀಇ 10 ನಯೋಕಾ 2007 ದಿನಾಂಕ: 11.12.2007

2. ದಿನಾಂಕ 21/07/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ಪತ್ರ ಸಂಖ್ಯೆ: ಮುಸದ/ತಾಂ.2/ಸ.ಇಂ–4/ಹಾಸನ/ಶಾಂತಿಗ್ರಾಮ/ ಟೆಂಡರ್/ 2009–10/2961.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 05.08.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1953.

ಪ್ರಸ್ತಾವನೆ:

ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಶಾಂತಿಗ್ರಾಮ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ 89.50 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 11.12.2007ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	**ಹಾಸನ ಜಿಲ್ಲಾ ಟೆಂಡರ್ ಬಲೆಟಿನ್**	**25.10.2008**
2	**ಕರ್ನಾಟಕ ರಾಜ್ಯ ಪತ್ರ**	**30.10.2008**
3	**ವಿಜಯ ಕರ್ನಾಟಕ ದಿನ ಪತ್ರಿಕೆ**	**02.11.2008**
4	**ಕನ್ನಡಪ್ರಭ ದಿನ ಪತ್ರಿಕೆ**	**01.11.2008**
5	**ದಿ ಟೈಮ್ಸ್ ಆಫ್ ಇಂಡಿಯ ದಿನಪತ್ರಿಕೆ**	**01.11.2008**

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 3 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 02.03.2009ರಂದು ತೆರೆಯಲಾಗಿ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ಗಳನ್ನು ದಿನಾಂಕ 22.05.2009ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 88,83,299/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	ರೂ. 93,58,295/-

ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಕೆ.ಎ.ಇಂದ್ರೇಶ್ , 1ನೇ ದರ್ಜೆ ಗುತ್ತಿಗೆದಾರರು	1,07,16,399/-	20.63 ಹೆಚ್ಚು	14.51 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. **1,07,16,399/-**ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.51ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 93,58,295-00ಗಳ ಮೇಲೆ ಶೇಕಡ 13.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,05,74,873-00ಗಳಿಗೆ ಕಾಮಗಾರಿಯನ್ನು ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 59 ಕೆಜಿದು 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಶಾಂತಿಗ್ರಾಮ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 93,58,295-00ಗಳ ಮೇಲೆ ಶೇಕಡ 13.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,05,74,873-00ಗಳಿಗೆ (ಒಂದು ಕೋಟಿ ಐದು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಎಂಟುನೂರ ಎಪ್ಪತ್ತಾಮೂರು ರೂ.ಗಳು ಮಾತ್ರ) ಶ್ರೀ ಕೆ.ಎ.ಇಂದ್ರೇಶ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2088

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ವ್ಯಾಸನಕೆರೆ ಏತ ನೀರಾವರಿ ಯೋಜನೆಗೆ 11ಕೆ.ವಿ ಎಕ್ಸ್‌ಪ್ರೆಸ್ ಫೀಡರ್ ಲೈನ್ ಅಳವಡಿಸುವ (ಬಾಕಿ ಕಾಮಗಾರಿ) ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ: ಸನೀಇ 46 ಏನೀಯೋ 2001 ದಿನಾಂಕ 31.03.2001

2. ದಿನಾಂಕ 24/07/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಟಿಬಿ-12/2009-10/4368.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 05.08.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08-09/1953.

ಪ್ರಸ್ತಾವನೆ:

ರೂ. 138.00 ಲಕ್ಷ ಅಂದಾಜು ಮೊತ್ತದ ವ್ಯಾಸನಕೆರೆ ಏತ ನೀರಾವರಿ ಯೋಜನೆ ಅಭಿವೃದ್ಧಿ ಕಾಮಗಾರಿಗೆ ಉಲ್ಲೇಖ 1 ರಲ್ಲಿ ಓದಲಾದ ದಿನಾಂಕ 31.03.2001ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕೆಲಸವನ್ನು ಸಿವಿಲ್, ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಗಳಾಗಿ ವಿಭಜಿಸಿ ಕೈಗೊಳ್ಳಲಾಗಿದೆ. ಈ ಮೊದಲು ಟೆಂಡರ್ ಮೂಲಕ ವಹಿಸಲಾಗಿದ್ದ ಎಲೆಕ್ಟ್ರಿಕಲ್ ಕಾಮಗಾರಿಯನ್ನು ಮೂಲ ಗುತ್ತಿಗೆದಾರರು ಸ್ಥಗಿತಗೊಳಿಸಿರುವುದರಿಂದ ಮೂಲ ಗುತ್ತಿಗೆಯನ್ನು ಕರಾರಿನಂತೆ ವಜಾಮಾಡಿ ಬಾಕಿ ಕೆಲಸವನ್ನು ಅಂದರೆ 11ಕೆ.ವಿ ಎಕ್ಸ್‌ಪ್ರೆಸ್ ಫೀಡರ್ ಲೈನ್ ಅಳವಡಿಸುವ (ಬಾಕಿ ಕಾಮಗಾರಿ) ಕಾಮಗಾರಿಯನ್ನು ಕೈಗೊಳ್ಳಲು ಬಳ್ಳಾರಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಟೆಂಡರ್ ಕರೆಯಲಾಗಿದ್ದು, ಈ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	**ಜಿಲ್ಲಾ ಟೆಂಡರ್ ಬಲೆಟಿನ್**	**19.01.2009**
2	**ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ**	**12.02.2009**

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಟ್ಟು 2 ಜನ ಗುತ್ತಿಗೆದಾರರು ಖಾಲಿ ಟೆಂಡರ್ ಪಡೆದು ನಿಗಧಿತ ದಿನಾಂಕದಂದು ಟೆಂಡರ್‌ಗಳನ್ನು ಸಲ್ಲಿಸಿರುವುದಾಗಿ ವರದಿಯಾಗಿದೆ. ಲೋಕ ಸಭಾ ಚುನಾವಣೆ ನೀತಿ ಸಂಹಿತೆಯ ಹಿನ್ನಲೆಯಲ್ಲಿ ನಿಗದಿಪಡಿಸಿದ ದಿನಾಂಕ 06.03.2009ರ ಬದಲಾಗಿ ದಿನಾಂಕ 15.05.2009ರಂದು ತೆರೆದು ಪರಿಶೀಲಿಸಲಾಗಿದೆ. ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ 22,02,776/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	ರೂ 27,11,905/-

ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಸಿದ್ದಲಿಂಗೇಶ್ವರ ಎಲೆಕ್ಟ್ರಿಕಲ್ಸ್, 2ನೇ ದರ್ಜೆ ಗುತ್ತಿಗೆದಾರರು	33,66,660/-	52.83 ಹೆಚ್ಚು	24.14 ಹೆಚ್ಚು
2	ಕೆ.ಜಿ.ನಾಗೇಂದ್ರ, 2ನೇ ದರ್ಜೆ ಗುತ್ತಿಗೆದಾರರು	35,99,245/-	63.39 ಹೆಚ್ಚು	32.72 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಸಿದ್ದಲಿಂಗೇಶ್ವರ ಎಲೆಕ್ಟ್ರಿಕಲ್ಸ್, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 33,66,660/-ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.14ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 27,11,905/-ಗಳ ಮೇಲೆ ಶೇ. 14.75 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 31,11,911/-ಗಳಿಗೆ ಕಾಮಗಾರಿಯನ್ನು ಶ್ರೀ ಸಿದ್ದಲಿಂಗೇಶ್ವರ ಎಲೆಕ್ಟ್ರಿಕಲ್ಸ್, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 28 ಏನೀಯೋ 2009, ಬೆಂಗಳೂರು, ದಿನಾಂಕ 12 ನೇ ಆಗಸ್ಟ್,2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ವ್ಯಾಸನಕೆರೆ ಏತ ನೀರಾವರಿ ಯೋಜನೆಗೆ 11ಕೆ.ವಿ ಎಕ್ಸ್‌ಪ್ರೆಸ್ ಫೀಡರ್ ಲೈನ್ ಅಳವಡಿಸುವ (ಬಾಕಿ ಕಾಮಗಾರಿ) ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 27,11,905/-ಗಳ

[illegible]

2. ಸರ್ಕಾರದ [illegible] ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

[illegible]

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ [illegible] ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2089

[illegible]

[illegible]

[illegible] ಇಲಾಖೆ(ಸಣ್ಣ ನೀರಾವರಿ)

[illegible] ಅಣೆಕಟ್ಟೆಗೆ [illegible] ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು

[illegible] 1. [illegible] 2009 ದಿನಾಂಕ: 05.02.2009.

2. [illegible] /3/2009-10/4378.

3. [illegible] / 08-09/1955.

ಪ್ರಸ್ತಾವನೆ:

[illegible] (1)ರಲ್ಲಿ [illegible] ದಿನಾಂಕ 05.02.2009ರ [illegible]

[illegible] ವಿಭಾಗದಿಂದ ಕರ್ನಾಟಕ ಸಾರ್ವಜನಿಕ [illegible] ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ [illegible]

1	[illegible]	[illegible]
2	ಕರ್ನಾಟಕ ರಾಜ್ಯ ಪತ್ರ	26.02.2009
3	ಕನ್ನಡಪ್ರಭ ದಿನ ಪತ್ರಿಕೆ[illegible]	[illegible]
4	ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನ ಪತ್ರಿಕೆ	[illegible]

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ [illegible] ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ [illegible] ದಿನಾಂಕ 21.07.2009ರಂದು ತೆರೆಯಲಾಗಿ [illegible] ದಿನಾಂಕ 27.07.2009ರಂದು ತೆರೆಯಲಾಗಿದೆ. [illegible] ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರ್ [illegible]			ರೂ 1,36,93,974/-	
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ [illegible] ಮೊತ್ತ			ರೂ 1,36,93,974/-	
ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	[illegible]	ಪ್ರಸಕ್ತ ಸಾಲಿನ [illegible] ಹೆಚ್ಚಳ
1	ಜೆ.ಎಸ್.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು	[illegible]	[illegible]	[illegible]

2	ಅಶೋಕ ಎಸ್ ಶೆಟ್ಟಿ , 1ನೇ ದರ್ಜೆ ಗುತ್ತಿಗೆದಾರರು	1,76,90,955/-	29.19 ಹೆಚ್ಚು	29.19 ಹೆಚ್ಚು

ಮೊದಲನೇ ಕಡಿಮೆ ದರದಾರರಾದ ಶ್ರೀ ಜೆ.ಎಸ್.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 1,69,90,841/-ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.08ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 04.08.2009ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,36,93.974-00ಗಳ ಮೇಲೆ ಶೇಕಡ 13.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,55,42,660-00ಗಳಿಗೆ ಕಾಮಗಾರಿಯನ್ನು ಶ್ರೀ. ಜೆ.ಎಸ್.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಜಸಂಇ 49 ಅಪಿಬಂ 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗದಗ ಜಿಲ್ಲೆ, ರೋಣ ತಾಲ್ಲೂಕಿನ, ಡಿ.ಎಸ್. ಹಡಗಲಿ-ಗುಜಮಾಗಡಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜು ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 1,36,93,974-00ಗಳ ಮೇಲೆ ಶೇಕಡ 13.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,55,42,660-00ಗಳಿಗೆ (ಒಂದು ಕೋಟಿ ಐವತ್ತೈದು ಲಕ್ಷದ ನಲವತ್ತೆರಡು ಸಾವಿರದ ಆರುನೂರ ಅರವತ್ತು ರೂ.ಗಳು ಮಾತ್ರ) ಶ್ರೀ. ಜೆ.ಎಸ್.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2090

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ನೂತನವಾಗಿ ರಚಿಸಿರುವ ಜಿಲ್ಲೆಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜಿಲ್ಲಾಮಟ್ಟದ ಕಛೇರಿಗಳನ್ನು ತೆರೆಯುವ ಕುರಿತು.

ಓದಲಾಗಿದೆ :

1. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ4/2008-09/141, ದಿನಾಂಕ:8.8.2008.
2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ2/08-09/1181, ದಿ:18.7.09.
3. ದಿ:18.08-09ರ ಸರ್ಕಾರಿ ಆದೇಶ ಸಂಖ್ಯೆ:ಸಿಐ 76 ಎಂಜಿಎಸ್ 2008.
4. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ4/09-10/2724, ದಿ:29.8.09.

ಪ್ರಸ್ತಾವನೆ:

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ 6 ಜಿಲ್ಲೆಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗಳನ್ನು ತೆರೆಯುವ ಕುರಿತು ಮೇಲೆ (1) ಮತ್ತು (2)ರಲ್ಲಿ ಕ್ರಮವಾಗಿ ಓದಲಾದ ದಿ:8.8.08 ಮತ್ತು 18.7.09ರ ಪತ್ರಗಳಲ್ಲಿ

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಪ್ರಸ್ತಾವಿಸಿದ್ದರ ಮೇರೆಗೆ, ಮೇಲೆ (3)ರಲ್ಲಿ ಓದಲಾದ ದಿ:18.8.09ರ ಆದೇಶದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಉಡುಪಿ, ದಾವಣಗೆರೆ ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ತಲಾ 4 ರಂತೆ ಒಟ್ಟು 16 ಹುದ್ದೆಗಳನ್ನು ಆರ್ಥಿಕ ಇಲಾಖೆಯು ಅನುಮೋದಿಸಿರುವಂತೆ ಸೃಷ್ಟಿಸುವುದು. 4 ಜಿಲ್ಲಾ ಮಟ್ಟದ ಕಛೇರಿಗಳಿಗೆ ತಲಾ ಒಂದೊಂದರಂತೆ ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರ, ವಾಹನಚಾಲಕ ಮತ್ತು ಗ್ರೂಪ್–ಡಿ ಹುದ್ದೆಗಳನ್ನು ಸೃಷ್ಟಿಸದೇ ಸೇವೆಯನ್ನು ಮಾತ್ರವೇ ಬಾಹ್ಯಮೂಲಗಳಿಂದ ಪಡೆದುಕೊಳ್ಳುವುದು. ಈ 4 ಕಛೇರಿಗಳಿಗೆ ತಲಾ 1 ಹಿರಿಯ ಭೂವಿಜ್ಞಾನಿ ಹುದ್ದೆಯನ್ನು redeployment ಮೂಲಕ ಭರ್ತಿ ಮಾಡಿ, ಜಿಲ್ಲಾಮಟ್ಟದ 4 ಕಛೇರಿಗಳನ್ನು ಸ್ಥಾಪಿಸಿ ನಿರ್ವಹಿಸಲು ಸರ್ಕಾರವು ಆದೇಶಿಸಿರುತ್ತದೆ.

ಮೇಲೆ (4)ರಲ್ಲಿ ಓದಲಾದ ದಿ:29.8.09ರ ಪತ್ರದಲ್ಲಿ, ಉಡುಪಿ, ದಾವಣಗೆರೆ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜಿಲ್ಲಾ ಮಟ್ಟದ ಹಿರಿಯ ಭೂವಿಜ್ಞಾನಿ ಕಛೇರಿಗಳನ್ನು ಸ್ಥಾಪಿಸಲು ಸರ್ಕಾರವು ಆದೇಶಿಸಿದ್ದು, ಸದರಿ ಕಛೇರಿಗಳು ಖನಿಜ ಮತ್ತು ಅಂತರ್ಜಲ ವಿಭಾಗದ ಕಾರ್ಯನಿರ್ವಹಿಸಲು ಅನುವಾಗುವಂತೆ ಹಿರಿಯ ಭೂ ವಿಜ್ಞಾನಿ ಹುದ್ದೆಗಳನ್ನು redeployment ಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲಿನಂತೆ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಸಿಐ 76 ಎಂಜಿಎಸ್ 2008, ಬೆಂಗಳೂರು, ದಿನಾಂಕ: 31ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಉಡುಪಿ, ದಾವಣಗೆರೆ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಗಳನ್ನು ಸ್ಥಾಪಿಸಲು ಆದೇಶಿಸಿದ್ದು, ಈ ಕೆಳಕಂಡಂತೆ ಇಲಾಖೆಯ ಹಿರಿಯ ಭೂವಿಜ್ಞಾನಿ ಹುದ್ದೆಗಳನ್ನು ಮರುವಿನ್ಯಾಸಗೊಳಿಸಲು (re-deployment) ಸರ್ಕಾರದವು ಆದೇಶಿಸಿದೆ.

ಕ್ರ.ಸಂ	ಹುದ್ದೆ ಮತ್ತು ವೇತನ ಶ್ರೇಣಿ	ಪ್ರಸ್ತುತ ಹುದ್ದೆ ಇರುವ ಕಛೇರಿ	ಹುದ್ದೆಯ ಮರುವಿನ್ಯಾಸಗೊಳಿಸಲ್ಪಟ್ಟ ಸ್ಥಳ
1	ಹಿರಿಯ ಭೂವಿಜ್ಞಾನಿ 14050–25050	ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು	ಹಿರಿಯ ಭೂ ವಿಜ್ಞಾನಿ, ದಾವಣಗೆರೆ
2	ಹಿರಿಯ ಭೂವಿಜ್ಞಾನಿ 14050–25050	ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು	ಹಿರಿಯ ಭೂ ವಿಜ್ಞಾನಿ, ಹಾವೇರಿ
3	ಹಿರಿಯ ಭೂವಿಜ್ಞಾನಿ 14050–25050	ಜಂಟಿ ನಿರ್ದೇಶಕರ ಕಛೇರಿ, (ದಕ್ಷಿಣ ವಲಯ), ಗಣಿ ಮತ್ತು ಭೂವಿಜ್ಞಾನ ಇಲಾಖೆ ಮೈಸೂರು	ಹಿರಿಯ ಭೂ ವಿಜ್ಞಾನಿ, ಉಡುಪಿ
4	ಹಿರಿಯ ಭೂವಿಜ್ಞಾನಿ 14050–25050	ಜಂಟಿ ನಿರ್ದೇಶಕರ ಕಛೇರಿ, (ಉತ್ತರ ವಲಯ), ಗಣಿ ಮತ್ತು ಭೂವಿಜ್ಞಾನ ಇಲಾಖೆ ಬಳ್ಳಾರಿ	ಹಿರಿಯ ಭೂ ವಿಜ್ಞಾನಿ, ಗದಗ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2078

ಎ.ಪಿ. ರಾಮಕೃಷ್ಣ
ಪೀಠಾಧಿಕಾರಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

COMMERCE AND INDUSTRIES SECRETARIAT

Sub: Permission to M.s. XIndia Steels Limited., to establish a " 2.5 Million TPA Integrated Steel Plant in Koppal Taluk-Grant of Special Incentives & Concessions Applicable to MEGA Projects & Change the mode of acquisition of partial land by KIADB instead of permission U/s 109 of KLR Act.

Read:
1. Proceedings of the 14th State High Level Clearance Committee (SHLCC) meeting held on 17.3.2008.
2. G.O.No. CI 83 SPI 2008 dated: 28.4.2008 .

3. Proceedings of the 17th State High Level Clearance Committee (SHLCC) meeting held on 28.1.2009.

PREAMBLE:

M/s XIndia Steels Limited, has proposed to establish a "2.5 MTPA Integrated Steel Plant with 250 MW Captive Power Plant", in 1201 acres 15 guntas of land, at various Sy. Nos in Kunikere & Hirebagnal Villages, Koppal Taluk & District with an investment of Rs., 8735.00 crores was apporoved in the 14th State High Level Clearance Committee (SHLCC) meeting held on 17.3.2008.

The Company has submitted proposal to the Revenue Department to grant permission U/s 109 of KLR Act for purchase of about 185 acres of land, against the total extent of 1201 acres 15 guntas as approved by the SHLCC. The proposal for issue of permission u/s 109 of KLR Act is under consideration of the Revenue Department, The proponents are finding it difficult to purchase the balance 1016 acres of land on their own u/s 109 of KLR Act due to resistance from land owners.

But, subsequently, the committee noted that the extent of land is very large and advised the project proponents to bring the maximum consent from the land owners. The Company shall furnish consent from the land owners for minimum 70% of the land proposed for acquisition to KIADB before KIADB initiates acquisition KIADB will help with compulsory acquisition to achieve contiguity of land.

Hence, the following order.

Government Order No. CI 58 SPI 2009, Bangalore, Dated:11th August, 2009

In the circumstances explained above, after detailed discussion the Committee approved the acquisition of 1016 acres of land by KIADB [consent acquisition] instead of permission u/s 109 of KLR Act. The project proponents shall bring owners consents for 70% of the extent of land KIADB will do compulsory acquisition to achieve contiguity.

This approval is valid for a period of two years from the date of issue.

By order and in the name of Governor of Karnataka

P.R. 2079

APARNA PAVATE

Desk Officer (Technical Cell)

Commerce and Industries Department

ಸಹಕಾರ ಸಚಿವಾಲಯ

ವಿಷಯ : ದಿನಾಂಕ:31.3.2009ರೊಳಗೆ ನಡೆಸಬೇಕಾಗಿರುವ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ:ಸಿಒ 47 ಸಿಎಲ್ಎಂ 2009, ದಿನಾಂಕ:4.3.2009.
2. ಸರ್ಕಾರದ ಆದೇಶ ಸಂಖ್ಯೆ:ಸಿಒ 47 ಸಿಎಲ್ಎಂ 2009, ದಿನಾಂಕ:13.5.2009.
3. ಅಧ್ಯಕ್ಷರು, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಇವರ ಪತ್ರ ದಿನಾಂಕ:31.7.2009.

ಪ್ರಸ್ತಾವನೆ:

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಒ 47 ಸಿಎಲ್ಎಂ 2009, ದಿನಾಂಕ:4.3.2009ರ ಆದೇಶದಲ್ಲಿ ನಿಗಧಿಪಡಿಸಿದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ 2009–10ರಿಂದ ಐದು ವರ್ಷದ ಅವಧಿಗೆ ಆಡಳಿತ ಸಮಿತಿಗೆ ಚುನಾವಣೆ ನಡೆಸಬೇಕಾದ ಸಹಕಾರ ಸಂಘಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದೆಂದು ಆದರೆ, ದಿನಾಂಕ:4.3.2009ಕ್ಕೆ ಹಿಂದೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದು ಚುನಾವಣೆಯು ಮುಕ್ತಾಯವಾಗದಿದ್ದ ಸಂದರ್ಭಗಳಲ್ಲಿ ಮಾತ್ರ ದಿನಾಂಕ:4.3.2009ರಲ್ಲಿದ್ದಂತೆ ಚುನಾವಣಾ ವೇಳಾ ಪಟ್ಟಿಯ ಯಾವ ಹಂತದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಿಲ್ಲಿಸಲಾಗಿತ್ತೋ ಆ ಹಂತದಿಂದ ಚುನಾವಣಾ ಪ್ರಕ್ರಿಯೆಯ್ನು ಮುಂದುವರಿಸಿ ದಿನಾಂಕ:4.3.2009ರ ಆದೇಶದಲ್ಲಿ ನಿಗಧಿಪಡಿಸಿದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕದ್ದೆಂದು

ಆದೇಶಿಸಿರುತ್ತದೆ. ಮೇಲೆ ಓದಲಾದ (3)ರ ಪತ್ರದಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ ಇದರ ಅಧ್ಯಕ್ಷರು ತಮ್ಮ ಪತ್ರದಲ್ಲಿ ಸದರಿ ಸಂಘದ ಆಡಳಿತ ಮಂಡಳಿಗೆ 2009-10ರಿಂದ 2013-14ನೇ ಸಾಲಿಗೆ ನಡೆಸಬೇಕಾದ ಚುನಾವಣೆಯನ್ನು ಇಲಾಖೆ ನಿಗದಿಪಡಿಸಿದ ದಿನಾಂಕದ ಬಗ್ಗೆ ತಿಳುವಳಿಕೆ ಇಲ್ಲದೆ ಅಚಾತುರ್ಯವೆಸಗಿರುವ ಪರಿಣಾಮವಾಗಿ ಕನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆಡಳಿತ ಮಂಡಳಿಯ ಚುನಾವಣೆಯನ್ನು ದಿನಾಂಕ:13.4.2009ರಂದು ನಡೆಸಲು ಕಾಲಾವಕಾಶವನ್ನು ವಿಸ್ತರಿಸುವಂತೆ ವಿನಂತಿಸಿರುತ್ತಾರೆ.

ಸದರಿ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಓ 138 ಸಿಎಲ್‌ಎಂ 2009, ಬೆಂಗಳೂರು, ದಿನಾಂಕ:26ನೇ ಆಗಸ್ಟ್, 2009

ಮೇಲಿನ ಪರಿಸ್ಥಿತಿಯಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ (4), 28ಎ(5), 28ಬಿ(2) 29ಎಫ್ (4) ಮತ್ತು 39ಎ(2)ಅನ್ನು ಮಾರ್ಪಾಟು ಮಾಡಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಸಿಓ 47 ಸಿಎಲ್‌ಎಂ 2009, ದಿನಾಂಕ:4.3.2009 ಅನ್ನು ಭಾಗಶಃ ಮಾರ್ಪಡಿಸಿ ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿ ಸಹಕಾರ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ:30.9.2009ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ: ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:30.9.2009ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2080

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಕಂದಾಯ ಸಚಿವಾಲಯ

ವಿಷಯ : 2009-10ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ:ಕಂಇ 167 ಟಿಎನ್‌ಆರ್ 2009, ದಿನಾಂಕ:11.8.2009.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ 2009-10ನೇ ಸಾಲಿನಲ್ಲಿ ರಾಜ್ಯದ 20 ಜಿಲ್ಲೆಗಳ 86 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಈ ಬರಪೀಡಿತ ತಾಲ್ಲೂಕುಗಳಲ್ಲಿ ತುರ್ತು ಬರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಅವಶ್ಯಕತೆ ಇದ್ದು ಮೊದಲ ಹಂತದಲ್ಲಿ ಗುಲ್ಬರ್ಗಾ ವಿಭಾಗದಡಿಯಲ್ಲಿ ಬರುವ ಬರಪೀಡಿತ 30 ತಾಲ್ಲೂಕುಗಳಿಗೆ ಹಾಗೂ ಬೆಳಗಾಂ ವಿಭಾಗದಡಿಯಲ್ಲಿ ಬರುವ 15 ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕಿಗೆ ರೂ. 1 ಕೋಟಿಯಂತೆ ಅನುದಾನವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 137 ಟಿಎನ್‌ಆರ್ 2009, ಬೆಂಗಳೂರು, ದಿನಾಂಕ:27ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಬರಪೀಡಿತವೆಂದು ಘೋಷಿಸಿರುವ 30 ತಾಲ್ಲೂಕುಗಳಲ್ಲಿ ಹಾಗೂ ಬೆಳಗಾಂ ವಿಭಾಗದಲ್ಲಿ ಬರಪೀಡಿತವೆಂದು ಘೋಷಿಸಿರುವ 15 ತಾಲ್ಲೂಕುಗಳಲ್ಲಿ ಬರಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಪ್ರತಿ ತಾಲ್ಲೂಕಿಗೆ ರೂ. 1 ಕೋಟಿಯಂತೆ ಕೆಳಕಂಡಂತೆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1	ಬಳ್ಳಾರಿ	600.00
2	ಕೊಪ್ಪಳ	400.00
3	ರಾಯಚೂರು	500.00
4	ಗುಲ್ಬರ್ಗಾ	1000.00
5	ಬೀದರ್	500.00
6	ಬೆಳಗಾಂ	400.00

7	ಬಾಗಲಕೋಟೆ	400.00
8	ಬಿಜಾಪುರ	500.00
9	ಗದಗ	200.00
	ಒಟ್ಟು	4500.00

(ರೂ. ನಾಲ್ಕು ಸಾವಿರದ ಐದುನೂರು ಲಕ್ಷಗಳು ಮಾತ್ರ)

ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಕೆಳಕಂಡಂತೆ ಬರಪರಿಹಾರ ಕಾರ್ಯಕೈಗೊಳ್ಳಲು ಉಪಯೋಗಿಸುವುದು.

1) ಕುಡಿಯುವ ನೀರು

2) ಮೇವು ಸರಬರಾಜು

3) ಗೋಶಾಲೆ ತೆರೆಯುವುದು

ಕೇಂದ್ರ ಸರ್ಕಾರವು ದಿನಾಂಕ:27.6.2007ರಂದು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚಮಾಡುವುದು, ಹಾಗೂ ಪರಿಹಾರ ಕಾರ್ಯಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಸಿ.ಆರ್.ಎಫ್. ಪಿ.ಡಿ. ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2009–10ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245–01–102–0–00–100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 692 ವೆಚ್ಚ–7/2009 ದಿನಾಂಕ:26.8.2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2081

ಎಂ.ಎಸ್. ದೇಸಾಯಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : 10,000 ಕಿಮೀ. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಕಾಮಗಾರಿಗಳನ್ನು ಪಿಪಿಪಿ ಆಧಾರದ ಮೇಲೆ ಕೈಗೊಳ್ಳುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ:ಲೋಇ 01 ಇಎಪಿ 2009, ಬೆಂಗಳೂರು, ದಿನಾಂಕ:31.3.2009

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ:ಕರಅನಿನಿ/ವ್ಯ.ನಿ./2009–10/ದಿನಾಂಕ:26.6.2009.

ಪ್ರಸ್ತಾವನೆ:

ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2008–09ನೇ ಸಾಲಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಕರ್ನಾಟಕ ರಸ್ತೆ ನಿಧಿಯ ಅಡಿಯಲ್ಲಿ ಲೆಕ್ಕಶೀರ್ಷಿಕೆ "5054–80–800–0–02–172 Roads (ಯೋಜನೆ)" ಅಡಿಯಲ್ಲಿ 250.00 ಕೋಟಿ ರೂ.ಗಳನ್ನು (ಇನ್ನೂರ ಐವತ್ತು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ಬೆಂಗಳೂರು (ನಗರ) ಖಜಾನೆಗೆ ಲೆಕ್ಕ ಶೀರ್ಷಿಕೆ "8449–00–120–9–36 Deposit Account of Karnataka Raod Fund in the Public Account of the State" ಗೆ ವರ್ಗಾಯಿಸಿ ಕ್ರೆಡಿಟ್ ಮಾಡಲು ಸೂಚಿಸಲಾಗಿತ್ತು.

ರಾಜ್ಯದಲ್ಲಿ ಪಿಪಿಪಿ ಯೋಜನೆಯಡಿಯಲ್ಲಿ ಮೊದಲನೇ ಹಂತದಲ್ಲಿ ಸುಮಾರು 10.000ಕಿಮೀ ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಯೋಜಿಸಿದ್ದು, ಯೋಜನಾ ವರದಿಯನ್ನು ತಯಾರಿಸುವ ಸಲುವಾಗಿ Transaction Advisor ಆಗಿ ನೇಮಕವಾಗಿರುವ iDeck ಸಂಸ್ಥೆಗೆ ನೇರವಾಗಿ ವಹಿಸಲಾಗಿದೆ, iDeck ಸಂಸ್ಥೆಯು ಯೋಜನಾ ವರದಿಯಲ್ಲಿನ ತಾಂತ್ರಿಕ ವರದಿಯನ್ನು ತಯಾರಿಸಲು ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಮೇಲಿನ ಯೋಜನಾ ವರದಿಯನ್ನು ತಯಾರಿಸಲು ಸುಮಾರು 16 ಕೋಟಿ ರೂ.ಗಳ ಅವಶ್ಯಕತೆ ಇರುವುದಾಗಿ ಅಂದಾಜಿಸಲಾಗಿದೆ.

ಸಧ್ಯಕ್ಕೆ 7 ಪ್ಯಾಕೇಜುಗಳ ಕಾಮಗಾರಿಗಳನ್ನು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಉದ್ದೇಶಿಸಿದ್ದು ಅವುಗಳ ಯೋಜನಾ ವರದಿ ತಯಾರಿಕೆಯ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರು ಪಿಪಿಪಿ ಯೋಜನೆಯ ಯೋಜನಾ ವರದಿಗಳನ್ನು ತಯಾರಿಸುವ ವೆಚ್ಚಕ್ಕಾಗಿ 16.00ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಿ ಪಿಡಿ ಅಕೌಂಟ್‌ನಲ್ಲಿ ಕ್ರೆಡಿಟ್ ಮಾಡಿರುವ 250.00 ಕೋಟಿ ರೂ.ಗಳಲ್ಲಿ ಸಧ್ಯಕ್ಕೆ 10.00 ಕೋಟಿ ರೂ.ಗಳನ್ನು ಡ್ರಾ ಮಾಡಲು ಮತ್ತು ಈ 10 ಕೋಟಿ ರೂ.ಗಳನ್ನು ವೆಚ್ಚ ಮಾಡಿದ ನಂತರ ಉಳಿದ 6.00 ಕೋಟಿ ರೂ.ಗಳನ್ನು ಡ್ರಾ ಮಾಡಲು ಕರ್ನಾಟಕ ರಸ್ತೆ ಅಬಿವೃದ್ಧಿ ನಿಗಮ ನಿಯಮಿತಕ್ಕೆ ಅನುಮತಿ ನೀಡಲು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಲೋಇ 86 ಇಎಪಿ 2009 ಬೆಂಗಳೂರು, ದಿನಾಂಕ:22ನೇ ಆಗಸ್ಟ್, 2009

2008-09ನೇ ಸಾಲಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಕರ್ನಾಟಕ ರಸ್ತೆ ನಿಧಿಯ ಅಡಿಯಲ್ಲಿ ಲೆಕ್ಕಶೀರ್ಷಿಕೆ "5054-80-800-0-02-172 Roads (ಯೋಜನೆ)" ಅಡಿಯಲ್ಲಿ 250.00 ಕೋಟಿ ರೂ.ಗಳನ್ನು (ಇನ್ನೂರ ಐವತ್ತು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ಬೆಂಗಳೂರು (ನಗರ) ಖಜಾನೆಗೆ ಲೆಕ್ಕ ಶೀರ್ಷಿಕೆ "8449-00-120-9-36 Despoit Account of Karnataka Road Fund in the Public Account of the State" ಗೆ ವರ್ಗಾಯಿಸಿ ಕ್ರೆಡಿಟ್ ಮಾಡಲು ಸೂಚಿಸಲಾಗಿತ್ತು.

ಈ 250.00 ಕೋಟಿ ರೂ.ಗಳ ಮೊತ್ತದಲ್ಲಿ ಸಧ್ಯಕ್ಕೆ 10.00 ಕೋಟಿ ರೂ.ಗಳನ್ನು ಪಿಡಿ ಅಕೌಂಟ್‌ನಿಂದ ಡ್ರಾ ಮಾಡಲು ಮತ್ತು 10.00 ಕೋಟಿ ರೂ.ಗಳನ್ನು ಖರ್ಚು ಮಾಡಿದ ನಂತರ 6.00 ಕೋಟಿ ರೂ.ಗಳನ್ನು ಪಿಪಿಪಿ ಯೋಜನೆಗಳ ಸಲಹೆಗಾರರ ಬಿಲ್ಲು ಪಾವತಿಗಾಗಿ ಡ್ರಾ ಮಾಡಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಅನುಮತಿ ನೀಡಲಾಗಿದೆ.

ಮುಂದುವರೆದು, 16.00 ಕೋಟಿ (ಹದಿನಾರು ಕೋಟಿ ರೂಪಾಯಿಗಳು ಮಾತ್ರ) ರೂ.ಗಳ ಬಿಲ್ಲನ್ನು ಕೆ.ಎಫ್.ಸಿ 17(ಸಿ)4 ರಲ್ಲಿನಂತೆ ಮಹಾಲೇಖಪಾಲರಿಂದ (ಎ ಅಂಡ್ ಇ) ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು; ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುರುಜು ಮಾಡಿಸಿ, ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಲೋಇ 547 ಆಕೋ-1/09 ದಿನಾಂಕ:19.8.2009 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2091

ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ
(ಇಎಪಿ)

ಇಂಧನ ಸಚಿವಾಲಯ

ವಿಷಯ : ಪಿಂಚಣಿ ಹಣ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1 ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಇ 14 ಪಿಎಸ್ ಆರ್ 2002 ದಿನಾಂಕ:31.5.02
2. ಸರ್ಕಾರಿ ಆದೇಶ ಸಂಖ್ಯೆ: ಡಿಇ 15 ಪಿಎಸ್ ಆರ್ 2002 ದಿನಾಂಕ:19.12.02
3. ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳ
ಅ) ಪತ್ರ ಸಂಖ್ಯೆ: ನಿ (ಪಿ ಮತ್ತು ಉಟ್ರಸ್ಟ್) ಕ-21/ಪಿಸ-2/846-848 ದಿನಾಂಕ:5.3.2009
ಆ) ಪತ್ರ ಸಂಖ್ಯೆ: ನಿ (ಪಿ ಮತ್ತು ಉಟ್ರಸ್ಟ್)ಕ-21/ಪಿಸ-2/891-93 ದಿನಾಂಕ:17.3.2009
ಇ) ಪತ್ರ ಸಂಖ್ಯೆ: ನಿ (ಪಿ ಮತ್ತು ಉಟ್ರಸ್ಟ್) ಕ-21/ಪಿಸ-2/11046 ದಿನಾಂಕ:4.5.2009.
4. ಸರ್ಕಾರಿ ಆದೇಶ ಸಂಖ್ಯೆ:ಇಎನ್ 33 ಪಿಎಸ್ಆರ್ 2009 ದಿನಾಂಕ:4.6.2009
5. ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳ ಪತ್ರ ಸಂಖ್ಯೆ: ನಿ(ಪಿ ಮತ್ತು ಉಟ್ರಸ್ಟ್) /ಎಎಒ/ಪಿಸ-1/1370-73 ದಿನಾಂಕ:10.8.2009.

ಪ್ರಸ್ತಾವನೆ:

(1) ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕವಿಪ್ರನಿನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣಾ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು, 2002, ನಿಯಮ 4(13)(1) ಪ್ರಕಾರ

ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಸೇವೆಗಳನ್ನು ಎರಡನೇ ವರ್ಗಾವಣೆ ದಿನಾಂಕ ಜಾರಿಗೆ ಮೊದಲು ಮತ್ತು ಕರ್ನಾಟಕ ವಿದ್ಯುತ್ ಮಂಡಳಿ ಮತ್ತು ಕ.ವಿ.ಪ್ರ.ನಿ.ನಿ.ಗೆ ನಿರ್ದಿಷ್ಟಪಡಿಸಲಾದ ಸಿಬ್ಬಂದಿಯು ಸಲ್ಲಿಸಿದ ಸೇವೆಗಳಿಗಾಗಿ ನಿವೃತ್ತಿ ವೇತನ ನಿಧಿಗಳು ಮತ್ತು ಶಾಸನ ಪ್ರದತ್ತ ಹಾಗೂ ಇತರೇ ಸಿಬ್ಬಂದಿ ಸಂಬಂಧಿತ ನಿಧಿಗಳ ಸಂಗ್ರಹಣೆಗೆ ರಾಜ್ಯ ಸರ್ಕಾರವು ಜವಾಬ್ದಾರಿಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲ ಮತ್ತು ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಎರಡನೇ ವರ್ಗಾವಣೆ ಜಾರಿಯಾದ ಆಯಾಯ ದಿನಾಂಕದಲ್ಲಿದ್ದಂತೆ ನಿಧಿ ಸಂಗ್ರಹಣೆ ಮಾಡದ ಮಟ್ಟಿಗೆ ರಾಜ್ಯ ಸರ್ಕಾರವು ಹೊಣೆಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲವೆಂದು ತಿಳಿಸಲಾಗಿದೆ.

(2) ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ಪ್ರಕಾರ, ಕ.ವಿ.ಪ್ರ.ನಿ.ನಿ. ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ನ್ನು "ಕ.ವಿ.ಪ್ರ.ನಿ.ನಿ. ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳೆಂದು" ಮರುನಾಮಕರಣ ಮಾಡಿ Pay as you go ಪದ್ಧತಿಯನ್ನು ಅನುಸರಿಸಿ ಕ.ವಿ.ಪ್ರ.ನಿ.ನಿ. ಮತ್ತು ಎಸ್ಕಾಂಗಳ ನೌಕರರ ನಿವೃತ್ತಿ ಸೌಲಭ್ಯಗಳನ್ನು (Terminal Benefits) ಪಾವತಿಸಲು ಒಪ್ಪಿಗೆ ನೀಡಿದೆ.

(3) ಮೇಲೆ ಕ್ರಮಾಂಕ–3ರಲ್ಲಿ ಓದಲಾದ ಪತ್ರಗಳಲ್ಲಿ, ಪಿಂಚಣಿ ಹಣ 300ಕೋಟಿ ರೂ.ಗಳನ್ನು ಆರ್ಥಿಕ ವರ್ಷ 2009–10 ಕ್ಕೆ ಪಾವತಿಸಲು ಹಾಗೂ ಹಿಂದಿನ ಬಾಕಿ 489.31 ಕೋಟಿ ರೂ.ಗಳನ್ನು ಪಾವತಿಸಲು ಕ.ವಿ.ಪ್ರ.ನಿ.ನಿ. ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್ ಸರ್ಕಾರವನ್ನು ಕೋರಿರುತ್ತಾರೆ.

(4) 2009–10ನೇ ಸಾಲಿನ ಆಯವ್ಯಯದಲ್ಲಿ "2801–80–101–1–13–106 (ಯೋಜನೇತರ) ಸಹಾಯಧನ" ಲೆಕ್ಕಶೀರ್ಷಿಕೆಯಡಿಯಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗಿರುತ್ತದೆ. ಮೇಲೆ ಕ್ರಮಾಂಕ–4ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕವಿಪ್ರನಿನಿ ಮತ್ತು ಎಲ್ಲಾ ಪಿಂಚಣಿ ಟ್ರಸ್ಟ್‌ಗಳಿಗೆ 100 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

(5) ಮೇಲೆ ಕ್ರಮಾಂಕ–5ರಲ್ಲಿ ಓದಲಾದ ಪತ್ರದಲ್ಲಿ ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಗಳ ಅಧ್ಯಕ್ಷರು ಪ್ರಸ್ತುತ ಸಾಲಿನ ಬಾಕಿ ಮತ್ತು ಹಿಂದಿನ ಬಾಕಿ ಪಿಂಚಣಿ ಹಣವನ್ನು ಪಾವತಿಸಲು ಕೋರಿರುತ್ತಾರೆ.

(6) ಟ್ರಸ್ಟ್‌ಗಳ ಕೋರಿಕೆಯಂತೆ 2009–10ನೇ ಸಾಲಿನಲ್ಲಿ ಎರಡನೇ ಕಂತು 100 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡುವ ಕುರಿತು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಎನ್ 33 ಪಿಎಸ್‌ಆರ್ 2009, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2009

ಸರ್ಕಾರವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ 2009–10ನೇ ಸಾಲಿನಲ್ಲಿ ಹಿಂದಿನ ವರ್ಷಗಳ ಮತ್ತು ಪ್ರಸ್ತುತ ಸಾಲಿನ ಪಿಂಚಣಿ ಪಾವತಿ ಸಲುವಾಗಿ 100 ಕೋಟಿ ರೂ.ಗಳನ್ನು (ನೂರು ಕೋಟಿ ರೂ.ಗಳು ಮಾತ್ರ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿದೆ.

ಸದರಿ ವೆಚ್ಚವನ್ನು "2801–80–101–1–13–106 ಸಹಾಯಧನ (ಯೋಜನೇತರ)" ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆಯವರ ಮೇಲು ರುಜುವನ್ನು ಸ್ವೀಕೃತ ರಸೀದಿಯಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಹಣವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು "ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್ ಗಳಿಗೆ" ಹಣ ಪಡೆದ 2 ದಿನದೊಳಗೆ ಪೂರ್ಣವಾಗಿ ಪಾವತಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

(i) Exact details of the demand for this year validated by actuarial valuation

(ii) Exact outflow that has occurred for 700 or more employees over the years as well as the median number of years, to calculate the outgo per year which could be deducted per year from Government of Karnataka share to reconcile with the approxmimation done.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 449 ವೆಚ್ಚಗಳು–1/2009 ದಿನಾಂಕ:22.8.2009 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2092

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ವಿಷಯ : ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ 2009–10ರ ಹಣಕಾಸು ವರ್ಷದಲ್ಲಿ ಎರಡನೇ ಕಂತಿನ ಸಹಾಯಾನುದಾನ ಬಿಡುಗಡೆ ಕುರಿತು.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ:ಇಎನ್ 39 ಪಿಎಸ್‌ಆರ್ 2009 ದಿನಾಂಕ:25.8.2009.

ಪ್ರಸ್ತಾವನೆ:

1. 2009–10ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು (ಸಂಪುಟ–7)ರಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಹಾಯಾನುದಾನ ರೂಪದಲ್ಲಿ ರೂ. 190.00 ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿದೆ. ಸದರಿ ಸಹಾಯಾನುದಾನವನ್ನು 4 ಕಂತುಗಳಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.
2. ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ 2009–10ರ ಮೊದಲನೇ ತ್ರೈಮಾಸಿಕ ಅವಧಿಗೆ ಸಹಾಯಾನುದಾನ 48 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.
3. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ 2009–10ನೇ ಸಾಲಿಗೆ ಎರಡನೇ ತ್ರೈಮಾಸಿಕ ಅವಧಿಗೆ ಸಹಾಯಾನುದಾನ ರೂ. 45,63,252/–ನ್ನು ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗಕ್ಕೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಎನ್ 39 ಪಿಎಸ್‌ಆರ್ 2009, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2009

ಸರ್ಕಾರವು 2009–10ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕ ಅವಧಿಗೆ "2801–80–101–1–07 (Grant-in-aid)(Non Plan) ರಲ್ಲಿ ಸಹಾಯಾನುದಾನ" ಲೆಕ್ಕ ಶೀರ್ಷಿಕೆಯಡಿ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ ರೂ. 45,63,252/– (ನಲವತ್ತೈದು ಲಕ್ಷದ ಅರವತ್ತ ಮೂರು ಸಾವಿರದ ಇನ್ನೂರೈವತ್ತೆರಡು ರೂ.ಗಳು ಮಾತ್ರ)ನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಿದೆ.

ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗವು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆಯ ಇವರ ಮೇಲು ರುಜುವನ್ನು " Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 21 ಟಿಎಫ್‌ಪಿ 2006 ದಿನಾಂಕ:2.9.2006 ಮತ್ತು ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ:16.5.2008ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2093

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ವಿಷಯ : ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸದಸ್ಯರ ಖಾಲಿ ಇರುವ ಹುದ್ದೆ ಭರ್ತಿ ಮಾಡಲು, ಜಾಹೀರಾತು ಪ್ರಕಟಣೆ ವೆಚ್ಚವನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಮರುಪಾವತಿಸುವ ಬಗ್ಗೆ,

ಓದಲಾಗಿದೆ :

1 ಸರ್ಕಾರಿ ಆದೇಶ ಸಂಖ್ಯೆ:ಇಎನ್ 119 ಪಿಎಸ್‌ಆರ್ 2007 ದಿನಾಂಕ:8.2.2008.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 119 ಪಿಎಸ್‌ಆರ್ 2007 ದಿನಾಂಕ:19.7.2008
3. ಸರ್ಕಾರದ ಪತ್ರ ಸಂಖ್ಯೆ:ಇಎನ್ 20 ಪಿಎಸ್‌ಆರ್ 2008 ದಿನಾಂಕ:29.2.2008
4. ಸರ್ಕಾರಿ ಪತ್ರ ಸಂಖ್ಯೆ:ಇಎನ್ 20 ಪಿಎಸ್‌ಆರ್ 2008 ದಿನಾಂಕ:6.8.2008 & 14.8.2008
5. ವಾರ್ತಾ ಇಲಾಖೆ ಪತ್ರ ಸಂಖ್ಯೆ:ವಾಇ:ವಾಪ್ರವಿ:ಸ2:3393 ದಿನಾಂಕ:1.3.2008
6. ಸರ್ಕಾರಿ ಪತ್ರ ಸಂಖ್ಯೆ:ಇಎನ್ 20 ಪಿಎಸ್‌ಆರ್ 2008 ದಿನಾಂಕ:22.8.2008
7. ಬೆಸ್ಕಾಂ ಪತ್ರ ಸಂಖ್ಯೆ:ಬೆವಿಕಂ/ಬಿಸಿ 32/ಎಮ್/2008–09/009 ದಿನಾಂಕ:2.4.2009

ಪ್ರಸ್ತಾವನೆ:

(1) ಮೇಲೆ ಕ್ರಮಾಂಕ 1 ಮತ್ತು 2 ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಲ್ಲಿ 12–3–2008 ಮತ್ತು 14.7.2008 ರಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸದಸ್ಯರುಗಳ ತೆರವಾದ ಹುದ್ದೆಯನ್ನು ಭರ್ತಿ ಮಾಡಲು, ವಿದ್ಯುಚ್ಛಕ್ತಿ ಅಧಿನಿಯಮ 2003 ಕಲಂ 85 (1)ರ ಪ್ರಕಾರ, ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು.

(2) ಮೇಲೆ ಕ್ರಮಾಂಕ–3 ಮತ್ತು 4 ರಲ್ಲಿ ಓದಲಾದ ಪತ್ರಗಳಲ್ಲಿ ಕವಿಪ್ರನಿಆ ಸದಸ್ಯರ ಹುದ್ದೆಯನ್ನು ತುಂಬಲು, ಅಧಿಸೂಚನೆಯ ಜಾಹಿರಾತನ್ನು, ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ವಾರ್ತಾ ಇಲಾಖೆಯನ್ನು ಕೋರಲಾಗಿತ್ತು

(3) ಮೇಲೆ ಕ್ರಮಾಂಕ-5ರಲ್ಲಿ ಓದಲಾದ ಪತ್ರದಲ್ಲಿ, ಜಾಹೀರಾತು ವೆಚ್ಚವನ್ನು ಸಂಬಂಧಪಟ್ಟ ಪತ್ರಿಕೆದಾರರಿಗೆ ಪಾವತಿಸಲು ವಾರ್ತಾ ಇಲಾಖೆ ಕೋರಿರುತ್ತದೆ.

(4) ಮೇಲೆ ಕ್ರಮಾಂಕ-6ರಲ್ಲಿ ಓದಲಾದ ಪತ್ರದಲ್ಲಿ ವಾರ್ತಾ ಇಲಾಖೆಯಿಂದ ದೃಢೀಕರಿಸಿದ ಜಾಹೀರಾತು ಪ್ರಕಟಿತ ವೆಚ್ಚವನ್ನು ಸಂಬಂಧಪಟ್ಟ ದಿನ ಪತ್ರಿಕೆಯವರಿಗೆ ಸರ್ಕಾರದ ಪರವಾಗಿ ಪಾವತಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ತಿಳಿಸಲಾಗಿತ್ತು.

(5) ಮೇಲೆ ಕ್ರಮಾಂಕ-7ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಜಾಹೀರಾತು ಪ್ರಕಟಣೆಗೊಳಿಸಿ ಸರ್ಕಾರದ ಪರವಾಗಿ ಪಾವತಿಸಿರುವುದಕ್ಕೆ ಈ ಕೆಳಕಂಡಂತೆ ವಿವರಣೆ ನೀಡಿ, ರೂ. 2,36,748/- ಗಳನ್ನು ಮರುಪಾವತಿಸಲು ಕೋರಿರುತ್ತದೆ.

ಕ್ರ ಸಂ.	ವಿವರ	ಬಿಲ್ಲು ಸಂಖ್ಯೆ	ಬಿಲ್ಲು ದಿನಾಂಕ	ಬಿಲ್ಲು ಮೊಬಲಗು ರೂ.	ಒಟ್ಟು ರೂ.	ಬಿಲ್ಲು ಪಾವತಿಸಿದ ಚೆಕ್/ದಿನಾಂಕ
1	Prajavani	ADB 2008011888 ADB2008012525	7.8.2008. 7.8.2008	24,300 25,920	50,220	311510/ 14.10.2008
2	Economic Times	No. 5188570/001 No/. 5188573/001	8.8.2008 13.8.2008	45,00870 856	1,15,864	852508/ 17-1-2009
3	Indian Express	LAB/36506 LAB/36468	8.8.2008 7.8.2008	6,600 5,720	12,320	311505/ 14.10.2008
4	Times of India	No:70855 No. 70856	7.8.2008 8.8.2008	3,3803, 380	6,760	311506/ 14-10-2008
5	Vijaya Karnataka	No.70641 No. 70666	7.8.2008 8.8.2008	25,792 25,792	51,584	311506/ 14.10.2008
	Total				2,36,748	

6 ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಕೋರಿಕೆಯನ್ನು ಪರಿಶೀಲಿಸಿ ರೂ. 2,36,748/-ನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಮರುಪಾವತಿಸಲು ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಎನ್ 39 ಪಿಎಸ್‌ಆರ್ 2009, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಸನ್ನಿವೇಶದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ಅರ್ಜಿಯನ್ನು ಆಹ್ವಾನಿಸಲು ಆಗಸ್ಟ್ 2008 ರ ದಿನಪತ್ರಿಕೆಗಳಲ್ಲಿ, ಜಾಹೀರಾತು ಪ್ರಕಟಿಸಿದ ವೆಚ್ಚ ರೂ. 2,36,748/- (ಎರಡು ಲಕ್ಷ ಮೂವತ್ತಾರು ಸಾವಿರದ ಏಳುನೂರ ನಲವತ್ತೆಂಟು ರೂ.ಗಳು) ಮಾತ್ರ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ "2801-80-101-1-07 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸಹಾಯಾನುದಾನ (ಯೋಜನೇತರ)" ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡಿದೆ,

ವ್ಯವಸ್ಥಾಪಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆಯವರ ಮೇಲು ರುಜುವನ್ನು" Payees Receipt" ನಲ್ಲಿ ಪಡೆದು ಹಣವನ್ನು ನಿರ್ದೇಶಕರು, ರಾಜ್ಯ ಹುಜೂರು ಖಜಾನೆಯವರಿಂದ ಪಡೆಯುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಯು ಅ. ಟಿ ಸಂಖ್ಯೆ : FD 1357 Exp-I 2008 ದಿನಾಂಕ:21.8.2009ರಲ್ಲಿ ನೀಡಿದ ಸಹಮತಿಯ ಮೇರೆಗೆ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2094

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

I -F3 -(O)

WATER RESOURCES SECRETARIAT

Sub: Extension of time for the World Bank assisted Karnataka Community Based Tank Management Project Phase-1 and to take up additional 694 tanks out of savings in the Phase-1 in the uncovered taluks of the same districts- orders reg.

Read:
1. Govt. Order, No. SANIYI 29 JSY 2002, Dated:27.3.2008
2. Letter No. DO No. 3.6.00 FB III dated:29.10.2008
3. Letter dated:21.11.2008 from World Bank.
4. Proceedings of the State Level Co-ordination Committee meeting held on 30.5.2009.
5. Correpondence ending with the letter no. JSYS-Bang-Adm-779/2008-09 dt:20.4.2009 from the Executive Director. JSYS.

PREAMBLE:

Government of Karnataka through a nodal agency Jala Samvardhana Yojana Sangha is already implementing the Karnataka Community Based Tank Management Project (KCBTMP) in 34 taluks of 1 districts in the State (Kolar, Chikkaballapur (New district), Tumkur, Chitradurga, Raichur Haveri, Bagalkot Bidar, Koppal, and Bellary) with World Bank assistance Implementation of Integrated Tank Development Plans in respect of 2005 tanks is already underway at a total project cost of Rs. 670.60 crores consisting of Rs. 530.18 crores from World Bank, Rs., 114.13 crores from the Government of Karnataka and Rs. 26.29 crores from the Tank Users (being community contribution). This has been subsequently reduced to Rs. 508.63 Crores due to allocation to tsunami relief. The objective of the World Bank aided Project is to improve rural livelihoods and reduce poverty by developing and strengthening community based approaches for improving and managing selected Tank Systems.

The World Bank, Govt of India and Govt. of Karnataka were signed the Project agreement on 4.6.2002 and the project commenced with effect from 8.7.2002 The project period was upto 31st Aug 200 and the same was extended upto 31st Jan 2009.

The project was planned to implement 2005 tanks in the selected taluks within the project period however the same could not be achived due to various factors, About 176 takn systems are still under pre planning stage.

The Executiv Committee of the Jala Samvardhana Yojana Sangha in its 20th and 21st meeting held on 14.10.2008 has given the concurrence for extension of closing date upto 31st Jan 2012 and to take up additional 694 taknks under the project at a cost Rs.177.94 Crores out of the likely savings in the Phase-1 Project The Government of India in their letter read at (2) above, conveyed its concurrence to extend the closing date of the original project Karnataka Community Based Tank Management Project (KCBTMP) upto 31st Jan 2012. The Acting Country Director, India, World Bank in his letter read at (3) above has also conveyed the concurrence of the World Bank to extend the closing date of the project upto 31st Jan 2012. The State Level Co-ordination Committee in its meeting held on 30.5.2009 has approved the proposal for extension of time for the Phase-1 project and also to take up additional 694 tanks under the project at cose Rs. 177.94 Crores, which will be met from the anticipated savings in the Phase-1 project.

Hence the following order.

Government Order No. SANIYI 4 JASAMYO 2008, Bangalore, Dated:31st August, 2009

In the circumstances mentioned in the preamble, sanction is accorded (a) for extension of closing date of the Phase-1 project of Karnataka Community Based Tank Management project with World Bank assistance upto 31st Jan 2012 and (b) to take up the additional 694 tanks under the project at a cost of

Rs. 177.94 Crores which will be met from the anticipated savings in the Phase-1 project in the uncovered taluks, of the same districts (Kolar Chikkaballapur (New district), Tumkur, Chitradurga, Raichur, Haveri, Bagalkot, Bida, Koppal, Bellary).

By order and in the name of Governor of Karnataka

P.R. 2095

K. SUDHAKARA SHETTY

Under Secretary to Government

Water Resources Department (Minor Irrigation)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿ (SLDSC) ಯ ಅಧಿಕಾರೇತರ ಸದಸ್ಯರಿಗೆ ನೀಡುವ ಸಭಾ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :

1 ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಅಭಯೋ 2008 ಬೆಂಗಳೂರು, ದಿನಾಂಕ:7.1.2009

2. ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 2 ಎಸ್‌ಆರ್‌ಎ 99 ದಿನಾಂಕ:22.4.1999

3. ಶ್ರೀ ಆರ್.ಹೆಚ್. ಸಾವ್ ಕಾರ್, ಅಧಿಕಾರೇತರ ಸದಸ್ಯರು, ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿ ರವರು ನಿರ್ದೇಶಕರು, ಕ.ಇಂ.ಸಂ.ಕೇ., ಕೆ.ಆರ್. ಸಾಗರರವರಿಗೆ ಬರೆದಿರುವ ಪತ್ರ ದಿ:18.11.2008.

4. ನಿರ್ದೇಶಕರು, ಕ.ಇಂ.ಸಂ.ಕೇ., ಕೆ.ಆರ್. ಸಾಗರ ಇವರ ಪತ್ರ ಸಂಖ್ಯೆ:4487/22-12-2008 ಹಾಗೂ 5529/12.2.2009.

ಪ್ರಸ್ತಾವನೆ:

(1) ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿಯನ್ನು (SLDSC) ಪುನರ್ ರಚಿಸಲಾಗಿದ್ದು, ಈ ಸಮಿತಿಯು ಹಾಲಿ ಚಾಲ್ತಿಯಲ್ಲಿರುತ್ತದೆ. ಸದರಿ ಸಮಿತಿಯ ಅಧಿಕಾರೇತರ ಸದಸ್ಯರುಗಳಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದನ್ವಯ ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಸಭಾ ಭತ್ಯೆಯನ್ನು ನೀಡಲಾಗುತ್ತಿದೆ.

(2) ಮೇಲೆ ಓದಲಾದ ಕ್ರಮ ಸಂಖ್ಯೆ (3) ರನ್ವಯ, ಶ್ರೀ ಆರ್.ಹೆಚ್. ಸಾವಕಾರ್, ಅಧಿಕಾರೇತರ ಸದಸ್ಯರು, ದಿನವೊಂದಕ್ಕೆ SLDSC ನೀಡಲಾಗುವ ರೂ. 150/-ಗಳ ಸಭಾಭತ್ಯೆಯನ್ನು ಹೆಚ್ಚಿಸುವಂತೆ, ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ (ಕ.ಇಂಸಂ.ಕೇ) ಕೃರಾ. ಸಾಗರ ಹಾಗೂ ಸದಸ್ಯ ಕಾರ್ಯದರ್ಶಿ, ರವರನ್ನು SLDSC ರವರನ್ನು ಕೋರಿರುತ್ತಾರೆ.

(3) ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ನಿರ್ದೇಶಕರು, ಕ.ಇಂ.ಸಂ.ಕೇ., ಹಾಗೂ ಸದಸ್ಯ ಕಾರ್ಯದರ್ಶಿ, SLDSC ರವರು ಶ್ರೀ ಆರ್.,ಹೆಚ್. ಸಾವಕಾರ್ ರವರ ಕೋರಿಕೆಯ ಮೇರೆಗೆ SLDSC ಯ ಅಧಿಕಾರೇತರ ಸದಸ್ಯರಿಗೆ ನೀಡಲಾಗುತ್ತಿರುವ ಸಭಾ ಭತ್ಯೆಯನ್ನು ರೂ. 1500/-ಕ್ಕೆ ಹೆಚ್ಚಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

(4) ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಸಭಾಭತ್ಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಜಸಂಇ 03 ಅಭಯೋ 2008, ಬೆಂಗಳೂರು, ದಿನಾಂಕ:1ನೇ ಸೆಪ್ಟೆಂಬರ್, 2009

(1) ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿಯ (SLDSC) ಅಧಿಕಾರೇತರ ಸದಸ್ಯರುಗಳು ಸಭೆ ನಡೆಯುವ ದಿನಗಳಲ್ಲಿ, ದಿನವೊಂದಕ್ಕೆ ರೂ. 1000/-ಗಳ ಸಭಾ ಭತ್ಯೆಯನ್ನು (Sitting fees) ಹಾಗೂ, ನಿಯಮಾನುಸಾರ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಈ ಸಂಬಂಧದ ಬಿಲ್ಲುಗಳನ್ನು ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃರಾ. ಸಾಗರ ರವರು ಪಾವತಿಸಲು ಕ್ರಮ ಕೈಗೊಳ್ಳತಕ್ಕದ್ದು.

(2) ಈ ಮೇಲಿನ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಅಭಯೋ 2008 ಬೆಂಗಳೂರು, ದಿನಾಂಕ:7.1.2009ರೊಡನೆ ಓದಿಕೊಳ್ಳುವುದು ಹಾಗೂ ಈ ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ಈ ಸಮಿತಿಯ ಅಧಿಕಾರೇತರ ಸದಸ್ಯರುಗಳಿಗೆ ನಿಗಧಿಪಡಿಸಿರುವ ಸಭಾಭತ್ಯೆಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಲಾದ ಎಲ್ಲಾ ಸರ್ಕಾರದ ಆದೇಶಗಳನ್ನು ಅಧಿಕ್ರಮಿಸಲಾಗಿದೆ (Superceded).

(3) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಲೋಇ/469/ಆಕೋ–1/09 ದಿನಾಂಕ:20–7–2009ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಪರಶುರಾಮ್
ಸರ್ಕಾರದ ಉಪ ಕಾರ್ಯದರ್ಶಿ (ಕೆ.ಬಿ.ಜೆ.ಎನ್)
ಜಲಸಂಪನ್ಮೂಲ ಇಲಾಖೆ

ಪಿ.ಆರ್. 2096

HEALTH AND FAMILY WELFARE SECRETARIAT

Sub: Hiring of a Consultant for Liquid Waste Management

Read: Govt Order No.HFW (PR) 97 WBA 2009, dt:21.7.2009.

PREAMBLE:

Environment safeguards and Environment Management Planning are an integral part of the Karnataka Health System Development and Reform Project's goals. The Project has ceated a Health Care Waste Management Cell in the Directorate of Health and Family Welfare Services vide G.O. read above. The Cell will monitor all issues related to Health Care Waste Management. Several important posts have also been created in the cell so that the recruited personnel can help implement the objectives of the Environment Mangement Plan of the Project. Liquid Waste Management Plants need to be estableished in various hospitals in the State as part of this activity. They should also conform to the norms of the Karnataka State Pollution Cotrol Board (KSPCB).

In this context, it is also necessary to have a Consultant who can assist the Project in establishing Liquid Waste. Management plants at selected hospitals in the State. Interact with KSPCB in getting the ETP approval, monitor and evaluate Liquid Waste Management facilities at hospitals to provide monthly progress report of ETP plants under construction and other updates.

An Expression of Interest (EoI) was invited from individuals under CQS procedures of the World Bank. The same was published in Vijaya Karnataka and Deccan Herald dt. 20.2.2009 as well as District Tender Bulletin In all, 5 applications were received one of them being a firm. A Committee evaluated the EoIs received Mr. D.N. Ravishankar was found eligible and considered for the consultancy. He was selected as the individual consultant for Liquid Waste Management for a monthly remuneration of Rs. 50.000/- for working 2 half days per week.

Hence, the following order.

Government Order No. HFW (PR) 106 WBA 2009, Bangalore, Dated:27th August, 2009

Under the circumstances mentioned in the preamble, Government are pleased to appoint Sri D.N. Ravishankar as a part-time Consultant for Liquid Waste Management in Karnataka Health System Development and Reform Project who will work for 2 Half Days in a week in the Project Office, for a remuneration of Rs. 50, 000/- per month. He shall however be available for interaction and discussion with the Project authorities as and when informed. He shall attend meetings as and when invited.

Following are the Terms of Reference (ToRs) for the Consultant.

Background:

The Government of Karnataka with the support of the World Bank, has launched a major reform effort to improve the quality and accessibility of health services provided in the State. The effort is in the context of the Karnataka State Integrated Health Policy 2004, which articulates the states long-term vision for the health sector. The Policy states that the mission of the Department of Health and Family Welfare is to "provide quality health care with equity, which is responsive to the needs of the people and it is guided by the principlaes of transparency, accountability and community participation".

The Project constitutes a package of reforms touching several parts of the health system, public and the private These reforms are meant to support the introduction of more transparent and equitable resource allocation criteria better incentive mechanisms, innovative delivery and health financing processes, and eventually better results.

The Environment management programme is an important programme envisaged under the Karnataka Health System Development and Reform Project (KHSDRP). This plan includes environmental management measures (including guidelines for design, construction and operation of hospitals and primary health care facilities, organizational arrangements to implement the training/capacity-building requirements information & commuinication arrangements, consultative processes/ procedures, monitoring arrangements etc.,

An Environmntal Assessment (EA) was carried out to understand the following issues and an Environment Management Plan was therefore prepared:

1) The review of the Indian acts and plicies revealed that the main piece of legislation relevant to this sector is the Bio-Medical Waste (Management and Handling) Rules, 2000, and its various requirements have to be met during implementation.
2) Inadequate planning during the design, construction and operation & maintenance of these primary health care facilities will result in environment problems/issues These issues includes
   a) Inadequate provisions and practices in relation to bio-medical management,
   b) Poor sanitation facilities
   c) Lack of adequate water supply
   d) Poor construction and quality of building facilities and lack of adequate operation & maintenance
   e) Improper sitting of Priamry Health Care Centres /sub-centres and
   f) Lack of awareness on basic good environmental practices.
3) Proper guidelines and best practices should be implemented during the construction of the hospitals and primary health care centres/sub-centres to ensure and maximize the environmental benefits of the EMP. These include guidelines such as those for managing biomedical wastes, sharps, water supply, sewerage & sanitation etc.,
4) Liquid waste management is statutory requirement in hospitals with more than hundred beds. In this regard, KHSDRP is planning to provide Liquid waste management facilities in selected ten hospitals initially in the state.

OBJECTIVES OF CONSULTANT

To assist the Project Administrator in designing installing and managing the Liquid waste Management plant in hospitals under Environment Management programme.

To clarify the role of health staff in the working of the Liquid Waste Management Plant under Environment Management Programme (EMP)

THE TASKS TO BE CARRIED OUT WITH SCHEDULE

To help establish the Liquid Waste Management plant at selected hospitals in the State Under Environment Management Programme of KHSDRP

To interact with KSPCB in getting the ETP approval

To onitorm and evaluate Liquid Waste Management facilities at hospitals.

To provide a monthly progress report of ETP plants under construction and other updates.

PERIOD OF CONSULTANCY

Period of contract is initially for 1 year, extendable on satisfactory performance.

QUALIFICATION & EXPERIENCE

Must have Post graduate qualification in Environmental Engineering

Must have minimum of Ten years working experience in the field

Must have experience in monitoring Sewage treatment plant (STP)/ effluent treatment plant (ETP)/ exposure to Karnataka State Pollution Control Board (KSPCB), its rule, regulations, etc/ any statutory Authority on pollution control measures, rules, procedures, thereon.

METHOD OF SELECTION

individual consultant-CQS selection as per World Bank guidelines and procedures.

REPORTS TO BE FURNISHED BY THE CONSULTANT

Monthly progress report on liquid waste management plant construction, maintence and other issues of ETP plant

Monthly progress reports of ETP plant established at various hospitals.

Annual Reports at the end of year including analytical report of effluents from ETP plant.

Any other works entrusted by the Project Authority regarding EMP.

DATA, INPUT TO BE PROVIDED BY THE CLIENT

Environment Assessment Reports and Environment Management Plan

Office accommodation with an independent computer system.

Services of EMP support staff i.e. the Health Care Waste Management Cell.

Travel expenses for field supervision and monitoring as per entitlement to a Class-1 Officer of the State Govt.

REVIEW COMMITTEE

The performance of Liquid Waste Management Consultant under EMP will be reviewed by the following Committee.

Project Administrator, KHSDRP	Chairman
Chief Administrative Officer, KHSDRP	Member
Joint Director (Medical), DoHFW	Member
Deputy Director (PHCF), KHSDRP	Member Secretary
A representative from Karnataka State Pollution Control Board	Member

- The Consultant shall hand over all such documents, in soft or hard form as and when required by the Project and /or at the end of the Consultancy
- He shall make good for any loss of documents /facilities provided by the Client to him in case of any loss or damage to information.
- He shall submit a monthly report of the assignments taken-up/completed by him, to the Project Administrator, KHSDRP.
- This contract appointment shall not be considered as permanent for any reasons whatsoever.
- During the tenure of contract. He shall keep all the official information that is obtained or collected strictly confidential
- He shall be bound by KCS (Conduct) Rules 1957 and KCS (CCA) Rules as applicable for contract appointment.

❖ In case any of the above conditions is violated, the appointment automatically stands cancelled.

The Consultant shall enter into a contract with the Project authorities. The Deputy Project Administrator-II shall certify the work done by the Consultant each month to facilitate payment of remuneration.

The expenditure in this behalf shall be debited to the Head of Account "2210-06-800-0-84 (P)" under Management and Evaluation (M&E) for the corresponding Financial Year.

By order and in the name of Governor of Karnataka

P.R. 2019

M. SHASHIDHAR

Deputy Secretary to Government KHSDRP

Health and Family Welfare Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಮಾದರಿ ಕರ್ನಾಟಕ ಸಾರ್ವಜನಿಕ ಆರೋಗ್ಯ ಕಾಯ್ದೆಯ ಕರಡನ್ನು ತಯಾರಿಸುವುದಕ್ಕೆ ನೇಮಿಸಿಕೊಳ್ಳಲಾದ ಸಲಹಾ ಸಂಸ್ಥೆಗೆ ಶುಲ್ಕ ಪಾವತಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ/ಕೆಎಸ್‌ಡಿಪಿ/ಎಸ್‌ಪಿಸಿ–36 ದಿನಾಂಕ:1.7.2004.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಆರೋಗ್ಯ ಕಾಯ್ದೆಯನ್ನು ಜಾರಿಗೆ ತರುವ ಉದ್ದೇಶದಿಂದ ಒಂದು ಮಾದರಿ ಸಾರ್ವಜನಿಕ ಆರೋಗ್ಯ ಕಾಯ್ದೆಯ ಕರಡನ್ನು ತಯಾರಿಸುವ ಕಾರ್ಯವನ್ನು ದಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ನಾಗರಬಾವಿ, ಬೆಂಗಳೂರು ಇವರಿಗೆ ವಹಿಸಲು ಮತ್ತು ಈ ಸಂಬಂಧ ರೂ. 7,38,000–00 (+ ಅನ್ವಯವಾಗುವಂತೆ ಸೇವಾ ತೆರಿಗೆ)ಗಳನ್ನು ಸಲಹಾ ಶುಲ್ಕವಾಗಿ ಕಂತುಗಳ ಮೂಲಕ ಸದರಿ ಸಂಸ್ಥೆಗೆ ಪಾವತಿಸಲು ಮೇಲೆ ಓದಲಾದ ದಿನಾಂಕ:1.7.2004 ರ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು. ಈ ಬಗ್ಗೆ ಸದರಿ ಸಂಸ್ಥೆಯೊಂದಿಗೆ ದಿನಾಂಕ:22.7.2004 ರಂದು ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಒಪ್ಪಂದದಂತೆ ಸದರಿ ಸಂಸ್ಥೆಯು ಈ ಬಗ್ಗೆ ಕಾರ್ಯ ಪ್ರಾರಂಭಿಸಿದ ಕೂಡಲೇ ಶೇ 20 ರಷ್ಟು ಹಣವನ್ನು ಪಾವತಿಸಬೇಕಾಗಿದ್ದು, ಅದರಂತೆ, ದಿನಾಂಕ:4.8.2004 ರಂದು ಮೊದಲ ಕಂತಿನಲ್ಲಿ ರೂ. 1,47,600–00+ ಸೇವಾ ತೆರಿಗೆ ರೂ. 14,760–00 ಒಟ್ಟು ರೂ, 1,62,360–00 ಗಳನ್ನು ಪಾವತಿಸಲಾಗಿದೆ. ಒಪ್ಪಂದದಂತೆ ಸದರಿ ಸಂಸ್ಥೆಯು ಸೆಪ್ಟೆಂಬರ್ 2004 ರ ಅಂತ್ಯಕ್ಕೆ ಅಂತಿಮ ಕರಡು ಮಾದರಿ ಕಾಯ್ದೆಯನ್ನು ತಯಾರಿಸಿ ಒದಗಿಸಬೇಕಾಗಿದ್ದು, ಸಂಸ್ಥೆಯು ತಡವಾಗಿ ಅಂದರೆ, ದಿನಾಂಕ:19.8.2006 ರಂದು ಕರಡು ಮಾದರಿ ಕಾಯ್ದೆಯನ್ನು ತಯಾರಿಸಿ ಒದಗಿಸಿರುತ್ತದೆ. ಒಪ್ಪಂದದಂತೆ ಬಾಕಿ ಹಣವನ್ನು ಪಾವತಿಸಲು ಕೋರಿರುತ್ತಾರೆ. ಸದರಿ ಸಂಸ್ಥೆಯು ವಹಿಸಿದ ಕಾರ್ಯವನ್ನು ಒಪ್ಪಂದದ ಅವಧಿಯೊಳಗೆ ಪೂರ್ಣಗೊಳಿಸದೇ ಇರುವುದರಿಂದ, ಯೋಜನೆಯೊಂದಿಗೆ ದಿನಾಂಕ:12.8.2009 ರಂದು ಒಂದು ಹೊಸ ಒಪ್ಪಂದವನ್ನು ಸಹಿ ಮಾಡಿ ರೂ. 1,47,600–00 ಗಳ 2ನೇ ಕಂತಿನ ಸಲಹಾ ಶುಲ್ಕವನ್ನು ಪಡೆದುಕೊಂಡು, ಈ ಕಾರ್ಯಕ್ಕಾಗಿ ಅಂತಿಮ ಶುಲ್ಕ ಪಾವತಿ ಎಂದು ಪರಿಗಣಿಸಿ ಒಪಪಂದವನ್ನು ಮುಕ್ತಾಯಗೊಳಿಸಲು ಒಪ್ಪಿರುತ್ತದೆ. ಅದರಂತೆ ಸದರಿ ಸಂಸ್ಥೆಗೆ 2ನೇ ಹಾಗೂ ಕೊನೆಯ ಕಂತಿನ ಶುಲ್ಕ ಪಾವತಿ ಮಾಡಲು ಸರ್ಕಾರದ ಮಂಜೂರಾತಿ ಅವಶ್ಯವಿರುತ್ತದೆ. ಆದ್ದರಿಂದ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ (ಪಿಆರ್) 114 ಡಬ್ಲ್ಯೂಬಿಎ 2009, ಬೆಂಗಳೂರು,
ದಿನಾಂಕ: 25ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಾದರಿ ಕರ್ನಾಟಕ ಸಾರ್ವಜನಿಕ ಆರೋಗ್ಯ ಕಾಯ್ದೆಯ ಕರಡನ್ನು ತಯಾರಿಸಿರುವ ಸಂಬಂಧದಲ್ಲಿ, ದಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ನಾಗರಬಾವಿ, ಬೆಂಗಳೂರು, ಇವರಿಗೆ ರೂ 1,47,600–00 (ರೂ. ಒಂದು ಲಕ್ಷ ನಲವತ್ತೇಳು ಸಾವಿರ ಆರುನೂರು ಮಾತ್ರ)ಗಳು + ಅನ್ವಯಿಸುವ ದರದಲ್ಲಿ ಸೇವಾ ತೆರಿಗೆ ಸೇರಿದಂತೆ 2ನೇ ಹಾಗೂ ಕೊನೆಯ ಕಂತಿನ ಶುಲ್ಕವನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ ಪಾವತಿಸಲು, ಸರ್ಕಾರವು ಮಂಜೂರಾತಿ ನೀಡಿದೆ.

ಈ ಮೊತ್ತವನ್ನು ದಿ ನ್ಯಾಷನಲ್ ಲಾ ಸ್ಕೂಲ್ ನಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಇವರಿಂದ ಬಿಲ್ ಪಡೆದು ಡಿಸಿ. ಬಿಲ್ ಮೂಲಕ ಖಜಾನೆಯಿಂದ ಹಣ ಸೆಳೆದು ಸದರಿ ಸಂಸ್ಥೆಗೆ ವಿತರಿಸತಕ್ಕದ್ದು.

ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ "2210-06-800-0-81 (015) ಪೂರಕ ವೆಚ್ಚಗಳು" ಅಡಿಯಲ್ಲಿ 2009-10ನೇ ಸಾಲಿನಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2020

ಎಂ. ಶಶಿಧರ್

ಸರ್ಕಾರದ ಉಪ ಕಾರ್ಯದರ್ಶಿ ಕೆಹೆಚ್‌ಎಸ್‌ಡಿಆರ್‌ಪಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಆರ್. ಮಹದೇವಶೆಟ್ಟಿ, ಪ್ರ.ದ.ಸ., 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣಾ ಮೇಲ್ಮನವಿ ಅರ್ಜಿ ಬಗ್ಗೆ.

ಓದಲಾಗಿದೆ :
1) ದೋಷಾರೋಪಣೆ ಪತ್ರ ದಿನಾಂಕ :24.,2.2005.
2) ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ರವರ ಪತ್ರ ಸಂಖ್ಯೆ :ಸಿಬ್ಬಂದಿ –4/ಡಿಇ–48/2004–05 ದಿನಾಂಕ :30.3.2005.
3) ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ (ಆಡಳಿತ)ಕೆ.ಎಸ್.ಆರ್.ಪಿ. ಬೆಂಗಳೂರು ಇವರ ಆದೇಶ ಸಂಖ್ಯೆ :ಅಪೀಲು /.10/2005–2006 ದಿನಾಂಕ :19.1.2007.
4) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ :2.1.2008
5) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ :ಅಪೀಲು (2) 116/2007–2008 ದಿನಾಂಕ :25.7.2008 ಮತ್ತು 19.2.2009.
6) ಕರ್ನಾಟಕ ಲೋಕಸೇವಾ ಆಯೋಗ ರವರ ಪತ್ರ ಸಂಖ್ಯೆ ಪಿಎಸ್‌ಸಿ 76/ಸಿಎನ್‌ಎಸ್/09 ದಿನಾಂಕ :21.7.2009

ಪ್ರಸ್ತಾವನೆ:

ಶ್ರೀ ಆರ್. ಮಹದೇವಶೆಟ್ಟಿ , ಪ್ರ.ದ.ಸ. 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ನಗದು ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಕೆ.ಎಸ್.ಆರ್.ಪಿ. ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಇದರ ಸದಸ್ಯರ ಸಾಲ ಮರುಪಾವತಿ ಹಣವನ್ನು ಸಕಾಲಕ್ಕೆ ಬ್ಯಾಂಕಿಗೆ ಜಮಾ ಮಾಡದೆ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಪ್ರದರ್ಶಿಸಿದ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿಗಳು, 1957ರ ನಿಯಮ 12ರಡಿ ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ದೋಷಾರೋಪಣೆ ಪತ್ರವನ್ನು ಹೊರಡಿಸಲಾಗಿರುತ್ತದೆ.

ಸದರಿ ದೋಷಾರೋಪಣೆಗಳಿಗೆ ಶ್ರೀ ಆರ್. ಮಹದೇವ ಶೆಟ್ಟಿ, ಪ್ರ.ದ.ಸ. ರವರು ಸಲ್ಲಿಸಿದ ಲಿಖಿತ ವಿವರಣೆಯನ್ನು ಒಪ್ಪದೆ ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಸದರಿಯವರು ಪತ್ತಿನ ಸಹಕಾರ ಸಂಘ ನಿಯಮಿತ, ಕೋರಮಂಗಲ, ಬೆಂಗಳೂರು ಇಲ್ಲಿಗೆ ಮರುಪಾವತಿಸಬೇಕಾದ ಸಾಲದ ಹಣವನ್ನು ಸಕಾಲಕ್ಕೆ ಸಂಬಂಧಪಟ್ಟ ಬ್ಯಾಂಕ್‌ಗೆ ಜಮಾ ಮಾಡದೇ ಇದ್ದ ಕಾರಣ ಸಂಘದಿಂದ ಸಾಲ ಪಡೆದ ಸಂಬಂಧಿಸಿದ ಸದಸ್ಯರಿಗೆ ಹೊರೆಯಾದ ಹೆಚ್ಚಿನ ಬಡ್ಡಿ ಹಣ ರೂ. 4,056–00 (ರೂಪಾಯಿ ನಾಲ್ಕು ಸಾವಿರದ ಐವತ್ತಾರು ಮಾತ್ರ) ಗಳನ್ನು ಅವರ ಸಂಬಳದಿಂದ ಕಡಿತಗೊಳಿಸಲಾಗುವುದು ಹಾಗೂ ಸದರಿಯವರ ವಾರ್ಷಿಕ ಮುಂಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನಕ್ಕೆ ಧಕ್ಕೆಯಾಗದಂತೆ ಮುಂದೂಡಿ ದಂಡನೆ ವಿಧಿಸಿರುವರು.

ಸದರಿ ದಂಡನಾ ಆದೇಶದ ವಿರುದ್ಧ ಆಪಾದಿತರು ಮೇಲ್ಮನವಿಯನ್ನು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕೆ.ಎಸ್.ಆರ್.ಪಿ. ಬೆಂಗಳೂರು ರವರಿಗೆ ಸಲ್ಲಿಸಿರುತ್ತಾರೆ. ಮೇಲೆ (3) ರಲ್ಲಿ ಓದಲಾದ ಆದೇಶದಲ್ಲಿ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ಆದ್ದರಿಂದ ಆಪಾದಿತರು ಈ ಎರಡು ಆದೇಶಗಳ ವಿರುದ್ಧ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಮೇಲೆ ಓದಲಾದ (4)ರಲ್ಲಿ ಸಲ್ಲಿಸಿರುತ್ತಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಶಿಸ್ತು ಪ್ರಾಧಿಕಾರವು ಹೊರಡಿಸಿರುವ ದಂಡನಾ ಆದೇಶವನ್ನು ಭಾಗಶಃ ಪರಿಷ್ಕರಿಸಲು ನಿರ್ಣಯಿಸಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಮೇಲೆ ಓದಲಾದ (6)ರ ಪತ್ರದಲ್ಲಿ ಪಡೆಯಲಾಗಿರುತ್ತದೆ. ಅದರನ್ವಯ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 20 ಪೊಸಿಲಿ 2009, ಬೆಂಗಳೂರು, ದಿನಾಂಕ: 22ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 26(ಎ) ಪ್ರಕಾರ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್. ಮಹದೇವಶೆಟ್ಟಿ, ಪ್ರಥಮ ದರ್ಜೆ ಸಹಾಯಕ, 3ನೇ ಪಡೆ, ಕೆ.ಎಸ್.ಆರ್.ಪಿ. ಬೆಂಗಳೂರು ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಮುಂದೂಡುವ ದಂಡನೆಯನ್ನು ರದ್ದುಗೊಳಿಸಿ ಇವರ ವೇತನದಿಂದ ಕಟಾಯಿಸಿರುವ ಬಡ್ತಿ ಮೊತ್ತ ರೂ. 4,056/–ನ್ನು ದಂಡನೆ ಎಂದು ಪರಿಗಣಿಸದೇ ಇರಲು ಆದೇಶಿಸಿದೆ. ಸದರಿಯವರಿಗೆ ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 8(2)ರನ್ವಯ "ವಾಗ್ದಂಡನೆ" ವಿಧಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2059

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಾರ್ಮಿಕ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲಾದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ :ಕಾಇ 76 ಇಟಿಐ 2001 ದಿನಾಂಕ :30/1/2003

2) ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ :ಉತನಿ/ತರಬೇತಿ/ಯೋ02/ವಿವ–35/2002–03 ದಿನಾಂಕ: 5.10.2005 ಮತ್ತು 17.12.2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲಾದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಈ ಕೆಳಗಿನ ಹುದ್ದೆಗಳನ್ನು ಬಡ್ತಿ ಮೂಲಕ ಅಥವಾ ವರ್ಗಾವಣೆ ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡಲಾಗಿತ್ತು.

1)	ಪ್ರಾಚಾರ್ಯರು ದರ್ಜೆ–2	– 1
2)	ತರಬೇತಿ ಅಧಿಕಾರಿ	– 1
3)	ಕಿರಿಯ ತರಬೇತಿ ಅಧಿಕಾರಿ	– 5
	ಒಟ್ಟು	– 7

ಮೇಲೆ (2)ರಲ್ಲಿ ಓದಲಾದ ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರಗಳಲ್ಲಿ ಪ್ರಸ್ತುತ ಇಲಾಖೆಯಲ್ಲಿ ಬಹಳ ಹುದ್ದೆಗಳು ಖಾಲಿ ಇರುವ ಕಾರಣ ಬಡ್ತಿ ಅಥವಾ ಮರುಹೊಂದಾಣಿಕೆ ಮೂಲಕ ಹುದ್ದೆಗಳನ್ನು ತುಂಬಲು ಕಷ್ಟಕರವಾಗಿದ್ದು ಆರ್ಥಿಕ ಮಿತವ್ಯಯ ನೀತಿಯನ್ನು ಸಡಿಲಿಸಿ, ಸದರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಈ ಕೆಳಗಿನ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ಪ್ರಾಚಾರ್ಯರು (2ನೇ ದರ್ಜೆ)	1
2	ತರಬೇತಿ ಅಧಿಕಾರಿ	1
3	ಕಿರಿಯ ತರಬೇತಿ ಅಧಿಕಾರಿ (9 ಘಟಕಗಳಿಗೆ ತಲಾ ಒಬ್ಬರಂತೆ ಡ್ರಾಯಿಂಗ್ ಹಾಗೂ ಕಾರ್ಯಗಾರ ಗಣಿತಕ್ಕೆ ತಲಾ ಒಬ್ಬರಂತೆ)	11
4	ಕಛೇರಿ ಅಧೀಕ್ಷಕರು	1
5	ಪ್ರಥಮ ದರ್ಜೆ ಸಹಾಯಕರು	2
6	ಉಗ್ರಾಣ ಪಾಲಕ (ಪ್ರ.ದ.ಸ)	1
7	ದ್ವಿತೀಯ ದರ್ಜೆ ಸಹಾಯಕರು	2
8	ಬೆರಳಚ್ಚುಗಾರರು	1

9	ಕಾರ್ಯಗಾರ ಸಹಾಯಕ	4
10	ಗ್ರೂಪ್-ಡಿ	3
ಒಟ್ಟು		27

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 279 ಇಟಿಐ 2007, ಬೆಂಗಳೂರು, ದಿನಾಂಕ:28ನೇ ಆಗಸ್ಟ್, 2009

2002-03ನೇ ಸಾಲಿನಲ್ಲಿ ಮಂಜೂರಾದ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲಾದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಗ್ರೂಪ್-ಡಿ ಹುದ್ದೆಗಳನ್ನು ಬಾಹ್ಯ ಮೂಲಗಳಿಂದ ಭರ್ತಿ ಮಾಡಬೇಕೆಂಬ ಷರತ್ತಿಗೊಳಪಟ್ಟು, ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ಪ್ರಾಚಾರ್ಯರು ದರ್ಜೆ-2	01
2	ತರಬೇತಿ ಅಧಿಕಾರಿ	01
3	ಕಿರಿಯ ತರಬೇತಿ ಅಧಿಕಾರಿ	10
4	ಕಛೇರಿ ಅಧೀಕ್ಷಕರು	01
5	ಪ್ರಥಮ ದರ್ಜೆ ಸಹಾಯಕರು	01
6	ದ್ವಿತೀಯ ದರ್ಜೆ ಸಹಾಯಕರು	01
7	ಕಾರ್ಯಗಾರ ಸಹಾಯಕ	05
8	ಗ್ರೂಪ್-ಡಿ	02
	ಒಟ್ಟು	22

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ 3 ಜಶ 2009 ದಿನಾಂಕ:3.3.2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 176 ವೆಚ್ಚ-9/09 ದಿನಾಂಕ:18.8.2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2102

ಎ.ಎಸ್. ವಿಶ್ವೇಶ್ವರಯ್ಯ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ವಿಷಯ : ಹುದ್ದೆಗಳ ಸ್ಥಳಾಂತರದ ಬಗ್ಗೆ.

ಓದಲಾಗಿದೆ : ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ :ಉತನಿ/ಉನಿ(ಉ)/ವಿವ-1/2009-10 ದಿನಾಂಕ : 30.7.2009.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಬಿಜಾಪುರ ಗುಲ್ಬರ್ಗಾ ಮತ್ತು ಹುಬ್ಬಳ್ಳಿಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭಿಸಲು ಸಹಾಯಕವಾಗುವಂತೆ ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಧಾರವಾಡ ಇಲ್ಲಿನ ಗ್ರೂಪ್-ಎ ವೃಂದದ ಸಹಾಯಕ ನಿರ್ದೇಶಕರ ಹುದ್ದೆಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹುಬ್ಬಳ್ಳಿ ಇಲ್ಲಿಗೆ ಸ್ಥಳಾಂತರಿಸಲು ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹುಬ್ಬಳ್ಳಿ ಇಲ್ಲಿನ ಗ್ರೂಪ್-ಬಿ ವೃಂದದ ಉದ್ಯೋಗಾಧಿಕಾರಿ ಹುದ್ದೆಯನ್ನು ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಧಾರವಾಡ ಇಲ್ಲಿಗೆ ಸ್ಥಳಾಂತರಿಸಲು ಆಡಳಿತಾತ್ಮಕ ಆದೇಶ ನೀಡುವಂತೆ ಕೋರುತ್ತಾ, ಕ್ರಮವಾಗಿ ಹುಬ್ಬಳ್ಳಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಡಿ.ಡಿ.ಓ ಕಾರ್ಯಗಳನ್ನು ಸಹಾಯಕ ನಿರ್ದೇಶಕರಿಗೆ ಮತ್ತು ಧಾರವಾಡ ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರದ ಡಿ.ಡಿ.ಓ. ಕಾರ್ಯಗಳನ್ನು ಉದ್ಯೋಗಾಧಿಕಾರಿಗಳಿಗೆ ವಹಿಸಿ ಆದೇಶ ಹೊರಡಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 36 ಇಟಿಎಕ್ಸ್ 2009, ಬೆಂಗಳೂರು, ದಿನಾಂಕ:28ನೇ ಆಗಸ್ಟ್, 2009

ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಧಾರವಾಡ ಇಲ್ಲಿನ ಗ್ರೂಪ್-ಎ ವೃಂದದ ಸಹಾಯಕ ನಿರ್ದೇಶಕರ ಹುದ್ದೆಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹುಬ್ಬಳ್ಳಿ ಇಲ್ಲಿಗೆ ಸ್ಥಳಾಂತರಿಸಲು ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹುಬ್ಬಳ್ಳಿ ಇಲ್ಲಿನ ಗ್ರೂಪ್-ಬಿ ವೃಂದದ ಉದ್ಯೋಗಾಧಿಕಾರಿ ಹುದ್ದೆಯನ್ನು ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಧಾರವಾಡ ಇಲ್ಲಿಗೆ ಸ್ಥಳಾಂತರಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಲ್ಲದೇ ಕ್ರಮವಾಗಿ ಹುಬ್ಬಳ್ಳಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಡಿ.ಡಿ.ಒ. ಕಾರ್ಯಗಳನ್ನು ಸಹಾಯಕ ನಿರ್ದೇಶಕರಿಗೆ ಮತ್ತು ಧಾರವಾಡ ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರದ ಡಿ.ಡಿ.ಒ. ಕಾರ್ಯಗಳನ್ನು ಉದ್ಯೋಗಾಧಿಕಾರಿಗಳಿಗೆ ವಹಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2103

ಎ.ಎಸ್. ವಿಶ್ವೇಶ್ವರಯ್ಯ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಡಿ.ಬಿ. ನಾಯಕ್ ಕೆ.ಎ.ಎಸ್ (ಸೂಪರ್ ಟೈಂ ಸ್ಕೇಲ್) ರವರ ಅಮಾನತ್ತನ್ನು ರದ್ದುಗೊಳಿಸಿ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಸರ್ಕಾರಿ ಆದೇಶ ಸಂ: ಸಿಆಸುಇ 68 ಕೆಇವಿ 2008, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2009

ಶ್ರೀ ಡಿ.ಬಿ. ನಾಯಕ್ ಕೆ.ಎ.ಎಸ್ (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಹಿಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್, ಬೆಳಗಾಂ, ಬೆಳಗಾಂ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂ:ಸಿಆಸುಇ 68 ಕೆಇವಿ 08 ದಿ:28-10-08 ರಲ್ಲಿ ಇವರನ್ನು ದಿ:19.9.08 ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ.

ಶ್ರೀ ಡಿ.ಬಿ. ನಾಯಕ್, ಕೆ.ಎ.ಎಸ್ (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಅವರ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ಭಾವಿಸಿರುವುದರಿಂದಲೂ,

ಆದ್ದರಿಂದ ಸರ್ಕಾರವು ಶ್ರೀ ಡಿ.ಬಿ. ನಾಯಕ್, ಕೆ.ಎ.ಎಸ್ (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2104

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ನದಿಗೆ ಹರಿಯುವ ಮಲೀನ ನೀರನ್ನು ವಿಭಜಿಸುವ ಕಾಮಗಾರಿಗಳಡಿಯಲ್ಲಿ ಭದ್ರಾವತಿ ಮಲೀನ ನೀರು ಶುದ್ಧೀಕರಣ ಘಟಕ ಸ್ಥಾಪನೆಯ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1) ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ರವರ ಪತ್ರ ಸಂಖ್ಯೆ :ಕಜಮಂ :ಮುಅ:ಡಿಸಿಇ(ಸಿ) :ತಾಸ-5:ಸ.ಅ-3:3611:2008-09,ದಿನಾಂಕ :10.2.2009.

2) ದಿನಾಂಕ :13.3.2009ರಂದು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು, ರಾಷ್ಟ್ರೀಯ ನದಿ ಸಂಕ್ಷಾರಣಾ ಯೋಜನೆಯಡಿ ನದಿಗೆ ಹರಿಯುವ ಮಲೀನ ನೀರನ್ನು ವಿಭಜಿಸುವ ಮತ್ತು ಒಳಚರಂಡಿ ಮಲೀನ ನೀರು ಶುದ್ಧೀಕರಣ ಘಟಕ ಕಲ್ಪಿಸುವ ಯೋಜನೆಗಳ ಅನುಮೋದನೆಯನ್ನು ಎಂಟು ಪಟ್ಟಣಗಳಿಗೆ ನೀಡಲಾಗಿದ್ದು. ಅವುಗಳ ಪೈಕಿ ಭದ್ರಾವತಿ ಪಟ್ಟಣದ ಐ & ಡಿ (ನದಿಗೆ ಹರಿಯುವ ಮಲೀನ ನೀರನ್ನು

ವಿಭಜಿಸುವ ಕಾಮಗಾರಿ)ಗೆ ರೂ. 190.95 ಲಕ್ಷಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತ್ತಿದ್ದು. ಸದರಿ ಮೊತ್ತದಲ್ಲಿ ರೂ. 87.83 ಲಕ್ಷಗಳನ್ನು ಕೇಂದ್ರ ಸರ್ಕಾರದಿಂದ ಹಾಗೂ ರೂ. 103.12 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಭರಿಸಲು ಸೂಚಿಸಲಾಗಿತ್ತೆಂದು ತಿಳಿಸಿರುತ್ತಾರೆ. ಇದಲ್ಲದೆ ಸದರಿ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳುವಾಗ ಸ್ಕ್ರೀನ್ ಮತ್ತು ಗ್ರಿಟ್ ಚೇಂಬರ್‌ನ ಅಗೆತ, ಆರ್.ಸಿ.ಸಿ. ಕೊಳವೆ ಬದಲು ಡಿ.ಐ.ಏರು ಕೊಳವೆ ಮಾರ್ಗ ಮತ್ತು 2 ಸಂಖ್ಯೆ ಹೆಚ್ಚುವರಿ ವೆಟ್‌ವೆಲ್‌ಗಳನ್ನು ನಿರ್ಮಾಣ ಮಾಡುವಾಗ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಹೆಚ್ಚುವರಿ ಕಾಮಗಾರಿಗಳಿಂದ ಯೋಜನೆಯ ಅಂದಾಜು ಮೊತ್ತವು ಮೂಲ ಅಂದಾಜು ಮೊತ್ತಕ್ಕಿಂತ ರೂ. 84.05 ಲಕ್ಷಗಳಿಗೆ ಹೆಚ್ಚುವರಿಯಾಗಿರುತ್ತದೆ. ಯೋಜನೆಯ ಪರಿಷ್ಕೃತ ಅಂದಾಜು ರೂ. 275.00 ಲಕ್ಷಗಳಿಗೆ ಅನುಮೋದನೆ ಮತ್ತು ಹೆಚ್ಚುವರಿ ಮೊತ್ತ ಬಿಡುಗಡೆಗಾಗಿ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆರವರನ್ನು ಕೋರಲಾಗಿತ್ತೆಂದು, ಆದರೆ ಹೆಚ್ಚುವರಿ ಮೊತ್ತವಾದ ರೂ. 84.05 ಲಕ್ಷಗಳನ್ನು ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯಿಂದ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ಭದ್ರಾವತಿ ಐ&ಡಿ ಕಾಮಗಾರಿಯ ಉಪಯುಕ್ತತೆಯನ್ನು ಪರಿಗಣಿಸಿ ಸದರಿ ಮೊತ್ತವನ್ನು ನಗರಾಭಿವೃದ್ಧಿ ಇಲಾಖೆಯಿಂದ ಪಡೆದುಕೊಳ್ಳಲು ತಿಳಿಸಿರುವುದಾಗಿ ವರದಿ ಮಾಡಿ ಹೆಚ್ಚುವರಿ ಮೊತ್ತ ರೂ. 84.05 ಲಕ್ಷಗಳನ್ನು ಬಿಡುಗಡೆ ಮಾಡಲು ಹಾಗೂ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಸಭೆಯಲ್ಲಿ ಭದ್ರಾವತಿ ಐ&ಡಿ ಕಾಮಗಾರಿಯ ಉಪಯುಕ್ತತೆಯನ್ನು ಪರಿಗಣಿಸಿ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಯ ಹೆಚ್ಚುವರಿ ಮೊತ್ತವಾದ ರೂ. 84.05 ಲಕ್ಷಗಳನ್ನು ನಗರಾಭಿವೃದ್ಧಿ ಇಲಾಖೆಯು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ನಿರ್ಣಯಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಯೋಜನೆಯ ಹೆಚ್ಚುವರಿ ಮೊತ್ತವನ್ನು ನಗರಾಭಿವೃದ್ಧಿ ಇಲಾಖೆಯ ಎಸ್.ಎಫ್.ಸಿ ಅನುದಾನದಲ್ಲಿ "Global Provision" ರಡಿಯಲ್ಲಿ "ಸ್ಥಳೀಯ ಸಂಸ್ಥೆಗಳ ಪಂಚಿಕೆ/ಯೋಜನೆಗಳ ಹಂಚಿಕೆಯಡಿಯಲ್ಲಿ" ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಿಗಧಿ ಮಾಡಿರುವ ಮೊತ್ತದಲ್ಲಿ ಬಿಡುಗಡೆ ಮಾಡಲು ತೀರ್ಮನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 113 ಯುಎಂಎಸ್ 2008, ಬೆಂಗಳೂರು, ದಿನಾಂಕ:26ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ನದಿಗೆ ಹರಿಯುವ ಮಲೀನ ನೀರನ್ನು ವಿಭಜಿಸುವ ಕಾಮಗಾರಿಗಳಡಿಯಲ್ಲಿ ಭದ್ರಾವತಿ ಮಲೀನ ಶುದ್ಧೀಕರಣ ಘಟಕ ಸ್ಥಾಪನೆಯ ಪರಿಷ್ಕೃತ ಅಂದಾಜು ರೂ. 275.00 ಲಕ್ಷಗಳಲ್ಲಿ ಈಗಾಗಲೇ ಮಂಜೂರಾಗಿರುವ ರೂ. 190.95 ಲಕ್ಷಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಅವಶ್ಯವಿರುವ ಮೊತ್ತ ರೂ. 84.05 ಲಕ್ಷಗಳನ್ನು (ಎಂಬತ್ತು ನಾಲ್ಕು ಲಕ್ಷ ಮತ್ತು ಐದು ಸಾವಿರ ರೂ.ಗಳು ಮಾತ್ರ) ನಗರಾಭಿವೃದ್ಧಿ ಇಲಾಖೆಯ ಎಸ್.,ಎಫ್.ಸಿ ಅನುದಾನದಲ್ಲಿ "Global Provision" ರಡಿಯಲ್ಲಿ "ಸ್ಥಳೀಯ ಸಂಸ್ಥೆಗಳ ಪಂಚಿಕೆ/ಯೋಜನೆಗಳ ಹಂಚಿಕೆಯಡಿ" ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಿಗಧಿ ಮಾಡಿರುವ ಮೊತ್ತದಲ್ಲಿ ಭರಿಸಲು ಮತ್ತು ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 275.00 ಲಕ್ಷಗಳಿಗೆ (ರೂ. ಎರಡು ನೂರ ಎಪ್ಪತ್ತೈದು ಲಕ್ಷಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ನ್ನು ಪಾಲಿಸುವುದು.
2) ಸದರಿ ಯೋಜನೆಗೆ ಇನ್ನು ಮುಂದೆ ಯಾವುದೇ ರೀತಿಯ ಹೆಚ್ಚಿನ ಮೊತ್ತವನ್ನು ಬಿಡುಗಡೆ ಮಾಡಲಾಗುವುದಿಲ್ಲ.
3) ಕಾಮಗಾರಿಗಳನ್ನು ಎಲ್ಲಾ ರೀತಿಯಿಂದಲೂ ಪೂರ್ಣಗೊಳಿಸಿ ಕೇಂದ್ರ ಸರ್ಕಾರದ ಸೂಚನೆಯಂತೆ ಸ್ಥಳೀಯ ಸಂಸ್ಥೆಗೆ ಸೂಕ್ತ ನಿರ್ವಹಣೆಗಾಗಿ ವಹಿಸತಕ್ಕದ್ದು.
4) ಯೋಜನೆಯ ಹೆಚ್ಚುವರಿ ಮೊತ್ತವಾದ ರೂ. 84.05 ಲಕ್ಷಗಳನ್ನು ನಗರಾಭಿವೃದ್ಧಿ ಇಲಾಖೆಯ ಎಸ್.ಎಫ್.ಸಿ. ಅನುದಾನದಲ್ಲಿ "Global Provision" ರಡಿಯಲ್ಲಿ "ಸ್ಥಳೀಯ ಸಂಸ್ಥೆಗಳ ಪಂಚಿಕೆ/ಯೋಜನೆಗಳ ಹಂಚಿಕೆಯಡಿ" ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಿಗಧಿ ಮಾಡಿರುವ ಮೊತ್ತದಲ್ಲಿ ಸೇರಿಸಿ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಜರೂರಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2105

ಸಿ.ಟಿ. ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಕಂದಾಯ ಸಚಿವಾಲಯ

ವಿಷಯ : 2009-10ನೇ ಸಾಲಿನಲ್ಲಿ ಬರ ಪೀಡಿತ ಮತ್ತು ಮಳೆ ಕೊರತೆ ಪ್ರದೇಶಗಳಲ್ಲಿ ಡೀಜಲ್ ಪಂಪ್‌ಸೆಟ್ ಗಳಿಂದ ಪೂರಕ ನೀರಾವರಿ ಸೌಲಭ್ಯ ಒದಗಿಸಲು ಡೀಜಲ್‌ಗೆ ಸಹಾಯಧನ ನೀಡುವ ಸಲುವಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ :31-3/2009-DM ದಿನಾಂಕ :3.8.2009.

2) ಕೃಷಿ ಆಯುಕ್ತರು, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ :ಉಕೃನಿ/ರಾಭೂಬಮಂ/ಡೀಜಲ್-ಸಬ್ಸಿಡಿ/2009-10 ದಿ :10.8.09.

ಪ್ರಸ್ತಾವನೆ:

2009-10ನೇ ಸಾಲಿನಲ್ಲಿ ರಾಜ್ಯದ 20 ಜಿಲ್ಲೆಗಳ 86 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಸರ್ಕಾರವು 2009 ಮುಂಗಾರು ಮಳೆಯ ಅಭಾವದಿಂದ ಬರಪೀಡಿತ ಪ್ರದೇಶ ಮತ್ತು ಮಳೆ ಕೊರತೆಯಿಂದ ಹಾನಿಗೀಡಾದ ಪ್ರದೇಶಗಳ ಬೆಳೆದು ನಿಂತ ಬೆಳೆಗಳಿಗೆ ಡೀಜಲ್ ಪಂಪ್ ಸೆಟ್ ಗಳ ಮೂಲಕ ಪೂರಕ ನೀರಾವರಿ ಸೌಲಭ್ಯ ಒದಗಿಸಲು ಡೀಜಲ್ ವೆಚ್ಚವನ್ನು ಸಬ್ಸಿಡಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ 50:50 ಆಧಾರದ ಮೇಲೆ ಅನುಷ್ಠಾನಗೊಳಿಸಬೇಕಾಗುತ್ತದೆ. ಹಾನಿಗೀಡಾದ ಬೆಳಗಳನ್ನು ರಕ್ಷಿಸಿಕೊಳ್ಳಲು ಬರಪೀಡಿತ ಪ್ರದೇಶದ ರೈತರು ಡೀಜಲ್ ಪಂಪ್‌ಸೆಟ್‌ಗಳಿಂದ ಬೆಳೆದು ನಿಂತ ಬೆಳೆಗಳಿಗೆ ನೀರಾವರಿ ಮಾಡಿಕೊಳ್ಳಲು ಅನುಕೂಲವಾಗುವಂತೆ ರಿಯಾಯ್ತಿದರದಲ್ಲಿ ಗರಿಷ್ಟ ರೂ. 1000.00 ದಂತೆ ಪ್ರತಿ ರೈತರಿಗೆ ಗರಿಷ್ಟ 2 ಹೆಕ್ಟೇರ್ ವರೆಗೆ ಸಹಾಯದನ ನೀಡಲು ಭಾರತ ಸರ್ಕಾರವು ಉದ್ದೇಶಿಸಿದೆ. ಇದರಲ್ಲಿ ಅರ್ಧ ಭಾಗವನ್ನು ರಾಜ್ಯ ಸರ್ಕಾರವು ಭರಿಸಬೇಕಾಗಿರುತ್ತದೆ. ಮೇಲೆ (2) ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಬರ ಪೀಡಿತ ಪ್ರದೇಶಗಳ ಬೆಳೆಗಳನ್ನು ರಕ್ಷಿಸಿಕೊಳ್ಳಲು ಮೂರು ಸಲ ಬೆಳೆಗಳಿಗೆ ನೀರುಣಿಸಿದರೆ ಮಳೆಯ ಕೊರತೆಯಿಂದ ಹಾನಿಗೀಡಾದ ಬೆಳೆಗಳನ್ನು ರಕ್ಷಿಸಿಕೊಳ್ಳಬಹುದು. ಮತ್ತು ರಾಜ್ಯದ 20 ಜಿಲ್ಲೆಗಳ 86 ತಾಲ್ಲೂಕುಗಳಲ್ಲಿ 30000 ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ಡೀಜಲ್ ಪಂಪ್ ಸೆಟ್ ಮೂಲಕ ನೀರುಣಿಸಲು ಪ್ರತಿ ಹೆಕ್ಟೇರ್ ಗೆ ರೂ. 1000 ದಂತೆ ಒಟ್ಟು ರೂ. 3ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ ಎಂದು ತಿಳಿಸುತ್ತ ಈ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇದರಲ್ಲಿ ಕೇಂದ್ರ ಸರ್ಕಾರವು ಶೇ. 50 ರಷ್ಟು ಮರುಪಾವತಿ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 175 ಟಿಎನ್‌ಆರ್ 2009, ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2009-10ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಿಸಿರುವ ರಾಜ್ಯದ 20 ಜಿಲ್ಲೆಗಳ 86 ತಾಲ್ಲೂಕುಗಳಲ್ಲಿ ಮಳೆ ಅಭಾವದಿಂದ ಹಾನಿಗೀಡಾಗಿರುವ ಬೆಳೆಗಳನ್ನು ರಕ್ಷಿಸಿಕೊಳ್ಳಲು ರೈತರು ಡೀಜಲ್ ಪಂಪ್‌ಸೆಟ್‌ಗಳಿಂದ ಬೆಳೆದು ನಿಂತ ಪೈರುಗಳಿಗೆ ನೀರಾವರಿ ಒದಗಿಸಲು ಡೀಜಲ್ ವೆಚ್ಚ ಭರಿಸಲು ಸಬ್ಸಿಡಿ ನೀಡುವ ಸಲುವಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಆಯುಕ್ತರು ಕೃಷಿ ಇಲಾಖೆ ಇವರಿಗೆ ರೂ. 300.00 ಲಕ್ಷ (ರೂ. ಮುನ್ನೂರು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ಮಂಜುರಾತಿ ನೀಡಲಾಗಿದೆ.

ಕೃಷಿ ಇಲಾಖೆಯು ಈ ಕಾರ್ಯಕ್ರಮದ ನಿಯಮಾನುಸಾರ ಕೇಂದ್ರ ಸರ್ಕಾರದ ಪಾಲು ಶೇ. 50 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರದಿಂದ ಹಿಂಪಡೆದು ಪ್ರಕೃತಿ ವಿಕೋಪ ಪರಿಹಾರ ಮೊತ್ತಕ್ಕೆ ಜಮಾ ಮಾಡುವಂತೆ ಆದೇಶಿಸಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2245-02-110-0-01-100 (ಯೋಜನೇತರ) ಅಡಿಯಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ:ಆಇ 692 ವೆಚ್ಚ-7/2009 ದಿನಾಂಕ:22.8.2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2106

ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ರಾಜ್ಯದಿಂದ ಹೊರಗೆ, ಬೇರೆ ರಾಜ್ಯಗಳಿಗೆ ಸಾಧಾರಣ ಮರಳು ಸಾಗಾಣಿಕೆ ಮಾಡುವುದನ್ನು ನಿಷೇಧಿಸುವ ಕುರಿತು.

ಓದಲಾಗಿದೆ : ಸಂಖ್ಯೆ :ಗಭೂಇ :ಕಗಗು :ಸಾ. ಮರಳು :2009-10/1279 ದಿನಾಂಕ : 24.7.2009.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರದಲ್ಲಿ ಬಹಳಷ್ಟು ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅವುಗಳಿಗಾಗಿ ಮರಳಿನ ಅವಶ್ಯಕತೆಯಿದ್ದು, ಬೆಂಗಳೂರು ನಗರಕ್ಕೆ ಮರಳು ಪೂರೈಸುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ,

ತುಮಕೂರು, ಮೈಸೂರು , ಮಂಡ್ಯ, ಚಾಮರಾಜನಗರ, ಹಾಸನ,. ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಇಲ್ಲಿ ಮರಳು ತೆಗೆಯುವಿಕೆ/.ಸಾಗಾಣಿಕೆಗೆ ಸಾರ್ವಜನಿಕರಿಂದ ಹಾಗೂ ಪರಿಸರವಾದಿಗಳಿಂದ ತೀವ್ರ ಪ್ರತಿರೋಧವಿದ್ದ ಕಾರಣ ಕೆಲವು ಜಿಲ್ಲೆಗಳಲ್ಲಿ ಮರಳು ಗಣಿಗಾರಿಕೆ/ಸಾಗಾಣಿಕೆಗೆ ನಿಷೇಧ ಹೇರಲಾಗಿತ್ತು. ಏತನ್ಮಧ್ಯೆ ಲಾರಿ ಮಾಲೀಕರು ಮುಷ್ಕರದ ದಾರಿಯನ್ನು ಸಹ ಹಿಡಿದಿದ್ದರ ಹಿನ್ನೆಲೆಯಲ್ಲಿ ದಿನಾಂಕ:19.9.2008 ರಿಂದ ಜಾರಿಗೆ ಬರುವಂತೆ 6 ತಿಂಗಳ ಅವಧಿಗೆ ತಾತ್ಕಾಲಿಕ ಪರವಾನಿಗೆಗಳ ಪದ್ಧತಿಯನ್ನು ಜಾರಿಗೊಳಿಸಿ ಸರ್ಕಾರವು ಆದೇಶವನ್ನು ಹೊರಡಿಸಿದ್ದು, ಇದನ್ನು ಮತ್ತೆ 6 ತಿಂಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಅಲ್ಲದೆ, ರಾಜ್ಯದಲ್ಲಿನ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸಾದಾಮರಳಿನ ಕೊರತೆಯುಂಟಾಗಿದ್ದು, ಈ ಕೊರತೆಯನ್ನು ನೀಗಿಸಲು ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯವಿರುವ ಮರಳು ಬ್ಲಾಕ್‌ಗಳನ್ನು ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ದಿನಾಂಕ:3.6.2009ರ ಆದೇಶ ಸಂಖ್ಯೆ:ಸಿಐ:142 ಎಂಎಂಎನ್. 2008ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ರಾಜ್ಯದ ಗಡಿ ಜಿಲ್ಲೆಗಳಾದ ದಕ್ಷಿಣಕನ್ನಡ, ಕೊಡಗು, ಮೈಸೂರು, ಚಾಮರಾಜನಗರ, ಬೆಳಗಾಂ, ಗುಲ್ಬರ್ಗಾ ಮತ್ತು ಇತರ ಜಿಲ್ಲೆಗಳಿಂದ ಹೊರ ರಾಜ್ಯಗಳಿಗೆ ಸಾದಾರಣ ಮರಳು ಸಾಗಾಣಿಕೆಯಾಗುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಾರ್ವಜನಿಕರಿಂದಲೂ ಸಹ ದೂರುಗಳು ಬಂದಿರುತ್ತವೆಯೆಂದೂ, ಪ್ರಸ್ತುತ ರಾಜ್ಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಮರಳಿನ ಕೊರತೆಯಿದ್ದು, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳು ಆಯಾ ರಾಜ್ಯಗಳಿಂದ ಬೇರೆ ರಾಜ್ಯಗಳಿಗೆ ಸಾದಾರಣ ಮರಳು ಸಾಗಾಣಿಕೆ ಮಾಡುವುದನ್ನು ನಿಷೇಧಿಸಿರುವಂತೆಯೇ ಕರ್ನಾಟಕ ರಾಜ್ಯದಿಂದಲೂ ಸಹ ಹೊರರಾಜ್ಯಗಳಿಗೆ ಸಾದಾರಣ ಮರಳು ಸಾಗಾಣಿಕೆ ಮಾಡುವುದನ್ನು ನಿಷೇಧಿಸಿ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಮೇಲೆ ಓದಲಾದ ದಿನಾಂಕ:24.7.2009ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಐ 250 ಎಂಎಂಎನ್ 2009, ಬೆಂಗಳೂರು, ದಿನಾಂಕ:28ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಿಂದ ಹೊರರಾಜ್ಯಗಳಿಗೆ ಸಾದಾರಣ ಮರಳು ಸಾಗಾಣಿಕೆ ಮಾಡುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2109

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ(ಗಣಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಆದೇಶ ಸಂಖ್ಯೆ:ಪಸಂಮೀ 237 ಪಸಸೇ 2009, ಬೆಂಗಳೂರು, ದಿನಾಂಕ:18ನೇ ಆಗಸ್ಟ್, 2009

ವಿಷಯ : ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ನಿವೃತ್ತ ಪಶುವೈದ್ಯಾಧಿಕಾರಿಗಳಿಗೆ ಪರಿಷ್ಕೃತ ವೇತನ ಶ್ರೇಣಿಯಂತೆ ಸಂಚಿತ ವೇತನ ನಿಗದಿಗೊಳಿಸುವಿಕೆ.

ಓದಲಾಗಿದೆ :
1) ಆದೇಶ ಸಂಖ್ಯೆ :ಪಸಂಮೀ 116 ಪಸಸೇ 2008, ದಿನಾಂಕ :11.7.2008.
2) ಆದೇಶ ಸಂಖ್ಯೆ :ಎಫ್‌ಡಿ 31 ಎಸ್‌ಆರ್‌ಪಿ 2007, (VII), ದಿನಾಂಕ :14.8.2008.
3) ಪತ್ರ ಸಂಖ್ಯೆ :ಆಪಸಂ/ಸಿಬ್ಬಂದಿ-2/ವಿವ-97/2008-09, ದಿನಾಂಕ :1.4.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ 100 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನಿವೃತ್ತಿ ಹೊಂದಿದ ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ತಿಂಗಳಿಗೆ ರೂ. 12,000 (ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ಸಂಚಿತ ವೇತನ ಆಧಾರದ ಮೇಲೆ 2 ವರ್ಷಗಳ ಅವಧಿಗೆ ನೇಮಿಸಿಕೊಳ್ಳಲು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆದೇಶದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯಾಧಿಕಾರಿ ಹುದ್ದೆಯ ವೇತನ ಶ್ರೇಣಿ ರೂ. 12,000-22650 ಬದಲಾಗಿ ಸಂವಾದಿ ಪರಿಷ್ಕೃತ ವೇತನಶ್ರೇಣಿ ರೂ. 13,000-23850 ಆಗಿರತಕ್ಕದ್ದೆಂದು ನಿಗದಿಪಡಿಸಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಬೆಂಗಳೂರು ಇವರು ದಿನಾಂಕ:11.7.2008ರ ಆದೇಶದನ್ವಯ 100 ನಿವೃತ್ತ ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಅವರಿಗೆ ಸಂಚಿತ ವೇತನ ರೂ. 12,000-00 ನಿಗದಿಪಡಿಸಲಾಗಿದ್ದು, ಪರಿಷ್ಕೃತ ವೇತನಶ್ರೇಣಿಯಲ್ಲಿ ಪಶುವೈದ್ಯಾಧಿಕಾರಿಗಳ ವೇತನ ಶ್ರೇಣಿಯನ್ನು ರೂ. 13,000-23850ಕ್ಕೆ ನಿಗದಿಪಡಿಸಿರುವುದರಿಂದ ಗುತ್ತಿಗೆ

ಆಧಾರದ ಮೇಲೆ ನೇಮಕಗೊಂಡ ಅಧಿಕಾರಿಗಳಿಗೆ ನಿಗದಿಪಡಿಸಿರುವ ವೇತನ ರೂ. 12,000-00 ಗಳಿಂದ ಪರಿಷ್ಕೃತ ವೇತನ ಶ್ರೇಣಿಯಂತೆ ಕನಿಷ್ಠ ಹಂತ ರೂ. 13,000-00 ಗಳಿಗೆ ನಿಗದಿಪಡಿಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ ಹಾಗೂ ಪರಿಷ್ಕೃತ ವೇತನವನ್ನು ನಿಗದಿಗೊಳಿಸಿದಲ್ಲಿ ವಾರ್ಷಿಕ ಒಟ್ಟು ರೂ. 12.00 ಲಕ್ಷಗಳ ಹೆಚ್ಚುವರಿ ವೆಚ್ಚವಾಗಲಿದ್ದು ಅದನ್ನು ಆಯಾಯ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ವೇತನ ಶೀರ್ಷಿಕೆಯಡಿ ಭರಿಸಲಾಗುತ್ತದೆಂದು ತಿಳಿಸಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. 5ನೇ ರಾಜ್ಯವೇತನ ಆಯೋಗವು ಅಂತಿಮ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಆರ್ಥಿಕ ಇಲಾಖೆಯು ಕೆಲವೊಂದು ವರ್ಗದ ಹುದ್ದೆಗಳಿಗೆ ಹೆಚ್ಚಿನ ವೇತನಶ್ರೇಣಿಯನ್ನು ನೀಡುವ ಕುರಿತು ಆದೇಶಿಸಿದ್ದು, ಆ ಪ್ರಕಾರ ಪಶುವೈದ್ಯಾಧಿಕಾರಿ ಹುದ್ದೆಗೆ ಹಿಂದೆ ನಿಗದಿಪಡಿಸಿದ್ದ ಮೂಲವೇತನ ರೂ. 12000-22650ನ್ನು ಪರಿಷ್ಕರಿಸಿ ವೇತನ ಶ್ರೇಣಿ ರೂ. 13,000-23850 ಕ್ಕೆ ಹೆಚ್ಚಳ ಮಾಡಿದ್ದು, ಅದು ದಿನಾಂಕ:1.8.2008ರಿಂದ ಜಾರಿಗೆ ಬಂದಿರುತ್ತದೆ. ಗುತ್ತಿಗೆ ಆಧಾರದ ಮೇಲೇ ನೇಮಕಗೊಂಡಿರುವ ಪಶುವೈದ್ಯಾಧಿಕಾರಿಗಳಿಗೆ ಪರಿಷ್ಕೃತ ವೇತನ ಶ್ರೇಣಿ ಅನ್ವಯ ಸಂಚಿತ ವೇತನವನ್ನು ಪರಿಷ್ಕರಿಸಿದಲ್ಲಿ ತಗಲುವ ವೆಚ್ಚವನ್ನು ಆಯಾ ಜಿಲ್ಲಾ ಪಂಚಾಯತ್ ವೇತನ ಲೆಕ್ಕಶೀರ್ಷಿಕೆ ಅಡಿ ಭರಿಸುವುದಾಗಿ ಆಯುಕ್ತರು ತಿಳಿಸಿರುವ ಹಿನ್ನೆಲೆಯಲ್ಲಿ, ಅವರಿಗೆ ಸಂಚಿತ ವೇತನ ರೂ. 12,000-00 ನಿಗದಿಪಡಿಸಿರುವುದನ್ನು ರೂ. 13,000-00ಗಳಿಗೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ .ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ:ಪಸಂಮಿ 116 ಪಸಸೇ 2008, ದಿನಾಂಕ:11.7.2008ರಲ್ಲಿ ಗುತ್ತಿಗೆ ಮೇಲೆ ನೇಮಕಗೊಳ್ಳುವ ಪಶುವೈದ್ಯಾಧಿಕಾರಿಗಳಿಗೆ ಸಂಚಿತ ವೇತನ ರೂ. 12,000-00 ಎಂದು ನಿಗದಿಪಡಿಸಿರುವುದನ್ನು ಪರಿಷ್ಕೃತ ವೇತನಶ್ರೇಣಿಯಂತೆ ಮಾರ್ಪಾಡು ಮಾಡಿ ಗುತ್ತಿಗೆ ವೇತನವನ್ನು ದಿನಾಂಕ:1.6.2009ರಿಂದ ಅನ್ವಯಿಸುವಂತೆ ಮಾಸಿಕ ರೂ. 13,000-00 (ಹದಿಮೂರು ಸಾವಿರ ರೂಪಾಯಿಗಳು ಮಾತ್ರ) ರಂತೆ ಮರುನಿಗದಿಪಡಿಸಲು ಮಂಜೂರಾತಿ ನೀಡಿದೆ.

ಮೂಲ ವೇತನ ಪರಿಷ್ಕರಣೆಯಿಂದ ತಗಲುವ ಹೆಚ್ಚುವರಿ ವೆಚ್ಚವನ್ನು ಗುತ್ತಿಗೆ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವ ಆಯಾ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ವೇತನಶೀರ್ಷಿಕೆ ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 192 ವೆ. 4 2008, ದಿನಾಂಕ:3.8.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2111

ಎಂ.ಪಿ. ನಾಗರಾಜ
ಪೀಠಾಧಿಕಾರಿ-2
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ-ಎ)

ಶಿಕ್ಷಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಇಡಿ 210 ಡಿಸಿಇ 2008(1) ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ಸರ್ಕಾರಿ ಆದೇಶ ಸಂಖ್ಯೆ:ಇಡಿ 58 ಡಿಸಿಇ 2009 ದಿನಾಂಕ:22.8.2009ರಲ್ಲಿ ನೇಮಕಾತಿಗಾಗಿ ಈ ಕಳಕಂಡ ಅಭ್ಯರ್ಥಿಯ ಹೆಸರು ಪರಿಗಣಿಸಿ ಹೊರಡಿಸಲಾಗಿದೆ. ಆದಾಗ್ಯೂ ಸರ್ಕಾರಿ ಆದೇಶ ಸಂಖ್ಯೆ:ಇಡಿ 210 ಡಿಸಿಇ 2008(1) ದಿನಾಂಕ:26.8.2009ರ ಆದೇಶದಲ್ಲಿ ಸದರಿ ಅಭ್ಯರ್ಥಿಯ ಹೆಸರು ಪುನರಾವೃತ್ತಿಯಾಗಿ ಈ ಕೆಳಕಂಡಂತೆ ನಮೂದಾಗಿರುತ್ತದೆ.

ಕ್ರ.ಸಂ	KPSC ಕ್ರ.ಸಂ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ			
			NET	SLET	Ph.D.	M.Phil
44	60	ಸೌಮ್ಯ ಜಿ.ಆರ್. D/o ರುದ್ರಪ್ಪ ಜಿ, ಗುಬ್ಬಿಹಳ್ಳಿ, ಕಡೂರು ತಾ:ಬನ್ನೂರು ಪೋಸ್ಟ್, ಚಿಕ್ಕಮಗಳೂರು ಜಿಲ್ಲೆ-577135				M.Phil-Kuv Uni- 23.2.2008

ಪುನರಾವೃತ್ತಿಯಾಗಿರುವ ಮೇಲ್ಕಂಡ ಅಭ್ಯರ್ಥಿಯ ಹೆಸರನ್ನು ಮಾರ್ಪಡಿಸಿ ಈ ಕೆಳಕಂಡ ಅಭ್ಯರ್ಥಿಯ ಹೆಸರನ್ನು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕ್ರ.ಸಂ	KPSC ಕ್ರ.ಸಂ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ			
			NET	SLET	Ph.D.	M.Phil
44	60	ಸೌಮ್ಯ ಎಸ್.ಮೂರ್ತಿ, ಪಾರ್ವತಿ, 1216, 1ನೇ ಮುಖ್ಯರಸ್ತೆ, 1ನೇ ಕ್ರಾಸ್, ವಿಜಯನಗರ, ಬೆಂಗಳೂರು-560040				M.Phil-Bharathi dasan Uni-DIS-Dec 2007

ಮೇಲ್ಕಂಡ ನೇಮಕಾತಿಯ ಷರತ್ತುಗಳು ಈಗಾಗಲೇ ಹೊರಡಿಸಲಾಗಿರುವ ಷರತ್ತುಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2112

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರ ಹುದ್ದೆಯ ನೇಮಕಾತಿ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ :2376/2007/ S-RES ತೀರ್ಪಿನ ದಿನಾಂಕ :9.6.2009

2) ದಿ :25.8.2009ರಂದು ನಡೆದ ಸಂಸ್ಥೆಯ ಆಡಳಿತ ಮಂಡಳಿಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರ ಹುದ್ದೆಯ ನೇಮಕಾತಿ ಬಗ್ಗೆ ಡಾ:ಶಿವಾನಂದರವರು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅಪೀಲು ಸಂಖ್ಯೆ:2376/2007 ಇದರ ಮೇಲೆ ನ್ಯಾಯಾಲಯವು ಅಪೀಲನ್ನು ಅಂಗೀಕರಿಸಿ ಈ ಕೆಳಕಂಡಂತೆ ತೀರ್ಪನ್ನು ನೀಡಿರುತ್ತದೆ.

ii) The impugned order passed by the single Judge as well as the Notification issued as per Annexure A and B appointing the 3rd respondent as the Director of the Institute are hereby quashed.

iv) The Selection process till the stage of recommending the names of candidates is in order and therefore the 1st, 2nd, and 4th respondent shall proceed to consider the recommendation from aforesaid stage in accordance with law and in the light of the observations made above, within 5 weeks from the date of receipt of a copy of this Order.

ತೀರ್ಪಿನ ಭಾಗದ ಕಂಡಿಕೆ 2 ರಲ್ಲಿನ ಆದೇಶದನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 2 ಪಿಟಿಡಿ 2008 ದಿ:12.6.2009ರಲ್ಲಿ ಡಾ: ಎಂ.ಎಲ್. ಸಿದ್ದರಾಜು ಇವರನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸಿದೆ.

ಮೇಲೆ ಓದಲಾದ ಕ್ರ.ಸಂ (2)ರಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ದಿ:25.8.2009ರಂದು ಸಭೆ ಸೇರಿ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ:2376/2007 ದಿ:9.6.2009ರಂದು ನೀಡಲಾಗಿದ್ದ ತೀರ್ಪಿನ ಆದೇಶದ ಕಂಡಿಕೆ 4ರಲ್ಲಿನ ನಿರ್ದೇಶದನ್ವಯ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ರಚಿಸಲಾಗಿದ್ದ ಆಯ್ಕೆ ಸಮಿತಿ ದಿ:24.1.2007ರ ನಡವಳಿಗಳನ್ನು ಪರಿಶೀಲಿಸಿದ್ದಲ್ಲದೆ ಸದರಿ ನಡವಳಿಗಳಲ್ಲಿ ಆಯ್ಕೆ ಸಮಿತಿಯು ಅರ್ಹತಾ ಕ್ರಮದಲ್ಲಿ ಶಿಫಾರಸ್ಸು ನೀಡಿರುವ ಡಾ:ಶಿವಾನಂದ, ಡಾ:ಎಂ.ಎಲ್. ಸಿದ್ದರಾಜು, ಡಾ: ಗೋವಿಂದರಾಜು, ಎಂ. ಇವರುಗಳ ಅರ್ಹತಾ ಪಟ್ಟಿಯ ವಿವರಗಳನ್ನು ಪರಿಗಣಿಸಿ ಪ್ರತಿಯೋರ್ವ ಅಭ್ಯರ್ಥಿಗೆ ಸಂಬಂಧಪಟ್ಟಂತೆ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಸದರಿ ಪಟ್ಟಿಯಲ್ಲಿ ಸೂಚಿಸಿದ ಆದ್ಯತೆಯನ್ನೇ ಅನುಸರಿಸಿ, ಆದ್ಯತೆಯಂತೆ ಪ್ರಥಮ ಸ್ಥಾನದಲ್ಲಿರುವ ಡಾ:ಶಿವಾನಂದ ಇವರನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರಾಗಿ ನೇಮಕಾತಿ ಮಾಡಲು ಒಮ್ಮತದಿಂದ ತೀರ್ಮಾನಿಸಲಾಯಿತಲ್ಲದೆ. ನೇಮಕಾತಿ ಅವಧಿಯನ್ನು ಸಂಸ್ಥೆಯ ನಿಯಮಾವಳಿಗಳನುಸಾರವಾಗಿ 3 ವರ್ಷಗಳಾಗಿರಬೇಕೆಂದು ತೀರ್ಮಾನಿಸಿತು. ಅಲ್ಲದೆ ಡಾ: ಶಿವಾನಂದರವರ ಜನ್ಮ ದಿನಾಂಕ:30.8.1947 ಆಗಿದ್ದು, ಅವರ ನೇಮಕಾತಿ ಆದೇಶವನ್ನು ತಕ್ಷಣವೇ ಹೊರಡಿಸಬೇಕೆಂದು ತೀರ್ಮಾನಿಸಿತು.

ಸಂಸ್ಥೆಯ ಆಡಳಿತ ಮಂಡಳಿಯ ತೀರ್ಮಾನದ ಹಿನ್ನೆಲೆಯಲ್ಲಿ ಡಾ:ಶಿವಾನಂದ ಇವರನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಇಲ್ಲಿಗೆ ನಿರ್ದೇಶಕರನ್ನಾಗಿ ನೇಮಕ ಮಾಡಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಆಕುಕ 2 ಪಿಟಿಡಿ 2008, ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಆಡಳಿತ ುಂಡಳಿಯ ಸಭೆಯ ದಿ:25.8.2009ರ ನಡವಳಿಯ ತೀರ್ಮಾನದಂತೆ ಡಾ: ಶಿವಾನಂದ ನಿವೃತ್ತ ಪ್ರಾಧ್ಯಾಪಕರು, ಶಿಶುವೈದ್ಯ ಾಸ್ತ್ರ ಇವರನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ 3 ರ್ಷದ ಅವಧಿಗೆ ಅಥವಾ ಮುಂದಿನ ಆದೇದವರೆಗೆ ನೇಮಕ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2113

ಎಸ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾರತೀಯ ವೈದ್ಯ ಪದ್ಧತಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಶ್ರೀ ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಗೌರವಧನ, ವಾಹನಭತ್ಯೆ ಮಂಜೂರು ಮಾಡುವ ಬಗ್ಗೆ

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ :ಜಸಂಇ 88 ಸೇಅವಿ/08, ದಿ :24.2.2009.

2) ಶ್ರೀ ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ವರದಿ ದಿ :25.6.2009.

ಪ್ರಸ್ತಾವನೆ:

ಶ್ರೀ ಎಂ. ಮಂಜುನಾಥ್ ಹಿರಿಯ ಸಹಾಯಕರು, ಇವರು ಜಲ ಸಂಪನ್ಮೂಲ ಇಲಾಖೆಯ (ತಾಂತ್ರಿಕ-1) ಶಾಖೆಯಲ್ಲಿ ರ್ತವ್ಯ ನಿರ್ವಹಿಸುತ್ತಿದ್ದಾಗ, ದಿ:28.10.2008 ರಿಂದ ದಿ:16.12.2008ರವರೆಗೆ ಅನಧಿಕೃತವಾಗಿ ಗೈರುಹಾಜರಾಗಿದ್ದರ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಮೇಲೆ (1)ರಲ್ಲಿ ಓದಲಾದ ದಿ:24.2.2009ರ ಸರ್ಕಾರಿ ಆದೇಶದಲ್ಲಿ ್ರೀ ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ವಿಚಾರಣಾ ವರದಿಯನ್ನು ದಿ:25.6.2009ರಂದು ಸಲ್ಲಿಸಿ, ವಿಚಾರಣೆಯನ್ನು ಕೈಗೊಂಡ ಪ್ರಯುಕ್ತ ನಿಗದಿ ಪಡಿಸಿದ ಸಂಭಾವನೆಯನ್ನು ಮಂಜೂರು ಮಾಡಲು ಕೋರಿರುತ್ತಾರೆ. ಅದರಂತೆ, ಈ ಸಂಬಂಧ ಅವರಿಗೆ ಗೌರವಧನ ಹಾಗೂ ವಾಹನಭತ್ಯೆ ಮಂಜೂರು ಮಾಡಲು ರ್ಕಾರವು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಜಸಂಇ 88 ಸೇಅವಿ/08, ಬೆಂಗಳೂರು, ದಿನಾಂಕ:28ನೇ ಆಗಸ್ಟ್, 2009

ಶ್ರೀ ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರು ಶ್ರೀ ಎಂ. ಮಂಜುನಾಥ್, ಹಿರಿಯ ಹಾಯಕರು, ಜಲ ಸಂಪನ್ಮೂಲ ಇಲಾಖೆ. ಇವರ ಗೈರು ಹಾಜರಿ ಬಗ್ಗೆ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸಿದ ಾರಣ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 22 ಸೇಇವಿ 2007, ದಿ:11.4.2008ರನ್ವಯ ರೂ. 8,000-00 (ಎಂಟು ಸಾವಿರ ೂಪಾಯಿಗಳು ಮಾತ್ರ) ಸಂಭಾವನೆಯನ್ನು ಹಾಗೂ ರೂ. 1,500-00 (ಒಂದು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ವಾಹನಭತ್ಯೆಯನ್ನು ಮಂಜೂರು ಮಾಡಿ ಈ ಮೂಲಕ ಆದೇಶಿಸಲಾಗಿದೆ.

ಈ ಬಗೆಗಿನ ವೆಚ್ಚವನ್ನು ಆಯವ್ಯಯದ ಲೆಕ್ಕ ಶೀರ್ಷಿಕೆ "2052 ಸಚಿವಾಲಯ ಸಾಮಾನ್ಯ ಸೇವೆಗಳು-090- ಚಿವಾಲಯ-01, ಕರ್ನಾಟಕ ಸರ್ಕಾರದ ಸಚಿವಾಲಯ-051 ಸಾಮಾನ್ಯ ವೆಚ್ಚಗಳು" ರಲ್ಲಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2114

ಎಸ್.ಬಿ. ರುದ್ರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸೇವೆಗಳು-ಬಿ)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2009-10ನೇ ಸಾಲಿನಲ್ಲಿ ಎರಡನೇ ಕಂತಾಗಿ ರೂ. 495.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ :ಯೋಇ 33 ಹೈಕಮಂ 2009 ದಿನಾಂಕ :24.8.2009.

2) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ : ಹೈಕಮಂ/ಲೆಶಾ/2009-10 ದಿನಾಂಕ :17.8.2009

ಪ್ರಸ್ತಾವನೆ:

2009-10ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515-00-800-0-01-(ಯೋಜನೆ)" ಅಡಿಯಲ್ಲಿ ರೂ. 2100.00ಲಕ್ಷಗಳನ್ನು ಒದಗಿಸಿದ್ದು, ಈಗಾಗಲೇ ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಮೊದಲನೇ ಕಂತಾಗಿ ರೂ. 400.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಮಂಡಳಿಗೆ ಎರಡನೇ ಕಂತಾಗಿ ರೂ. 495.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಯೋಇ 33 ಹೈಕಮಂ 2009, ಬೆಂಗಳೂರು, ದಿನಾಂಕ:25ನೇ ಆಗಸ್ಟ್, 2009

2009-10ನೇ ಸಾಲಿನಲ್ಲಿ ಹೈದರಾಬಾದ್ ಪ್ರದೇಶಾಭಿವೃದ್ಧಿ ಮಂಡಳಿಗೆ ಎರಡನೇ ಕಂತಾಗಿ ಲೆಕ್ಕಶೀರ್ಷಿಕೆ "2515-00-800-0-01-101 (ಸಹಾಯಾನುದಾನ) (ಯೋಜನೆ)" ಅಡಿಯಲ್ಲಿ ರೂ. 495.00 ಲಕ್ಷಗಳನ್ನು (ನಾನ್ನೂರ ತೊಂಬತ್ತೈದು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2009-10ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಈ ಆದೇಶವನ್ನು ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16.5.2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2115

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ವಿಷಯ : ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2007-08ನೇ ಸಾಲಿನಲ್ಲಿ ಕೊನೆಯ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ :ಯೋಇ 37 ಯೋವಿವಿ 2007, ದಿನಾಂಕ :16.6.2007
2) ಸರ್ಕಾರಿ ಆದೇಶ ಸಂಖ್ಯೆ :ಯೋಇ 37 ಯೋವಿವಿ 2007, ದಿನಾಂಕ :16.11.2007
3) ಸರ್ಕಾರಿ ಆದೇಶ ಸಂಖ್ಯೆ :ಯೋಇ 37 ಯೋವಿವಿ 2007, ದಿನಾಂಕ :19.3.2008
4) ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ :ಶಾಸ್ಥೋರ ಅಯೋ/94/07-08 ದಿನಾಂಕ :9.4.2009.
5) ಮಾನ್ಯ ಗೃಹ ಸಚಿವರ ದಿನಾಂಕ :6.4.2009ರ ಪತ್ರ.

ಪ್ರಸ್ತಾವನೆ:

ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2007-08ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ "2575-60-265-0-02-059 (ಯೋಜನೇತರ)" ಅಡಿಯಲ್ಲಿ 300.00ಕೋಟಿ ರೂ.ಗಳನ್ನು ಒದಗಿಸಲಾಗಿದ್ದು. ಇದರಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಮೊದಲನೇ ಕಂತಾಗಿ ರೂ. 75.00ಕೋಟಿಗಳನ್ನು ಮೇಲೆ ಓದಲಾದ ದಿನಾಂಕ:16.6.2007ರ ಆದೇಶದಲ್ಲಿ, ಎರಡನೇ ಕಂತಾಗಿ ರೂ. 73,75 ಕೋಟಿಗಳನ್ನು ಮೇಲೆ ಓದಲಾದ (2)ರ ಆದೇಶದಲ್ಲಿ ಹಾಗೂ ಕೊನೆಯ ಕಂತಾಗಿ ರೂ. 34.50 ಕೋಟಿಗಳನ್ನು ಮೇಲೆ ಓದಲಾದ (3)ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

2007-08ನೇ ಸಾಲಿನ ಕೊನೆಯ ಅನುದಾನವು ಉಡುಪಿ ಮತ್ತು ಗುಲ್ಬರ್ಗಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಸಕಾಲದಲ್ಲಿ ಜಮಾ ಮಾಡಿಕೊಂಡಿರುವುದಿಲ್ಲ. ಉಲ್ಲೇಖ 4 ಮತ್ತು 5ರ ಪತ್ರದಲ್ಲಿ ಅನುದಾನವನ್ನು ನವೀಕರಿಸಲು ಕೋರಲಾಗಿತ್ತು. ಆರ್ಥಿಕ ಇಲಾಖೆಯು ಅನುದಾನವನ್ನು ನವೀಕರಿಸಲು ಸಾಧ್ಯವಿಲ್ಲವೆಂದು ಹಾಗೂ 2009-10ನೇ ಸಾಲಿನ ಆಯವ್ಯಯದ ಅನುದಾನದಿಂದ ಬಿಡುಗಡೆ ಮಾಡಲು ತಿಳಿಸಿತು. ಆದುದರಿಂದ, ಉಡುಪಿ ಮತ್ತು ಗುಲ್ಬರ್ಗಾ ಜಿಲ್ಲೆಯ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ತಲಾ ರೂ. 50.00ಲಕ್ಷದಂತೆ ರೂ. 200.00ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಯೋಇ 43 ಯೋವಿವಿ 2009, ಬೆಂಗಳೂರು, ದಿನಾಂಕ:25ನೇ ಆಗಸ್ಟ್, 2009

2009-10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2575-60-265-0-02-059(ಯೋಜನೆ) ಅಡಿಯಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2007-08ನೇ ಸಾಲಿನ ಕಡೆಯ ಕಂತಾಗಿ ಉಡುಪಿ ಮತ್ತು ಗುಲ್ಬರ್ಗಾ ಜಿಲ್ಲೆಗಳ ವಿಧಾನ

ರಿಷತ್ ಸದಸ್ಯರು ಆಯ್ಕೆ ಮಾಡಿಕೊಂಡಿರುವ ಅನುಬಂಧದಲ್ಲಿ ಸೂಚಿಸಿರುವ ಕ್ಷೇತ್ರಗಳಿಗೆ ತಲಾ ರೂ. 50.00ಲಕ್ಷ (ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳಂತೆ ಒಟ್ಟು ರೂ. 200.00 ಲಕ್ಷಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

(2) ಈ ಬಿಡುಗಡೆಯಾದ ಮೊತ್ತವನ್ನು ಸರ್ಕಾರದ ಪತ್ರದ ಸಂಖ್ಯೆ:ಪಿಡಿ 250 ಪಿಎಂಎಂ 2002, ದಿನಾಂಕ:5.3.2002 ರ ಪ್ರಕಾರ ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆ (ಪಿಡಿ ಅಕೌಂಟ್)ಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು.

(3) ಈ ಬಿಡುಗಡೆಯಾದ ಮೊತ್ತಕ್ಕೆ ಜಿಲ್ಲಾಧಿಕಾರಿಗಳು ಆಯಾ ಶಾಸಕರಿಂದ ಕ್ರಿಯಾ ಯೋಜನೆಯನ್ನು ಪಡೆದು ಸರ್ಕಾರದ ಆದೇಶ ಸಂಖ್ಯೆ:ಪಿಡಿ 486 ಪಿಎಂಎಂ 2001, ದಿನಾಂಕ:16.7.2001ರಲ್ಲಿ ಯೋಇ 40 ಪಿಎಂಎಂ 2005, ದಿನಾಂಕ:15.3.2006ರಲ್ಲಿ ಹಾಗೂ ಯೋಇ 17 ಯೋವಿವಿ 2007 ದಿನಾಂಕ:20.9.2007ರಲ್ಲಿ ನೀಡಿರುವ ಮಾರ್ಗಸೂಚಿಯಂತೆ, ಅನುಷ್ಠಾನಗೊಳಿಸತಕ್ಕದ್ದು.

4) ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು ಆಯಾ ಜಿಲ್ಲಾಧಿಕಾರಿಗಳ ಮೇಲು ಸಹಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

5) ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2575-60-265-0-02-059 ಇತರೆ ವೆಚ್ಚಗಳು (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

6) ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 371 ವೆಚ್ಚ-6:2009 ದಿನಾಂಕ:20.7.2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ:ಯೋಇ 43 ಯೋವಿವಿ 2009, ದಿನಾಂಕ:25ನೇ ಆಗಸ್ಟ್, 2009

ಕ್ರ.ಸಂ	ವಿಧಾನ ಪರಿಷತ್ತಿನ ಸದಸ್ಯರುಗಳ ಹೆಸರು (ಶ್ರೀ /ಶ್ರೀಮತಿ	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1. ಗುಲ್ಬರ್ಗಾ ಜಿಲ್ಲೆ			
1	ಸುಶೀಲ್ ಜಿ. ನಮೋಶಿ	ಗುಲ್ಬರ್ಗಾ	50.00
2	ಅಮಾತೆಪ್ಪ ಎಂ ಕಂದಕೂರ್	ಗುಲ್ಬರ್ಗಾ	50.00
		ಒಟ್ಟು	100.00
2) ಉಡುಪಿ ಜಿಲ್ಲೆ			
1.	ಕೆ. ಪ್ರತಾಪಚಂದ್ರ ಶೆಟ್ಟಿ	ಉಡುಪಿ	50.00
2.	ಡಾ: ವಿ.ಎಸ್. ಆಚಾರ್ಯ	ಉಡುಪಿ	50.00
		ಒಟ್ಟು	100.00
		ಒಟ್ಟು ಮೊತ್ತ ರೂ.	200.00

ಬಿ. ಚಿಕ್ಕರಾಜು

ಪಿ.ಆರ್. 2116

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಪಿ.ವೈ. ರಾಜೇಂದ್ರ ಕುಮಾರ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯಕ ಇಲಾಖೆ, ಅವರ ವಿರುದ್ಧ ಇಲಾಖೆ ವಿಚಾರಣಾ ಮಂಡನಾಧಿಕಾರಿ ನೇಮಕ -ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 05 ಇಮುವಿ 2008, ದಿನಾಂಕ :17.1.2009

2) ಶಿಕ್ಷಣ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ : ಇಡಿ 161 ಎಲ್‌ಐಬಿ 2009, ದಿನಾಂಕ:20.7. 2009.

ಪ್ರಸ್ತಾವನೆ:

ಶ್ರೀ ಪಿ.ವೈ. ರಾಜೇಂದ್ರ ಕುಮಾರ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ತಮ್ಮ ಅಧಿಕಾರದ ಅವಧಿಯಲ್ಲಿ ಗಣಕ ಯಂತ್ರಗಳ ಖರೀದಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಹಾಗೂ ಹಣ ದುರುಪಯೋಗ ಎಸಗಿರುವ ಮತ್ತು ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಒಟ್ಟು 7 ಆರೋಪಗಳಿಗಾಗಿ ಅವರ ವಿರುದ್ಧ ಮೇಲೆ (1)ರಲ್ಲಿ ಓದಲಾದ ದಿನಾಂಕ:17.1.2009ರ ಸರ್ಕಾರಿ ಆದೇಶದಲ್ಲಿ ಆದೇಶಿಸಿ, ಇಲಾಖಾ ವಿಚಾರಣೆಯನ್ನು ಆದೇಶಿಸಿ, ಶ್ರೀ ಎಂ. ಸುಬ್ಬರಾವ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿಯೂ ಹಾಗೂ ಶ್ರೀ ಎನ್.ಎಫ್. ನಾಗೇಶ್ ಉಪ ನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ ಜಯನಗರ, ಬೆಂಗಳೂರು ಇವರನ್ನು ಮಂಡನಾಧಿಕಾರಿಯಾಗಿಯೂ ನೇಮಕ ಮಾಡಲಾಗಿತ್ತು. ಮೇಲೆ (2)ರಲ್ಲಿ ಓದಲಾದ ದಿನಾಂಕ:20.7.2009ರ ಟಿಪ್ಪಣಿಯಲ್ಲಿ ಶಿಕ್ಷಣ ಇಲಾಖೆಯ ಸದರಿ ಪ್ರಕರಣದಲ್ಲಿ ಮಂಡನಾಧಿಕಾರಿಯಾದ ಶ್ರೀ ಎನ್.ಎಫ್. ನಾಗೇಶ್ ಉಪ ನಿರ್ದೇಶಕರು, ಇವರನ್ನು ಆಪಾದನಾ ಪಟ್ಟಿಯಲ್ಲಿನ ಕೆಲವು ವಿಷಯಗಳಿಗೆ ಸಾಕ್ಷಿದಾರರನ್ನಾಗಿ ಮಾಡಲಾಗಿರುವುದರಿಂದ ಅವರು ಮಂಡನಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಸಮಂಜಸವಲ್ಲವೆಂದು ಅವರ ಬದಲಿಗೆ ಶ್ರೀ ಆರ್.ಕೆ. ಬಡಿಗಣ್ಣವರ್ ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ (ಗ್ರಾಮಾಂತರ) ವಿಜಯನಗರ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸುವಂತೆ ತಿಳಿಸಿದೆ. ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 06 ಇಮುವಿ 2009, ಬೆಂಗಳೂರು, ದಿನಾಂಕ: 3ನೇ ಸೆಪ್ಟೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸ್ಪಟ್ಟ ಕಾರಣಗಳಿಂದಾಗಿ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 06 ಇಮುವಿ 2008, ದಿನಾಂಕ:17.1.2009ನ್ನು ಭಾಗಶಃ ಮಾರ್ಪಡಿಸಿ, ಶ್ರೀ ಎನ್.ಎಫ್. ನಾಗೇಶ್, ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಜಯನಗರ ಬೆಂಗಳೂರು ಇವರ ಸ್ಥಾನದಲ್ಲಿ ಶ್ರೀ ಆರ್.ಕೆ. ಬಡಿಗಣ್ಣವರ್, ಉಪನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ (ಗ್ರಾಮಾಂತರ) ವಿಜಯನಗರ ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿ ಮಂಡನಾಧಿಕಾರಿಯನ್ನಾಗಿ ಕರ್ನಾಟಕ ನಾಗರೀಕ ಸೇವಾ (ಮೇಲ್ಮನವಿ, ವರ್ಗೀಕರಣ ಮತ್ತು ನಿಯಂತ್ರಣ) ನಿಯಮ 11(15)(ಸಿ) ಅನ್ವಯ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2118

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಆರ್ಥಿಕ ಸಚಿವಾಲಯ

ತಿದ್ದುಪಡಿ ಸಂಖ್ಯೆ:ಆಇ 143 ವಾತೆಸಿ 2009, ಬೆಂಗಳೂರು, ದಿನಾಂಕ:1ನೇ ಸೆಪ್ಟೆಂಬರ್, 2009

ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 143 ವಾತೆಸಿ 2009, ದಿನಾಂಕ:27.5.2009ರ ಕ್ರಮ ಸಂಖ್ಯೆ 16ರ "ಶ್ರೀಮತಿ ಪಿ.ಡಿ. ಶೋಭಾ" ಅವರ ಹೆಸರಿನ ಮುಂದೆ ನಮೂದಾಗಿರುವ ದಿನಾಂಕ:7.6.2008 ಎಂಬುದರ ಬದಲಾಗಿ "7.5.2008" ಎಂದು ಮತ್ತು ಕ್ರಮ ಸಂಖ್ಯೆ 24ರ ಶ್ರೀಮತಿ "ಅನ್ನಪೂರ್ಣ ಎಸ್. ಚೌರ್" ಅವರ ಹೆಸರಿನ ಮುಂದೆ ನಮೂದಾಗಿರುವ ದಿನಾಂಕ:8.6.2008 ಎಂಬುದರ ಬದಲಾಗಿ "8.5.2008"ಎಂದು ತಿದ್ದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2121

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವಾ.ತೆ –2 & ಸಮನ್ವಯ)

ಸಹಕಾರ ಸಚಿವಾಲಯ

ವಿಷಯ : ತಾತಗುಣಿ ಶ್ರೀ ಮಾರುತಿ ಟೀಚರ್ಸ್ ಅಂಡ್ ಪೇರೆಂಟ್ಸ್ ಎಜುಕೇಷನ್ ಸೊಸೈಟಿ ಬೆಂಗಳೂರು, ದಕ್ಷಿಣ ತಾಲ್ಲೂಕು, ಬೆಂಗಳೂರು ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ : 1) ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಸಹಕಾರ ಸಂಘಗಳ ನಿಬಂಧಕರವರ ಪತ್ರ ಸಂಖ್ಯೆ :ಡಿಆರ್/ಎಸ್‌ಒಆರ್/ಪಿಟಿಷನ್/79/2008–09 ದಿನಾಂಕ :11.6.2009 ಮತ್ತು ವಿಚಾರಣಾ ವರದಿ ದಿನಾಂಕ :16.5.2009.

ವಿಷಯ: ತುಮಕೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಾಮುತ್ತಾ ಖಾಸಗಿ ವಾಹನಗಳ ನಿಲುಗಡೆಯನ್ನು ನಿಷೇಧಿಸುವ ಕುರಿತು.

ಉಲ್ಲೇಖ:1) ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮ ತುಮಕೂರು ಇವರ ಪತ್ರದ ಸಂ. ಕರಾಸಾ/ತುವಿ/ಸಂ/ಕಾ 1915/09-10 ದಿನಾಂಕ:26.08.2009.

2) ದಿನಾಂಕ: 26.08.2009 ರಂದು ಕೆಎಸ್‌ಆರ್‌ಟಿಸಿ ಇಲಾಖೆಯ ವತಿಯಿಂದ ಸುಗಮಸಾರಿಗೆ ಸಂಸ್ಥೆ ಸಂಬಂಧ ನಡೆದ ಪೂರ್ವಭಾವಿ ಸಭೆ ಮೇರೆಗೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ತುಮಕೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಉಲ್ಲೇಖ (1)ರ ಪತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ತಾಲ್ಲೂಕು ಕೇಂದ್ರಗಳ ಹಾಗೂ ಹೋಬಳಿ ಕೇಂದ್ರಗಳಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಮುಂಭಾಗದಲ್ಲಿ ಖಾಸಗಿ ಬಸ್ಸು ಟೆಂಪೋ ಮತ್ತು ಟ್ರ್ಯಾಕ್ಸ್‌ಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತ್ತದೆ. ಅಲ್ಲದೆ ವಾಹನಗಳ ಅಪಘಾತಗಳು ಆಗುವ ಸಾಧ್ಯತೆಗಳು ಇರುವುದರಿಂದ ಜಿಲ್ಲಾ ಕೇಂದ್ರದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಾಮುತ್ತಾ 500 ಮೀಟರ್ ಅಂತರದಲ್ಲಿ ತಾಲ್ಲೂಕು ಕೇಂದ್ರಗಳ ಹಾಗೂ ಹೋಬಳಿ ಕೇಂದ್ರಗಳಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಾಮುತ್ತಾ 300 ಮೀಟರ್ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಟೆಂಪೋ ಮತ್ತು ಟ್ರಾಕ್ಸ್‌ಗಳು ಹಾಗೂ ಇನ್ನಿತರ ಖಾಸಗಿ ಪ್ರಯಾಣಿಕರ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಆದೇಶ ನೀಡಲು ಕೋರಿರುತ್ತಾರೆ.

ಈ ಬಗ್ಗೆ ದಿನಾಂಕ:26.08.2009 ರಂದು ಸುಗಮ ಸಾರಿಗೆ ವ್ಯವಸ್ಥೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನದಂತೆ ಹಾಗೂ ಉಲ್ಲೇಖ (1)ರ ಪತ್ರದಲ್ಲಿ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ನಿಗಮ ತುಮಕೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಪ್ರಯಾಣಿಕರಿಗೆ ಸಂಚಾರಕ್ಕೆ ತೊಂದರೆಯಾವುದನ್ನು ಹಾಗೂ ವಾಹನಗಳ ಅಪಘಾತಗಳನ್ನು ತಪ್ಪಿಸುವ ದೃಷ್ಟಿಯಿಂದ ತುಮಕೂರು ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳ ಮತ್ತು ಹೋಬಳಿ ಕೇಂದ್ರಗಳಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಸುತ್ತಾಮುತ್ತಾ ಪ್ರದೇಶದಲ್ಲಿ ಖಾಸಗಿ ವಾಹನಗಳ ನಿಲುಗಡೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಎಂಎಜೆ(1) ಸಿಆರ್ 73/2009-2010, ದಿನಾಂಕ:28ನೇ ಆಗಸ್ಟ್, 2009

ಡಾ: ಸಿ. ಸೋಮಶೇಖರ, ಭಾ.ಆ.ಸೇ., ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಆದ ನಾನು 1963ರ ಕರ್ನಾಟಕ ಪೋಲೀಸ್ ಕಾಯ್ದೆ ಕಲಂ 31(1)(ಬಿ) ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ತುಮಕೂರು ಜಿಲ್ಲಾ ಕೇಂದ್ರದಲ್ಲಿರುವ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತ 500 ಮೀಟರ್ ವ್ಯಾಪ್ತಿಯಲ್ಲಿ ತಾಲ್ಲೂಕು ಕೇಂದ್ರಗಳಾದ ಗುಬ್ಬಿ/ ಚಿಕ್ಕನಾಯಕನಹಳ್ಳಿ/ ತಿಪಟೂರು/ ತುರುವೇಕೆರೆ/ ಸಿರಾ/ ಮಧುಗಿರಿ/ ಪಾವಗಡ/ ಕುಣಿಗಲ್/ ಕೊರಟಗೆರೆ ಮತ್ತು ಹೋಬಳಿ ಕೇಂದ್ರಗಳಲ್ಲಿರುವ ಗುಬ್ಬಿ ತಾಲ್ಲೂಕು ನಿಟ್ಟೂರು, ಕುಣಿಗಲ್ ತಾಲ್ಲೂಕು ಅಮೃತೂರು, ಹುಲಿಯೂರುದುರ್ಗ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತ 300 ಮೀಟರ್ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಟೆಂಪೋ ಮತ್ತು ಟೆಂಪೋ ಟ್ರ್ಯಾಕ್ಸ್‌ಗಳು ಹಾಗೂ ಇನ್ನಿತರೆ ಪ್ರಯಾಣಿಕರ ವಾಹನಗಳ ನಿಲುಗಡೆಯನ್ನು ದಿನಾಂಕ:28.08.2009 ರಿಂದ ಜಾರಿಗೆ ಬರುವಂತೆ ಸಂಪೂರ್ಣವಾಗಿ ನಿಷೇಧಿಸಿ ಆದೇಶಿಸಿದೆ.

ಈ ಆದೇಶವನ್ನು ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ನಾಮಫಲಕ ಬರೆಸಿ ಹಾಕಲು ಪೋಲೀಸ್ ಇಲಾಖಾಧಿಕಾರಿಗಳಿಗೆ ಸೂಚಿಸಿದೆ.

ಡಾ: ಸಿ. ಸೋಮಶೇಖರ್
ಜಿಲ್ಲಾಧಿಕಾರಿ
ಹಾಗೂ ಜಿಲ್ಲಾದಂಡಾಧಿಕಾರಿಗಳು, ತುಮಕೂರು ಜಿಲ್ಲೆ.

ಪಿ.ಆರ್.843

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ನಮೂನೆ

1) ಸಚಿವಾಲಯ : ಕರ್ನಾಟಕ ಸರ್ಕಾರ
2) ಇಲಾಖೆ : ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
3) ಸಬ್‌ಯೂನಿಟ್ : ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ.
4) ಸಾರ್ವಜನಿಕ ಪ್ರಾಧಿಕಾರ : ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು.

ಮೇಲ್ಮನವಿ ಪ್ರಾಧಿಕಾರ (ಹೆಸರು/ವಿಳಾಸ/ಫೋನ್ ಇತ್ಯಾದಿ)	ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ)	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ ಫೋನ್ ಇತ್ಯಾದಿ)
ಶ್ರೀ. ಬಿ.ಟಿ. ಕಾಂತರಾಜ್ ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವೃತ್ತ, ಶಿವಮೊಗ್ಗ - 577201	ಶ್ರೀ. ಹೆಚ್.ವಿ. ನಂಜೇಶಯ್ಯ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ - 577201	ಶ್ರೀ. ಎನ್.ಜೆ. ವಿರೂಪಾಕ್ಷಪ್ಪ ತಾಂತ್ರಿಕ ಸಹಾಯಕರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ - 577201
ಫ್ಯಾಕ್ಸ್ - 08182 - 270926	ಫ್ಯಾಕ್ಸ್ - 08182 - 222942	ಫ್ಯಾಕ್ಸ್ - 08182 - 222942
ಕಛೇರಿ ಫೋನ್ - 08182-270926	ಕಛೇರಿ ಫೋನ್-08182-222942	ಕಛೇರಿ ಫೋನ್-08182-222942
ಇ-ಮೇಲ್: se.smg@kpwd.gov.in	ಇ-ಮೇಲ್: spdivision@gmail.com	ಇ-ಮೇಲ್: spdivision@gmail.com

FORMAT

1) Secretariat : Govt. of Karnataka
2) Department : Public Works Department
3) Sub Unit : The Executive Engineer, P.W.P & I.W.T.D., Special Division, Shimoga.
4) Public Authority : The Chief Engineer, P.W.D Communication and Building (South) K.R.Bangalore.

Applellate Authority (Name / Address / Phone etc...)	Public Information Officer (Name / Address / Phone etc...)	Assistant Public Information Officer (Name / Address / Phone etc...)
Sri. B.T. Kantaraj Superintendent Engineer P.W.P & I.W.T.D. Circle, Shimoga - 577201	Sri. H.V. Nanjeshaiah Executive Engineer P.W.P & I.W.T.D., Special Division, Shimoga - 577201	Sri. N.J. Verupakshappa Technical Assistant P.W.P & I.W.T.D., Special Division, Shimoga - 577201
Fax - 08182 - 270926	Fax - 08182 - 222942	Fax - 08182 - 222942
Phone (Office) 08182 - 270926	Phone (Office) 08182 - 222942	Phone (Office) 08182 - 222942
E-Mail: se.smg@kpwd.gov.in	spdivision@gmail.com	spdivision@gmail.com

ನಮೂನೆ

ಮಾಹಿತಿ ಹಕ್ಕು ಅಧಿನಿಯಮ-2005

ಕಾರ್ಯಪಾಲಕ ಅಭಿಯಂತರವರ ಕಛೇರಿ,

ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,

ವಿಶೇಷ ವಿಭಾಗ, ಶಿವಮೊಗ್ಗ

ಮಾಹಿತಿ ಹಕ್ಕು ಅಧಿನಿಯಮ-2005 ಸೆಕ್ಷನ್ 5(1) (2)ರ ಅಡಿಯಲ್ಲಿ ಈ ಕಛೇರಿಯಿಂದ ನೇಮಿಸಲಾದ ಅಧಿಕಾರಿಗಳು ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾಗಿರುತ್ತಾರೆ.

ಈ ಕಛೇರಿಯಲ್ಲಿ ಮಾಹಿತಿ ದಾಖಲೆಗಳನ್ನು ನೀಡುವ ಅಧಿಕಾರಿಗಳು : ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1) ರ ಪ್ರಕಾರ.

ಮಾಹಿತಿ ಅಧಿಕಾರಿ ಹೆಸರು
ಶ್ರೀ ಹೆಚ್.ವಿ. ನಂಜೇಶಯ್ಯ

ಕಾರ್ಯಪಾಲಕ ಅಭಿಯಂತರು,
ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ.
ದೂರವಾಣಿ ಸಂಖ್ಯೆ: 222942

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(2) ರ ಪ್ರಕಾರ

ಸಹಾಯಕ ಮಾಹಿತಿ ಅಧಿಕಾರಿ ಹೆಸರು
ಶ್ರೀ ಎನ್.ಜೆ. ವಿರೂಪಾಕ್ಷಪ್ಪ

ತಾಂತ್ರಿಕ ಸಹಾಯಕ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ.
ದೂರವಾಣಿ ಸಂಖ್ಯೆ: 222942

ಮೇಲಿನ ಅಧಿಕಾರಿಗಳು ಮಾಹಿತಿಯನ್ನು 30 ದಿನಗಳೊಳಗಾಗಿ ನೀಡದಿದ್ದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಮತ್ತು ಮೇಲ್ಮನವಿಯನ್ನು ಸೆಕ್ಷನ್ 19(1)ರ ಪ್ರಕಾರ ಕೆಳಕಂಡ ಅಧಿಕಾರಿಯವರಿಗೆ ನೀಡಬಹುದು.

ಅಧೀಕ್ಷಕ ಅಭಿಯಂತರು,
ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,
ಶಿವಮೊಗ್ಗ ವೃತ್ತ, ಶಿವಮೊಗ್ಗ.

ಕರ್ತವ್ಯದ ಹಾಜರಾತಿ

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ - 2005 ಸೆಕ್ಷನ್ 5(1) ರ ಪ್ರಕಾರ ಹೆಚ್.ವಿ. ನಂಜೇಶಯ್ಯ, ಕಾರ್ಯಪಾಲಕ ಇಂಜಿನಿಯರ್, ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ.ಐ.ಓ.) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ:27.05.2009 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಸಹಿ: ಕಾರ್ಯಪಾಲಕ ಅಭಿಯಂತರು,
ಪದನಾಮ: ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ.

ಕರ್ತವ್ಯದ ಹಾಜರಾತಿ

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ - 2005 ಸೆಕ್ಷನ್ 5(1) ರ ಪ್ರಕಾರ ಎನ್.ಜೆ. ವಿರೂಪಾಕ್ಷಪ್ಪ, ತಾಂತ್ರಿಕ ಸಹಾಯಕ, ಆದ ನಾನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ.) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 27.05.2009 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಸಹಿ: ತಾಂತ್ರಿಕ ಸಹಾಯಕ
ಪದನಾಮ: ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಮಾಹಿತಿ ಹಕ್ಕು ಕೈಪಿಡಿ 2005
ಸೆಕ್ಷನ್ 4 (1) (ಬಿ) ಅನ್ವಯ


ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ವಿಶೇಷ ವಿಭಾಗ, ಶಿವಮೊಗ್ಗ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ
ಮಾಹಿತಿ ಹಕ್ಕು ಕೈಪಿಡಿ - 2005 ಸೆಕ್ಷನ್ 4 (1) (ಬಿ) ಅನ್ವಯ

I . ಕಛೇರಿಯ ಬಗ್ಗೆ ವಿವರಗಳು, ಕಾರ್ಯಗಳು ಮತ್ತು ಕರ್ತವ್ಯಗಳು

ಅ) ಕಛೇರಿಯ ಹೆಸರು : ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ.

ಆ) ರಚನೆ



ನಿಯೋಜನೆಯ ಮೇಲೆ ಇರುವ ನೌಕರರು

1) ಶ್ರೀ ಜಿ.ಎಸ್. ಜಯದೇವಾರಾಧ್ಯ, ಸಹಾಯಕ ಇಂಜಿನಿಯರ್
(ಲೋಕೋಪಯೋಗಿ ಇಲಾಖೆ ವಿಶೇಷ ಉಪವಿಭಾಗ, ಶಿವಮೊಗ್ಗ)

2) ಶ್ರೀ ಸಿ.ಎಸ್. ಸತೀಶ್, ದ್ವಿತಿಯ ದರ್ಜೆ ಸಹಾಯಕರು
(ಅಧೀಕ್ಷಕ ಅಭಿಯಂತರರವರ ಕಛೇರಿ, ಶಿವಮೊಗ್ಗ ವೃತ್ತ, ಶಿವಮೊಗ್ಗ)

3) ಶ್ರೀ ಎ.ಎಂ. ಲೋಕೇಶ್‌ರಾವ್, ಕ್ಲೀನರ್
(ನಂ.1 ಲೋ.ಇ. ಉಪವಿಭಾಗ, ಶಿವಮೊಗ್ಗ)

ಇ) ಕಾರ್ಯಗಳು ಮತ್ತು ಕರ್ತವ್ಯಗಳು:

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು, ಕಟ್ಟಡಗಳು, ಸೇತುವೆಗಳು ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಆರ್ಥಿಕ ಹಾಗೂ ಸೇವೆಗಳಿಗೆ ಸಂಬಂಧಿಸಿದ ಕೆಲಸ-ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ, ಹಾಗೂ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ ಹಾಗೂ ವಿಶೇಷ ಉಪವಿಭಾಗ, ಶಿವಮೊಗ್ಗಗಳನ್ನು ಒಳಗೊಂಡಿರುತ್ತದೆ.

II. ಅಧಿಕಾರಿಗಳು ಮತ್ತು ಸಿಬ್ಬಂದಿ : ಅಧಿಕಾರ ಹಾಗೂ ಕರ್ತವ್ಯಗಳು:

1) **ಕಾರ್ಯಪಾಲಕ ಇಂಜಿನಿಯರ್:** ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ ಉಪವಿಭಾಗಗಳು ಹಾಗೂ ವಿಶೇಷ ಉಪವಿಭಾಗ, ಶಿವಮೊಗ್ಗ ಉಪವಿಭಾಗಗಳ ವ್ಯಾಪ್ತಿಗೆ ಒಳಪಟ್ಟಂತೆ ಲೋಕೋಪಯೋಗಿ ಇಲಾಖೆಯ ಅಧಿಕೃತ ಮುಖ್ಯಸ್ಥರಾಗಿದ್ದು, ಸರ್ಕಾರಿ ನಿಯಮಗಳ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳಿಗೆ/ಒಳಪಟ್ಟು/ಪ್ರಕರಣಗಳ ವಿಲೇವಾರಿ ಮತ್ತು ಎಲ್ಲಾ ವ್ಯವಹಾರದ ಜವಬ್ದಾರಿ ಹೊಂದಿರುತ್ತಾರೆ ಹಾಗೂ ಅಧೀನ ಅಧಿಕಾರಿ/ಸಿಬ್ಬಂಧಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರುತ್ತಾರೆ.
2) **ತಾಂತ್ರಿಕ ಸಹಾಯಕರು:-** ತಾಂತ್ರಿಕ ಶಾಖೆಯ ಸಂಪೂರ್ಣ ಉಸ್ತುವಾರಿ ಹಾಗೂ ವಿಷಯ ನಿರ್ವಾಹಕರು ಮಂಡಿಸಲಾದ ಪ್ರತಿಯೊಂದು ತಾಂತ್ರಿಕ ವಿಚಾರಗಳ ಪತ್ರ ಹಾಗೂ ಕಡತಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಮುಂದಿನ ಆದೇಶಕ್ಕಾಗಿ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಇವರಿಂದ ಮಂಡಿಸಲಾಗುತ್ತಿದೆ.
3) **ಸಹಾಯಕ ಇಂಜಿನಿಯರ್ : 1**
    1) ನಂ.1 ಉಪವಿಭಾಗ, ಶಿವಮೊಗ್ಗ/ ವಿಶೇಷ ವಿಭಾಗ, ಶಿವಮೊಗ್ಗ ವ್ಯಾಪ್ತಿಯ ಅಂದಾಜು ಪಟ್ಟಿಗಳ ಪರಿಶೀಲನೆ, ಮಂಜೂರಾತಿ ಹಾಗೂ ನಬಾರ್ಡ್ ಕಾಮಗಾರಿಗಳು ಇತ್ಯಾದಿ.
    2) ನಬಾರ್ಡ್ ಕಾಮಗಾರಿಗಳ ಪ್ರಗತಿ ವರದಿ / ಪಿಸಿಆರ್ ಸಲ್ಲಿಕೆಯ ಪ್ರಗತಿ ವರದಿ ತಯಾರಿಸಿ ಸಲ್ಲಿಸುವುದು.
    3) ಜಿಲ್ಲಾ ಮುಖ್ಯ ರಸ್ತೆಗಳ ವಿವರ ನಿರ್ವಹಣೆ, ಪ್ರಗತಿ ವರದಿ ಹಾಗೂ ಸಂಬಂಧಿಸಿದ ಪತ್ರ ವ್ಯವಹಾರ.
    4) ನೆರೆಹಾವಳಿ ಕಾಮಗಾರಿಗಳ ಪ್ರಗತಿ ವರದಿ.
    5) ಉಪವಿಭಾಗಗಳ ಎಂಪಿಕ್ ಪ್ರಗತಿ ವರದಿ ತಯಾರಿಸುವುದು, ಹಾಗೂ ವಿಭಾಗ ಮಟ್ಟದ ವಿವಿಧ ಲೆಕ್ಕಶೀರ್ಷಿಕೆಗಳ ಅನುಗುಣವಾಗಿ ಮಾಸಿಕ ಪ್ರಗತಿ ವರದಿಯನ್ನು ಪೂರ್ಣಗೊಳಿಸುವುದು. ಭರವಸೆ ಸಮಿತಿಯ ಪಾಲನಾವರದಿ ತಯಾರಿಕೆ ಕ್ರೂಢೀಕರಿಸುವುದು.
    6) ಎಂಎಡಿಬಿ ಸಭೆಯ ಪತ್ರ ವ್ಯವಹಾರ ಮತ್ತು ಪ್ರಗತಿ ವರದಿ.
    7) ಇಐಆರ್‌ಎಲ್ / ವರ್ಕ್‌ಸ್ಲಿಪ್ ರಿಜಿಸ್ಟರ್ ನಿರ್ವಹಣೆ
    8) ಡಾ: ನಂಜುಂಡಪ್ಪ ಆಯೋಗದ ವರದಿಗೆ ಸಂಬಂಧಿಸಿದ ಕಾರ್ಯಕ್ರಮ ಪಟ್ಟಿ ತಯಾರಿಕೆ, ಪ್ರಗತಿ ವರದಿ ಪತ್ರ ವ್ಯವಹಾರ.
    9) ತಾಂತ್ರಿಕ ಶಾಖೆಗೆ ಸಂಬಂಧಿಸಿದ ಸರ್ಕಾರಿ ಆದೇಶಗಳು ಹಾಗೂ ಮೇಲಾಧಿಕಾರಿಗಳಿಂದ ಸ್ವೀಕೃತವಾದ ಸುತ್ತೋಲೆಗಳು.
    10) ಟೆಂಡರ್ ಅಗ್ರಿಮೆಂಟ್ ರಿಜಿಸ್ಟರ್, ಟೆಂಡರ್ ಪ್ರಕಟಣೆ ರಿಜಿಸ್ಟರ್, ಹಾಗೂ ಇನ್ನಿತರ ಅಗತ್ಯ ರಿಜಿಸ್ಟರ್ ನಿರ್ವಹಣೆ.
    11) ಎಲ್.ಎ.ಕ್ಯೂ./ಎಲ್.ಸಿ.ಕ್ಯೂ. ಕಡತ ನಿರ್ವಹಣೆ, ಎಲ್.ಎ.ಕ್ಯೂ. / ಎಲ್.ಸಿ.ಕ್ಯೂ. ಸಂಬಂಧಪಟ್ಟ ಮೂಲ ಕಡತ ನಿರ್ವಹಣೆ.
4) **ಸಹಾಯಕ ಇಂಜಿನಿಯರ್ : 2**
    1) ಭದ್ರಾವತಿ ಉಪ ವಿಭಾಗ, ವ್ಯಾಪ್ತಿಯ ಅಂದಾಜು ಪಟ್ಟಿಗಳ ಪರಿಶೀಲನೆ, ಮಂಜೂರಾತಿ ಹಾಗೂ ನಬಾರ್ಡ್ ಕಾಮಗಾರಿಗಳು ಇತ್ಯಾದಿ.
    2) ಉಪವಿಭಾಗದ ಎಂಪಿಕ್ ಪ್ರಗತಿ ವರದಿ ತಯಾರಿಸುವುದು ಹಾಗೂ ಲೆಕ್ಕಶೀರ್ಷಿಕೆಗಳ ಅನುಗುಣವಾಗಿ ಮಾಸಿಕ ಪ್ರಗತಿ ವರದಿಯನ್ನು ಪೂರ್ಣಗೊಳಿಸಿ ಸಲ್ಲಿಸುವುದು.
    3) ರಾಜ್ಯಹೆದ್ದಾರಿ ಮೂರು ವರ್ಷ ನಿರ್ವಹಣೆ ಕಾಮಗಾರಿ, ರಾಜ್ಯಹೆದ್ದಾರಿಗೆ ಸಂಬಂಧಿಸಿದಂತೆ ಕೆಆರ್‌ಡಿಸಿಎಲ್ ಕೆಶಿಪ್ ಇನ್ನಿತರೆ ಯೋಜನೆಯಡಿ ಸಂಬಂಧಿಸಿದಂತೆ ಅಂದಾಜುಪಟ್ಟಿ ಪರಿಶೀಲನೆ ಸಲ್ಲಿಕೆ, ಟೆಂಡರ್ ಹಾಗೂ ಪತ್ರ ವ್ಯವಹಾರ.

4) ಸಿಆರ್‌ಎಫ್ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜುಪಟ್ಟಿ ಪರಿಶೀಲನೆ ಟೆಂಡರ್ ಕರೆಯುವುದು ಪತ್ರ ವ್ಯವಹಾರ ಪ್ರಗತಿ ವರದಿ ಇತ್ಯಾದಿ.

5) ಗುಣ-ನಿಯಂತ್ರಣಕ್ಕೆ ಸಂಬಂಧಿಸಿದ ಸಾಮಾನ್ಯ ಪತ್ರ ವ್ಯವಹಾರ, ಸುತ್ತೋಲೆಗಳಲ್ಲಿ ವಿನ್ಯಾಸಕ್ಕೆ ಸಂಬಂಧಪಟ್ಟ ಸಾಮಾನ್ಯ ಪತ್ರ ವ್ಯವಹಾರ, ಇ-ಪ್ರಕ್ಯೂರ್‌ಮೆಂಟ್/ಇ-ಗೌರ್ನನೆನ್ಸ್ ತಾಂತ್ರಿಕ ಶಾಖೆಗೆ ಸಂಬಂಧಪಟ್ಟ ಪತ್ರ ವ್ಯವಹಾರ.

6) ಟೆಂಡರ್ ಅಗ್ರಿಮೆಂಟ್ ರಿಜಿಸ್ಟರ್, ಟೆಂಡರ್ ಪ್ರಕಟಣೆ ರಿಜಿಸ್ಟರ್, ಹಾಗೂ ಇನ್ನಿತರ ಅಗತ್ಯ ರಿಜಿಸ್ಟರ್ ನಿರ್ವಹಣೆ.

7) ಎಸ್.ಸಿ.ಪಿ. / ಟಿ.ಎಸ್.ಪಿ. ಯೋಜನೆಯಡಿ ಕಾಮಗಾರಿಗಳ ಕಾರ್ಯಕ್ರಮ ಪಟ್ಟಿ ತಯಾರಿಕೆ ಪ್ರಗತಿ ವರದಿ ಸಾಮಾನ್ಯ ಪತ್ರ ವ್ಯವಹಾರ.

5) ಕಿರಿಯ ಇಂಜಿನಿಯರ್ : 1 – ಖಾಲಿ –

6) ಅಧೀಕ್ಷಕರು : 1 – ಖಾಲಿ –

7) ಪ್ರಥಮ ದರ್ಜೆ ಸಹಾಯಕ : 1 ಸಿಬ್ಬಂದಿ (1)

ಅಧಿಕಾರಿ ಮತ್ತು ನೌಕರರ ಸೇವಾ ವಿವರಗಳು, ಸೇವಾಪುಸ್ತಕದ ನಿರ್ವಹಣೆ, ಕಛೇರಿಯ ಆಯವ್ಯಯ, ಗುತ್ತಿಗೆದಾರರ ನೋಂದಾಣಿ, ಸಿಬ್ಬಂಧಿ ವೆಚ್ಚದ ವಿವರ, ಸಿಬ್ಬಂಧಿ ವೇತನ ಬಿಲ್ ಕಾಮಗಾರಿ, ಮಾಹಿತಿ ಹಕ್ಕಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳು. ಕಛೇರಿಯ ಸಿಬ್ಬಂಧಿ ಶಾಖೆಯ ಕೆಲಸದ ಜೊತೆಗೆ ಲೆಕ್ಕ ಶಾಖೆಯ ಶಿವಮೊಗ್ಗ ನಂ.1 ಉಪ-ವಿಭಾಗದ ಕಾಮಗಾರಿ ಬಿಲ್‌ಗಳ ಆಡಿಟ್ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳು ಮತ್ತು ಪ್ರಗತಿ ವರದಿಯ ತಯಾರಿ ಮತ್ತು ಲೆಕ್ಕ ಅಧೀಕ್ಷಕರು ಮತ್ತು ಕಾರ್ಯಪಾಲಕ ಇಂಜಿನಿಯರ್‌ರವರು ಸೂಚಿಸಿದ ಇತರೆ ಕೆಲಸಗಳು.

8) ದ್ವಿತೀಯಾ ದರ್ಜೆ ಸಹಾಯಕ : 1 ಸಿಬ್ಬಂದಿ (2)

ತ್ರೈಮಾಸಿಕ, ಅರ್ಧವಾರ್ಷಿಕ, ವಾರ್ಷಿಕ ವಿವರಗಳ ನಿರ್ವಹಣೆ, ಕಛೇರಿಯ ಪತ್ರಗಳ ರವಾನೆ, ವಸತಿ ಗೃಹಗಳ ಹಂಚಿಕೆ, ಪ್ರವಾಸಿ ಮಂದಿರದ ನಿರ್ವಹಣೆ, ಹಾಗೂ ಕಾರ್ಯಪಾಲಕ ಇಂಜಿನಿಯರ್‌ರವರು ಸೂಚಿಸಿದ ಇತರೆ ಕೆಲಸಗಳು.

9) ದ್ವಿತೀಯಾ ದರ್ಜೆ ಸಹಾಯಕ : 2 – ಖಾಲಿ –

10) ಕಂಪ್ಯೂಟರ್ ಅನಾಲಿಸ್ಟ್ : 1 : – ಖಾಲಿ –

11) ವಾಹನ ಚಾಲಕ :– 2 : – ಖಾಲಿ –

12) ಡಿ ದರ್ಜೆ ನೌಕರರು :– 2 : – ಖಾಲಿ –

13) ಕಾವಲುಗಾರ :– 1 : – ಖಾಲಿ –

14) **ಲೆಕ್ಕ ಅಧೀಕ್ಷಕರು:** ಕಛೇರಿ ಲೆಕ್ಕ ಪತ್ರ ಶಾಖೆಯ ಸಂಪೂರ್ಣ ಮೇಲು ಉಸ್ತುವಾರಿ ಮಾಡುವುದು. ವಿಭಾಗ ಹಾಗೂ ಉಪವಿಭಾಗ ಕಛೇರಿಯ ಲೆಕ್ಕ ಪತ್ರಗಳು ಹಾಗೂ ಉಪವಿಭಾಗ ಕಛೇರಿಯ ಕಾಮಗಾರಿ ಬಿಲ್ಲುಗಳ ಪಾಸು ಮಾಡುವ ಬಗ್ಗೆ ಸಂಪೂರ್ಣ ಉಸ್ತುವಾರಿ ಹಾಗೂ ಮಾಸಿಕ ಸಭೆಗಳಿಗೆ ಹಾಜರಾಗುವುದು.

15) ಪ್ರಥಮ ದರ್ಜೆ ಲೆಕ್ಕ ಸಹಾಯಕ : 1

ಕಛೇರಿಯ ನಗದು ಶಾಖೆಯ ಪೂರ್ಣ ಪ್ರಭಾರ, ತೀರ್ಥಹಳ್ಳಿ, ಭದ್ರಾವತಿ, ಮತ್ತು ವಿಶೇಷ ಉಪ-ವಿಭಾಗ ಶಿವಮೊಗ್ಗ, ಉಪ-ವಿಭಾಗಗಳ ಬಿಲ್ ಆಡಿಟ್ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಕೆಲಸ ಹಾಗೂ ಬಿ.ಆರ್. ರಿಜಿಸ್ಟರ್‌ನ ಪಾಲನೆ ಮತ್ತು ನಿರ್ವಹಣೆ ಹಾಗೂ ಪೆಂಡಿಂಗ್ ಬಿಲ್‌ಗಳ ನಿರ್ವಹಣೆ, ಅನುದಾನ ಮತ್ತು ವೆಚ್ಚ ನಿರ್ವಹಣೆ ಹಾಗೂ ಲೆಕ್ಕ ಅಧೀಕ್ಷಕರು ಮತ್ತು ಕಾರ್ಯಪಾಲಕ ಇಂಜಿನಿಯರ್‌ರವರು ಸೂಚಿಸಿದ ಇತರೆ ಕೆಲಸಗಳು.

16) ದ್ವಿತೀಯಾ ದರ್ಜೆ ಲೆಕ್ಕ ಸಹಾಯಕ : 2 : – ಖಾಲಿ –

ನಿಯೋಜನೆಯ ಮೇಲೆ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು

1) ಸಹಾಯಕ ಇಂಜಿನಿಯರ್ : 3

1) ತೀರ್ಥಹಳ್ಳಿ ಉಪವಿಭಾಗದ ಅಂದಾಜುಪಟ್ಟಿಗಳ ಪರಿಶೀಲನೆ, ಮಂಜೂರಾತಿ, ಟೆಂಡರ್ ಕರೆಯುವುದು ಹಾಗೂ ನಬಾರ್ಡ್ ಕಾಮಗಾರಿಗಳು.

2) ಉಪವಿಭಾಗದ ಎಂಪಿಕ್ ಪ್ರಗತಿ ವರದಿ ತಯಾರಿಕೆ ಹಾಗೂ ಲೆಕ್ಕಶೀರ್ಷಿಕೆಗಳ ಅನುಗುಣವಾಗಿ ಮಾಸಿಕ ಪ್ರಗತಿ ವರದಿಯನ್ನು ಪೂರ್ಣಗೊಳಿಸಿ ಸಲ್ಲಿಸುವುದು.

3) ಎಂಪಿ/ಎಂಎಲ್‌ಎ ಹಾಗೂ ಇತರೆ ಠೇವಣಿ ಕೊಡುಗೆ ಕಾಮಗಾರಿಗಳ ಪ್ರಗತಿ ವರದಿ.

4) ತುಂಡುಗುತ್ತಿಗೆ ಅಗ್ರಿಮೆಂಟ್ ರಿಜಿಸ್ಟರ್

5) ಅಂದಾಜುಪಟ್ಟಿ ಮಂಜೂರಾತಿ ರಿಜಿಸ್ಟರ್ / ಮೇಲಾಧಿಕಾರಿಗಳಿಗೆ ಸಲ್ಲಿಸಿದ ಅಂದಾಜುಪಟ್ಟಿ ರಿಜಿಸ್ಟರ್.

6) ಸುವರ್ಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಕಾರ್ಯಕ್ರಮ ಪಟ್ಟಿ ತಯಾರಿಕೆ, ಪ್ರಗತಿ ವರದಿ ಸಾಮಾನ್ಯ ಪತ್ರ ವ್ಯವಹಾರ.

2) ದ್ವಿತೀಯಾ ದರ್ಜೆ ಸಹಾಯಕ : 3 (ಸಿಬ್ಬಂದಿ)

ಕಛೇರಿ ಪತ್ರಗಳ ಸ್ವೀಕೃತಿ ಮತ್ತು ವಿಭಾಗ ಕಛೇರಿಯ ಪ್ರಯಾಣ ಭತ್ಯೆ ಬಿಲ್ಲುಗಳ ಪಾವತಿ ಮತ್ತು ನಿರ್ವಹಣೆ, ಕಛೇರಿಯ ಉಗ್ರಾಣದ ಕೆಲಸ. ಲೆಕ್ಕ ಅಧೀಕ್ಷಕರು ಮತ್ತು ಕಾರ್ಯಪಾಲಕ ಇಂಜಿನಿಯರ್‌ರವರು ಸೂಚಿಸಿದ ಇತರೆ ಕೆಲಸಗಳು.

3) ಕ್ಲೀನರ್:

ಕಛೇರಿಯ ಎಲ್ಲಾ ಶಾಖೆಯೊಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ, ಕಡತ ಟಾಪಾಲನ್ನು ತಲುಪಿಸುವುದು ಹಾಗೂ ಕಛೇರಿಯನ್ನು ಸ್ವಚ್ಛವಾಗಿಡುವುದು.

III. ಮೇಲ್ವಿಚಾರಣೆ ಮತ್ತು ಜವಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:

1) **ಕಾರ್ಯಪಾಲಕ ಇಂಜಿನಿಯರ್:** ಸರ್ಕಾರದಿಂದ ಲಭ್ಯವಾದ ಅಧಿಕಾರ ಪ್ರತ್ಯಾ ಯೋಜನೆಯ ಅನುಸಾರ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವುದು, ವಿಭಾಗ ವ್ಯಾಪ್ತಿಯ ಕಾಮಗಾರಿಯ ಕಾರ್ಯನೀತಿಯ ಬಗ್ಗೆ ಪ್ರಸ್ತಾವನೆಗಳನ್ನು ವೃತ್ತ ಹಾಗೂ ಕೇಂದ್ರ ಕಛೇರಿಗೆ ಸಲ್ಲಿಸುವುದು.

2) **ತಾಂತ್ರಿಕ ಸಹಾಯಕರು:** ತಾಂತ್ರಿಕ ವಿಷಯಗಳ ಬಗ್ಗೆ ಹಾಗೂ ಇಲಾಖಾ ಕಾಮಗಾರಿಗಳ ಬಗ್ಗೆ ನಕ್ಷೆ ಅಂದಾಜು ಪಟ್ಟಿಗಳನ್ನು ಪರಿಶೀಲಿಸುವುದು, ಅಧಿಕಾರ ಯೋಜನೆಯ ಪ್ರಕಾರ ಕಾರ್ಯಪಾಲಕ ಇಂಜಿನಿಯರ್‌ರವರ ಅನುಮೋದನೆಗೆ ಮಂಡಿಸುವುದು. ಕಾರ್ಯಪಾಲಕ ಇಂಜಿನಿಯರ್‌ರವರಿಗೆ ತಾಂತ್ರಿಕ ವಿಷಯಗಳ ಬಗ್ಗೆ ಮಾಹಿತಿ ಒದಗಿಸುವುದು.

3) **ಸಹಾಯಕ ಇಂಜಿನಿಯರ್: ಕಿರಿಯ ಇಂಜಿನಿಯರ್:** ವಿಭಾಗ ವ್ಯಾಪ್ತಿಯ ಟೆಂಡರ್, ನಕ್ಷೆ, ಅಂದಾಜುಪಟ್ಟಿಗಳ ಪರಿಶೀಲನೆ, ಕಡತ ಮಂಡಿಸುವುದು, ಅಧಿಕಾರ ಪ್ರತ್ಯಾಯೋಜನೆಗಳ ಬಗ್ಗೆ ಮಾಹಿತಿ ಒದಗಿಸುವುದು.

4) **ಅಧೀಕ್ಷಕರು:** ಕಛೇರಿಯ ಎಲ್ಲಾ ಸಿಬ್ಬಂದಿಗಳ ನಿರ್ವಹಣೆ, ಆಡಳಿತ ಶಾಖೆಯ ಮೇಲ್ವಿಚಾರಣೆ, ಕಡತಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವುದು.

5) **ಪ್ರ.ದ.ಸ/ದ್ವಿ.ದ.ಸ :** ಪ್ರಸ್ತಾವನೆಗಳು ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ, ಶಿಫಾರಸ್ಸಿನೊಂದಿಗೆ ಆದೇಶಕ್ಕಾಗಿ ಮೇಲಾಧಿಕಾರಿಗಳಿಗೆ ಮಂಡಿಸುವುದು.

6) **ಕಂಪ್ಯೂಟರ್ ಅನಾಲಿಸ್ಟ್ :** ಕಛೇರಿಗೆ ಸಂಬಂಧಪಟ್ಟ ಪತ್ರಗಳ ಬೆರಳಚ್ಚು ಮಾಡುವುದು.

7) **ಚಾಲಕರು :** ಕಾರ್ಯಪಾಲಕ ಇಂಜಿನಿಯರ್‌ರವರ ವಾಹನ ಚಾಲನೆ ಮಾಡುವುದು ಮತ್ತು ವಾಹನಗಳ ಸೂಕ್ತ ನಿರ್ವಹಣೆ ಮಾಡುವುದು.

8) **'ಡಿ' ದರ್ಜೆ ನೌಕರರು:** ಕಛೇರಿಯ ಎಲ್ಲಾ ಶಾಖೆಯೊಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ, ಕಡತ ಟಾಪಾಲನ್ನು ತಲುಪಿಸುವುದು ಹಾಗೂ ಕಛೇರಿಯನ್ನು ಸ್ವಚ್ಛವಾಗಿಡುವುದು.

9) **ಕಾವಲುಗಾರ:** ಕಛೇರಿಯ ಒಳಗೆ ಇರುವ ಅವಶ್ಯ ದಾಖಲೆಗಳ ರಕ್ಷಣೆಗಾಗಿ ಕಛೇರಿಯನ್ನು ಕಾವಲು ಕಾಯುವುದು.

10) **ಲೆಕ್ಕ ಅಧೀಕ್ಷಕರು:** ಲೆಕ್ಕ ಪತ್ರ ಶಾಖೆಯ ಮೇಲ್ವಿಚಾರಣೆ ಕಡತಗಳ ವಿಲೇವಾರಿಗೆ ಕ್ರಮಕೈಗೊಳ್ಳುವುದು.

11) **ಪ್ರ.ದ.ಲೆ.ಸ/ದ್ವಿ.ದ.ಲೆ.ಸ:** ಬಿಲ್ಲುಗಳು ಹಾಗೂ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ಶಿಫಾರಸ್ಸಿನೊಂದಿಗೆ ಆದೇಶಕ್ಕಾಗಿ ಮೇಲಾಧಿಕಾರಿಗಳಿಗೆ ಮಂಡಿಸುವುದು.

IV. ಕಾರ್ಯನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು : ಕೆ.ಪಿ.ಡಬ್ಲ್ಯೂ 'ಡಿ' ಕೋಡ್ ಮತ್ತು ಕೆ.ಪಿ.ಡಬ್ಲ್ಯೂ 'ಎ' ಕೋಡ್ ಹಾಗೂ ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಆಕ್ಟ್ 2002 ರಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

V. ಕಾರ್ಯಗಳನ್ನು ನಿರ್ವಹಿಸುವಲ್ಲಿ ಇಲಾಖೆಯ ಸಿಬ್ಬಂದಿ ಹೊಂದಿರುವ ಅಥವಾ ಉಪಯೋಗಿಸುವ ನಿಯಮಗಳು:- ನಿಬಂಧನೆಗಳು, ಸೂಚನೆಗಳು, ಕೈಪಿಡಿ ಮತ್ತು ದಾಖಲೆಗಳು.

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958

ಆ) ಕರ್ನಾಟಕ ಆರ್ಥಿಕ ಸಂಹಿತೆ ನಿಯಮ

ಇ) ಖಜಾನೆ ಸಂಹಿತೆ.

ಈ) ಸಾದಿಲ್ವಾರು ವೆಚ್ಚದ ಕೈಪಿಡಿ

ಉ) ಕೆ.ಪಿ.ಡಬ್ಲ್ಯೂ.ಡಿ. 'ಎ' ಕೋಡ್

ಊ) ಕೆ.ಪಿ.ಡಬ್ಲ್ಯೂ.ಡಿ. 'ಡಿ' ಕೋಡ್

ಋ) ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966

ಎ) ಕರ್ನಾಟಕ ನಾಗರೀಕ ಸೇವೆಗಳು (ಸಿ.ಸಿ.ಎ.) ನಿಯಮಗಳು 1957

ಏ) ಕರ್ನಾಟಕ ಸರ್ಕಾರ ಸರ್ಕಾರಿ ವಸತಿಗೃಹಗಳ ಹಂಚಿಕೆ ನಿಯಮಗಳು 1986

ಐ) ಕಾರ್ಯಾಲಯದ ಕೈಪಿಡಿ

ಒ) ಉಗ್ರಾಣದ ಕೈಪಿಡಿ

ಓ) ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ನಿಯಮಗಳು (ಆದೇಶ ದಿನಾಂಕ:02.02.2001)

ಔ) ಲೋಇ ಮತ್ತು ನೀರಾವರಿ ಇಲಾಖಾ ಅಧಿಕಾರ ಪ್ರತ್ಯಾಯೋಜನೆಯ ನಿಯಮಗಳು (ಆದೇಶ ದಿನಾಂಕ:15.12.1994)

ಅಂ) ಸೇವಾ ವಿಷಯಗಳು ಇತ್ಯಾದಿ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ : ಆರ್ಥಿಕ ಇಲಾಖೆ : ಲೋಇ ಹೊರಡಿಸಿದ ಆದೇಶದ ಸುತ್ತೋಲೆ, ಸೂಚನೆಗಳು

VI. ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪಟ್ಟಿ

1) ವಿಷಯ ವಹಿ, ಸಿಬ್ಬಂದಿ ವಹಿ
2) ವಿಧಾನಸಭೆ : ವಿಧಾನಪರಿಷತ್ ಪ್ರಶ್ನೆಗಳಿಗೆ ಸಂಬಂಧಿಸಿದ ರಿಜಿಸ್ಟರ್
3) ನ್ಯಾಯಾಲಯದ : ಕೆಎಟಿ : ಕಾರ್ಮಿಕ ಪ್ರಕ್ರರಣಗಳ ರಿಜಿಸ್ಟರ್
4) ಟೆಂಡರ್ ಅನುಮೋದನೆ ರಿಜಿಸ್ಟರ್
5) ಆಯವ್ಯಯ ಅಂದಾಜುಪಟ್ಟಿ ಅನುಮೋದನೆ ರಿಜಿಸ್ಟರ್
6) ಖರೀದಿ ಸಮಿತಿ ಅನುಮೋದನೆ ರಿಜಿಸ್ಟರ್
7) ಇಲಾಖಾ ರಸ್ತೆ, ಕಟ್ಟಡ, ಸೇತುವೆಗಳ ಅಂಕಿ-ಅಂಶದ ರಿಜಿಸ್ಟರ್
8) ಇತರೆ ರಿಜಿಸ್ಟರ್‌ಗಳು.

VII. ನೀತಿ-ನಿಯಮಗಳನ್ನು ರೂಪಿಸಲು ಸಾರ್ವಜನಿಕರೊಂದಿಗೆ ಸಮಾಲೋಚಿಸಲು ಅಸ್ತಿತ್ವದಲ್ಲಿರುವ ಕಾರ್ಯ ವಿಧಾನದ ವಿವರಗಳು: ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ವಿಭಾಗ ಕಛೇರಿಯ ತಾಂತ್ರಿಕ ಸಹಾಯಕರನ್ನು ನೇಮಕ ಮಾಡಲಾಗಿದೆ, ಇವರು ಸಂಬಂಧಿಸಿದ ಸಾರ್ವಜನಿಕ ವಲಯಗಳಿಂದ ದೂರು ಆಕ್ಷೇಪಣೆಗಳನ್ನು ಆಹ್ವಾನಿಸಿ ಪರಿಶೀಲಿಸಿ ಅಂತಿಮ ಆದೇಶವನ್ನು ಹೊರಡಿಸಲು ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸಹಕಾರ ನೀಡುತ್ತಾರೆ.

VIII. ಸರ್ಕಾರದ ಒಂದು ಭಾಗವಾಗಿ ಅಥವಾ ಸಲಹೆಗಳನ್ನು ಪಡೆಯಲು ರಚಿತವಾದ 2 ಮತ್ತು ಹೆಚ್ಚು ವ್ಯಾಪ್ತಿಗಳನ್ನೊಳಗೊಂಡ ಮಂಡಳಿ, ಪರಿಷತ್ತು, ಸಮಿತಿ ಮತ್ತು ಇತರೆ ಅಂಗಗಳು ಮತ್ತು ಅವುಗಳ ಸಭೆಗಳು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದೆಯೇ ಅಥವಾ ಈ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತಿದೆಯೆ ಎಂಬ ಬಗ್ಗೆ ವಿವರಣೆ.

ಯಾವುದು ಇರುವುದಿಲ್ಲ.

IX. ಲೋಕೋಪಯೋಗಿ ಇಲಾಖೆಯ ವಿಶೇಷ ವಿಭಾಗದ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ವಿವರ ಹಾಗೂ ದೂರವಾಣಿ ಸಂಖ್ಯೆಗಳು.

ಕ್ರ. ಸಂ.	ಶ್ರೀಯುತರ ಹೆಸರು ಮತ್ತು ಹುದ್ದೆ	ಕಛೇರಿ ದೂರವಾಣಿ ಸಂಖ್ಯೆ	ಮೊಬೈಲ್ ಸಂಖ್ಯೆ
1)	ಹೆಚ್.ವಿ. ನಂಜೇಶಯ್ಯ - ಕಾರ್ಯಪಾಲಕ ಇಂಜಿನಿಯರ್	222942	9741779587
2)	ಎನ್.ಜೆ. ವಿರೂಪಾಕ್ಷಪ್ಪ - ತಾಂತ್ರಿಕ ಸಹಾಯಕರು	222942	9980446808
3)	ಬಿ.ಇ. ಅಣ್ಣಪ್ಪ - ಸಹಾಯಕ ಇಂಜಿನಿಯರ್	222942	9844536598
4)	ಕೆ.ವಿ. ಮಂಜುನಾಥ್ - ಸಹಾಯಕ ಇಂಜಿನಿಯರ್	222942	9448924671
5)	ಲೇಖಪ್ಪ - ಲೆಕ್ಕ ಅಧೀಕ್ಷಕರು	222942	9844748069
6)	ಜಿ. ಶಶಿಧರ್ - ಪ್ರ.ದ.ಸ.	222942	9900800720
7)	ಕೆ.ಕೆ. ಶಿವಕುಮಾರಸ್ವಾಮಿ - ಪ್ರ.ದ.ಲೆ.ಸ.	222942	9448105983
8)	ಆರ್. ಉಮಾಶಂಕರ್ - ದ್ವಿ.ದ.ಸ.	222942	9902332513

ನಿಯೋಜನೆ ಮೇಲಿನ ಸಿಬ್ಬಂದಿಗಳು

1)	ಜಿ.ಎಸ್. ಜಯಧೇವರಾಧ್ಯ – ಸಹಾಯಕ ಇಂಜಿನಿಯರ್	222942	9480070426
2)	ಸಿ.ಎಸ್. ಸತೀಶ್ – ದ್ವಿ.ದ.ಸ.	222942	9480023768
3)	ಲೋಕೇಶ್‌ರಾವ್ (ಕ್ಲೀನರ್)	222942	---

X. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನ ವಿವರಗಳು:

ಕ್ರ. ಸಂ.	ಶ್ರೀಯುತರ ಹೆಸರು	ಪದನಾಮ	ವೇತನ ಶ್ರೇಣಿ	ಮೂಲ ವೇತನ
1)	ಹೆಚ್.ವಿ. ನಂಜೇಶಯ್ಯ	ಕಾರ್ಯಪಾಲಕ ಇಂಜಿನಿಯರ್	18150–26925	25650
2)	ಎನ್.ಜೆ. ವಿರೂಪಾಕ್ಷಪ್ಪ	ತಾಂತ್ರಿಕ ಸಹಾಯಕರು	14050–25050	24450
3)	ಬಿ.ಇ. ಅಣ್ಣಪ್ಪ	ಸಹಾಯಕ ಇಂಜಿನಿಯರ್	11400–21600	11400
4)	ಕೆ.ವಿ. ಮಂಜುನಾಥ್	ಸಹಾಯಕ ಇಂಜಿನಿಯರ್	11400–21600	11400
5)	–ಖಾಲಿ–	ಕಿರಿಯ ಇಂಜಿನಿಯರ್	8825–16000	8825
6)	ಲೇಖಪ್ಪ	ಲೆಕ್ಕ ಅಧೀಕ್ಷಕರು	10000–18150	12300
7)	–ಖಾಲಿ–	ಅಧೀಕ್ಷಕ	10000–18150	10000
8)	ಜಿ. ಶಶಿಧರ್	ಪ್ರ.ದ.ಸ.	7275–13350	8825
9)	ಆರ್. ಉಮಾಶಂಕರ್	ದ್ವಿ.ದ.ಸ.	5800–10500	6125
10)	–ಖಾಲಿ–	ದ್ವಿ.ದ.ಸ.	5800–10500	5800
11)	ಕೆ.ಕೆ. ಶಿವಕುಮಾರಸ್ವಾಮಿ	ಪ್ರ.ದ.ಲೆ.ಸ.	7275–13350	9050
12)	–ಖಾಲಿ–	ದ್ವಿ.ದ.ಲೆ.ಸ.	5800–10500	5800
13)	–ಖಾಲಿ–	ದ್ವಿ.ದ.ಲೆ.ಸ.	5800–10500	5800
14)	–ಖಾಲಿ–	ಕಂಪ್ಯೂಟರ್ ಅನಾಲಿಸ್ಟ್	5800–10500	5800
15)	–ಖಾಲಿ–	ಚಾಲಕ	5800–10500	5800
16)	–ಖಾಲಿ–	ಡಿ ದರ್ಜೆ ನೌಕರರು	4800–7275	4800
17)	–ಖಾಲಿ–	ಡಿ ದರ್ಜೆ ನೌಕರರು	4800–7275	4800
18)	–ಖಾಲಿ–	ಕಾವಲುಗಾರ	4800–7275	4800

XI. 2009–10 ನೇ ಸಾಲಿನ ಆಯವ್ಯಯದಲ್ಲಿ ಲೋ.ಇ. ವಿವಿಧ ಯೋಜನಾವಾರು ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನದ ವಿವರಗಳು:

ಅ) 2009–10 ನೇ ಸಾಲಿನಲ್ಲಿ ವಿಶೇಷ ವಿಭಾಗ ಶಿವಮೊಗ್ಗಕ್ಕೆ ಆಯವ್ಯಯ ಕಟ್ಟಡ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ:

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	2009–10 ಅನುದಾನ (ರೂ. ಲಕ್ಷಗಳಲ್ಲಿ)
1.	4059 ನ್ಯಾಯಾಂಗ ಆಡಳಿತ (ಕೇಂದ್ರ ಪುರಸ್ಕೃತ ಯೋಜನೆ)	50.00
2.	4059 ನ್ಯಾಯಾಂಗ ಆಡಳಿತ (ರಾಜ್ಯವಲಯ ಯೋಜನೆ)	40.00
3.	4059 ಕಾರಾಗೃಹ	–
4.	4059 ಲೋಕೋಪಯೋಗಿ	400.00
5.	4059 ಅಗ್ನಿಶಾಮಕ ಮತ್ತು ರಕ್ಷಣೆ	–

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	2009-10 ಅನುದಾನ (ರೂ. ಲಕ್ಷಗಳಲ್ಲಿ)
6.	4059 ಜಿಲ್ಲಾಡಳಿತ	75.00
7.	4059 ಅಬಕಾರಿ	-
8.	4059 ವಾಣಿಜ್ಯ ತೆರಿಗೆ	50.00
9.	4202 ಸೆಕೆಂಡರಿ ಶಿಕ್ಷಣ	50.00
10.	4202 ಉನ್ನತ ಶಿಕ್ಷಣ	175.00
11.	4202 ತಾಂತ್ರಿಕ ಶಿಕ್ಷಣ	70.00
12.	4216 ನ್ಯಾಯಾಂಗ ಆಡಳಿತ (ಕೇಂದ್ರ ಪುರಸ್ಕೃತ ಯೋಜನೆ)	25.00
13.	4059 ಇತರೆ	50.00
14.	4059 ಆರ್.ಟಿ.ಓ.	25.00
15.	4216 ಇತರೆ	50.00

ಆ) 2009-10 ನೇ ಸಾಲಿನಲ್ಲಿ ಶಿವಮೊಗ್ಗ ವಿಶೇಷ ವಿಭಾಗಕ್ಕೆ ಆಯವ್ಯಯ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ:

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	2009-10 ಅನುದಾನ (ರೂ. ಲಕ್ಷಗಳಲ್ಲಿ)
1.	5054 ಅಭಿವೃದ್ಧಿ ಹಾಗೂ ಡಾಂಬರೀಕರಣ	80.00
2.	5054 ಸೇತುವೆಗಳ ನಿರ್ಮಾಣ	100.00
3.	5054 ಇತರೆಸ್ತೆ ನಿರ್ಮಾಣ	1500.00
4.	5054 ಕೇಂದ್ರ ರಸ್ತೆನಿಧಿ	15.00
5.	5054 ನಬಾರ್ಡ್ ಯೋಜನೆ	425.00
6.	5054 ರಸ್ತೆ ಮತ್ತು ಸೇತುವೆ ಯೋಜನೆ	450.00

XII. **ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಧಾನ ಅದಕ್ಕಾಗಿ ನಿಗಧಿಗೊಳಿಸಲಾದ ಮೊತ್ತ ಮತ್ತು ಫಲಾನುಭವಿಗಳ ವಿವರ:**

-ಯಾವುದು ಇರುವುದಿಲ್ಲ-

XIII. **ರಿಯಾಯಿತಿಗಳನ್ನು ಪಡೆಯುವವರ ಅಧಿಕಾರ ಪತ್ರಗಳನ್ನು ಮಂಜೂರು ಮಾಡುವ ಬಗ್ಗೆ ವಿವರ:**

-ಯಾವುದು ಇರುವುದಿಲ್ಲ-

XIV. **ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಲಭ್ಯವಿರುವ ಮಾಹಿತಿಗಳ ವಿವರಗಳು:**

Website: spdivision@gmail.com

XV. **ಸಾರ್ವಜನಿಕ ಉಪಯೋಗಕ್ಕಾಗಿ ಪುಸ್ತಕ ಭಂಡಾರ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಅಲ್ಲಿ ದೊರೆಯುವ ಸೌಲಭ್ಯಗಳು ಮತ್ತು ಕೆಲಸದ ಅವಧಿಯ ವಿವರಗಳು:**

-ಯಾವುದು ಇರುವುದಿಲ್ಲ-

XVI. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು (ಹುದ್ದೆ ಇತ್ಯಾದಿ ವಿವರಗಳು) ಮಾಹಿತಿ ಹಕ್ಕು ಅಧಿನಿಯಮ 2005 (ಕೇಂದ್ರ ಅಧಿನಿಯಮ 22) ರ ಸೆಕ್ಷನ್ 5 (2) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಲೋ. ಇಲಾಖೆಗೆ ಸಂಬಂಧಿಸಿದಂತೆ ಈ ಕಛೇರಿಯ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ / ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕ ಮಾಡಲಾಗಿದೆ.**

1) ಶ್ರೀ ಹೆಚ್.ವಿ. ನಂಜೇಶಯ್ಯ - ಕಾರ್ಯಪಾಲಕ ಇಂಜಿನಿಯರ್ : ಸಾರ್ವಜನಿಕ ಮಾಹಿತಿ ಅಧಿಕಾರಿ.

2) ಶ್ರೀ ಎನ್.ಜೆ. ವಿರೂಪಾಕ್ಷಪ್ಪ - ತಾಂತ್ರಿಕ ಸಹಾಯಕರು : ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ.

XVII. ನಿಗಧಿಗೊಳಿಸಲಾಗುವ ಇತರೆ ಮಾಹಿತಿಗಳು: ಸರ್ಕಾರವು ಮಾಹಿತಿ ಪಡೆಯುವ ಹಕ್ಕು ಅಧಿನಿಯಮಗಳನ್ನು ರಚಿಸಿದ ನಂತರ ಅವರಲ್ಲಿ ಬೇರೆ ಯಾವುದಾದರೂ ಮಾಹಿತಿಗಳನ್ನು ನಿಗಧಿಗೊಳಿಸಿದಲ್ಲಿ ಅದನ್ನು ಅಳವಡಿಸಲಾಗುವುದು.

ಹೆಚ್.ವಿ. ನಂಜೇಶಯ್ಯ
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ.

ಪಿ.ಆರ್.862

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಶಿರಸಿ ವಿಭಾಗ, ಶಿರಸಿ ಇವರ ನಡಾವಳಿಗಳು

ವಲಯ ಅರಣ್ಯಾಧಿಕಾರಿ, ಶಿರಸಿವಲಯ, ಶಿರಸಿ ಇವರ ಅರಣ್ಯ ಮೊಕದ್ದಮೆ ಸಂಖ್ಯೆ:1/91-92, ದಿನಾಂಕ:12ನೇ ಜೂನ್, 1991

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಯಿಂದ (ಜಿ) ವರೆಗೆ ಉಪಸ್ಥಿತಿ

ಮನೋಜಕುಮಾರ., ಭಾ.ಅ.ಸೇ.,

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ.

ವಲಯ ಅರಣ್ಯಾಧಿಕಾರಿ, ಶಿರಸಿ ವಲಯ, ಶಿರಸಿ ಫಿರ್ಯಾದಿದಾರರು...

(ಪ್ರತಿನಿಧಿಸಿದವರು: ಸಹಾಯಕ ಸರ್ಕಾರಿ ಅಭಿಯೋಜಕರು, ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿರಸಿ)

1) ಶ್ರೀ ಗೋಪಾಲ ತಿಮ್ಮಮಡಿವಾಳ, ಸಂಪಖಂಡ ಅರ್ಜಿದಾರರು...

2) ಶ್ರೀ ಹಜಿರಾಬಿ ಕೋಂ ಅಬ್ದುಲ್ ಜಲೀಲ ಹಸನಸಾಬ, ಗೌಡಳ್ಳಿ.

ಪ್ರಕರಣದ ಹಿನ್ನೆಲೆ:

ದಿನಾಂಕ:12.06.1991 ರಂದು ವಲಯ ಅರಣ್ಯಾಧಿಕಾರಿ, ಶಿರಸಿವಲಯ, ಶಿರಸಿ ಮತ್ತು ಸಿಬ್ಬಂದಿಯವರು ಶಿರಸಿ ನಗರದ ಹುಬ್ಬಳ್ಳಿ ಪಿಡಬ್ಲ್ಯೂಡಿ ರಸ್ತೆಯ ಹತ್ತಿರ ಬರುತ್ತಿದ್ದ ರಿಕ್ಷಾವನ್ನು ಕೈ ಮಾಡಿ ತಡೆದಾಗ ನಿಲ್ಲಿಸದೇ ಇದ್ದುದರಿಂದ ಬೆನ್ನಟ್ಟಿ ಬಂದಾಗ, ಮಾರಿಗುಡಿ ಹತ್ತಿರ ಭಾರತ್ ಲಾಡ್ಜ್ ಎದುರುಗಡೆ ರಿಕ್ಷಾವನ್ನು ನಿಲ್ಲಿಸಿ ಇಬ್ಬರು ಓಡಿ ಹೋದದ್ದು ಕಂಡುಬಂತು ಹಾಗೂ ಒಬ್ಬ ಡ್ರೈವರ ಸಿಕ್ಕಿಬಿದ್ದನು. ಆತನ ಹೆಸರು ಕೇಳಲಾಗಿ ಅಬ್ದುಲ್ ರೆಹಮಾನ ಹಸನಸಾಬ, ಗೌಡಳ್ಳಿ ಎಂದು ಉತ್ತರಿಸಿದನು. ಹಾಗೂ ಓಡಿಹೋದವರ ಹೆಸರು ಅಬ್ದುಲ್ ಜಲೀಲ ಹಸನಸಾಬ ಹಾಗೂ ಸನಾವುಲ್ಲಾ ಮರ್ದನ್ ಸಾಬ, ಗೌಡಳ್ಳಿ ಎಂಬುದಾಗಿ ತಿಳಿಸಿದನು. ಸದರಿ ರಿಕ್ಷಾವನ್ನು ಪರಿಶೀಲಿಸಿದಾಗ ಎರಡು ಬೀಟೆ ಜಾತಿಯ ಕೊರೆದ ನಡೆಗಳು ಹಾಗೂ ಏಳು ನಂದಿ ಜಾತಿಯ ಕೊರೆದ ನಡೆಗಳು ಇದ್ದು ಪಾಸ್ ವ ಪರ್ಮಿಟ್ ಇಲ್ಲದೇ ಇದ್ದುದು ಕಂಡುಬಂತು. ವಾಹನದ ಸಂಖ್ಯೆ ನೋಡಲಾಗಿ ಪ್ಯಾಸೆಂಜರ್ ರಿಕ್ಷಾ ನಂ.ಎಂವೈಇ-4656 ಆಗಿತ್ತು. ಈ ಕೃತ್ಯದ ಬಗ್ಗೆ 1963ರ ಕರ್ನಾಟಕ ಅರಣ್ಯ ಕಾಯ್ದೆ 24E, 50(2)K, 62(1)(3), 71(A) ಯಿಂದ (G), 80, 81, 104A, 104D ಕರ್ನಾಟಕ ಅರಣ್ಯ ನಿಯಮ 1969 ಕಲಂ 163, 144ರ ಅಡಿಯಲ್ಲಿ ಅರಣ್ಯ ಮೊಕದ್ದಮೆ, 1/91-92 ದಿನಾಂಕ:12.06.1991ನ್ನು ದಾಖಲಿಸಿ, ವಾಹನ ಹಾಗೂ ಸದರಿ ಉತ್ಪನ್ನಗಳ ಸಹಿತ ಈ ಪ್ರಾಧಿಕಾರದ ಸಮಕ್ಷಮ ಹಾಜರುಪಡಿಸಿ 1963ರ ಕರ್ನಾಟಕ ಅರಣ್ಯ ಕಾಯ್ದೆ 71(ಎ)ರ ಪ್ರಕಾರ ಕೈಗೊಳ್ಳಲು ವಲಯ ಅರಣ್ಯಾಧಿಕಾರಿ, ಶಿರಸಿ ವಲಯ, ಶಿರಸಿ ಇವರು ಕೋರಿರುತ್ತಾರೆ.

ಶ್ರೀಮತಿ ಹಾಜರಾಬಿ ಕೋಂ ಅಬ್ದುಲ್ ಜಲೀಲ ಇವರು ಅರ್ಜಿ ಸಲ್ಲಿಸಿ, ಅರಣ್ಯ ಇಲಾಖೆಯವರು ಜಪ್ತಿಪಡಿಸಿರುವ ವಾಹನ ರಿಕ್ಷಾ ನಂ.ಎಂವೈಇ-4656 ಇದು ತನ್ನ ಗಂಡ ಶ್ರೀ ಅಬ್ದುಲ್ ಜಲೀಲರವರಾಗಿದ್ದು, ಅವರು ದಿನಾಂಕ:02.07.1991 ರಂದು ಮರಣಹೊಂದಿದ್ದಾಗಿ (ಮರಣ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.) ಸದರಿ ವಾಹನವನ್ನು ತನ್ನ ಹಾಗೂ ತನ್ನ ಮಕ್ಕಳ ಜೀವನೋಪಾಯಕ್ಕಾಗಿ ಬಿಟ್ಟುಕೊಡಬೇಕಾಗಿ ವಿನಂತಿಸಿಕೊಂಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾರವಾರ ಇವರಿಗೆ ವಾಹನದ ನೋಂದಾಯಿತ ಮಾಲೀಕರ ಬಗ್ಗೆ ಮಾಹಿತಿ ಕೇಳಿದಾಗ ಅವರು ಗೋಪಾಲ ತಿಮ್ಮ ಮಡಿವಾಳ ಸಾ: ಸಂಪಖಂಡ ಎಂದು ತಿಳಿಸಿರುತ್ತಾರೆ. ಗೋಪಾಲ ತಿಮ್ಮ ಮಡಿವಾಳ ಇವರು ಸದರಿ ವಾಹನವನ್ನು ದಿನಾಂಕ:05.09.1985 ರಂದು ಸೇತು ಮಾದವನ್ ಎನ್. ನಾಯರ್, ಎಂಬುವವರಿಗೆ ಮಾರಾಟ ಮಾಡಿದ್ದಾಗಿ, ಆದಾಗ್ಯೂ ತಮಗೆ ಬಿಟ್ಟು ಕೊಡಬೇಕಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಅದರಂತೆ, ಶ್ರೀಮತಿ ಹಜಿರಾಬಿ ಕೋಂ ಅಬ್ದುಲ್ ಜಲೀಲ ಸಾ:ಗೌಡಳ್ಳಿ ಹಾಗೂ ಶ್ರೀ ಗೋಪಾಲ ತಿಮ್ಮ ಮಡಿವಾಳ ಸಾ: ಸಂಪಖಂಡ ಇವರುಗಳಿಗೆ ಈ ಕಛೇರಿ ನ್ಯಾಯಾಲಯದ ವಿಚಾರಣೆ ನೋಟೀಸ್ ದಿನಾಂಕ:29.10.1991, 20.06.1995, 24.01.2004, 22.07.2006 ಹಾಗೂ 25.11.2006 ಗಳಂದು ಜಾರಿ ಮಾಡಿದ್ದು ವಾಹನ ಮಾಲೀಕರು ಅಥವಾ ಅವರ ಪರ ವಕೀಲರು ಹಾಜರಾಗಿದ್ದು ಇರುವುದಿಲ್ಲ. ಸದರಿ ಪ್ರಕರಣದ ವಿಚಾರಣೆಯನ್ನು ಅಂತಿಮವಾಗಿ ದಿನಾಂಕ:01.08.2009 ರಂದು

ನಡೆಸಿ ಲಭ್ಯವಿರುವ ದಾಖಲೆಗಳಾದ ಎಫ್.ಐ.ಆರ್.ಇ.ಆರ್. ತಪಾಸಣಾ ವರದಿ, ಆರೋಪಿ ಹೇಳಿಕೆಗಳನ್ನು ಪರಿಗಣಿಸಿದ ನಂತರ ಈ ಕೆಳಗಿನ ಅಂಶಗಳನ್ನು ನಿರ್ಧರಿಸಬೇಕಾಗಿದೆ.

1) ಸದರಿ ವಾಹನವು ಬೀಟೆ ಸಾಗಾಣಿಕೆ ಮಾಡುವಾಗ ಅಮಾನತ್ತುಪಡಿಸಲಾಗಿದೆಯೇ?

2) ಅರಣ್ಯ ಅಪರಾಧದಲ್ಲಿ ವಾಹನದ ಮಾಲೀಕರು ಅಥವಾ ಅವರ ಚಾಲಕರು ಉದ್ದೇಶ ಪೂರ್ವಕವಾಗಿಯೇ ತಿಳಿದು ಭಾಗಿಯಾಗಿದ್ದಾರೆಯೇ?

3) ವಾಹನದ ಮಾಲೀಕರು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಚಾಲಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ?

4) ಅಪರಾಧದಲ್ಲಿ ಭಾಗಿಯಾಗಿದೆ ಎಂದು ಹೇಳಿರುವ ವಾಹನವನ್ನು ಅರ್ಜಿದಾರರ ಕೋರಿಕೆಯಂತೆ ಅಂತಿಮವಾಗಿ ಬಿಡುಗಡೆಗೊಳಿಸಬಹುದೆ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಇಂತಿದೆ:

1) ಸಕಾರಾತ್ಮಕವಾಗಿದೆ.

2) ಸಕಾರಾತ್ಮಕವಾಗಿದೆ.

3) ನಕಾರಾತ್ಮಕವಾಗಿದೆ.

4) ಅಂತಿಮ ಆದೇಶದಂತೆ.

ಅಂಶ-1: ದಿನಾಂಕ:12.06.1991 ರಂದು ವಲಯ ಅರಣ್ಯಾಧಿಕಾರಿ, ಶಿರಸಿವಲಯ, ಶಿರಸಿ ಮತ್ತು ಸಿಬ್ಬಂದಿಯವರು ಶಿರಸಿ ನಗರದ ಹುಬ್ಬಳ್ಳಿ ಪಿಡಬ್ಲ್ಯೂಡಿ ರಸ್ತೆಯ ಹತ್ತಿರ ಬರುತ್ತಿದ್ದ ರಿಕ್ಷಾವನ್ನು ಕೈ ಮಾಡಿ ತಡೆದಾಗ ನಿಲ್ಲಿಸದೇ ಇದ್ದುದರಿಂದ ಬೆನ್ನಟ್ಟಿ ಬಂದಾಗ, ಮಾರಿಗುಡಿ ಹತ್ತಿರ ಭಾರತ್ ಲಾಡ್ಜ್ ಎದುರುಗಡೆ ರಿಕ್ಷಾವನ್ನು ನಿಲ್ಲಿಸಿ ಇಬ್ಬರು ಓಡಿ ಹೋದದ್ದು ಕಂಡುಬಂತು ಹಾಗೂ ಒಬ್ಬ ಡ್ರೈವರ್ ಸಿಕ್ಕಿಬಿದ್ದನು. ಆತನ ಹೆಸರು ಕೇಳಲಾಗಿ, ಅಬ್ದುಲ್ ರೆಹಮಾನ ಹಸನಸಾಬ, ಗೌಡಳ್ಳಿ ಎಂದು ಉತ್ತರಿಸಿದನು. ಹಾಗೂ ಓಡಿಹೋದವರ ಹೆಸರು ಅಬ್ದುಲ್ ಜಲೀಲ ಹಸನಸಾಬ ಹಾಗೂ ಸನಾವುಲ್ಲಾ ಮರ್ದನ್ ಸಾಬ, ಗೌಡಳ್ಳಿ ಎಂಬುದಾಗಿ ತಿಳಿಸಿದನು. ಸದರಿ ರಿಕ್ಷಾವನ್ನು ಪರಿಶೀಲಿಸಿದಾಗ ಎರಡು ಬೀಟೆ ಜಾತಿಯ ಕೊರೆದ ನಡೆಗಳು ಹಾಗೂ ಏಳು ನಂದಿ ಜಾತಿಯ ಕೊರೆದ ನಡೆಗಳು ಇದ್ದು ಪಾಸ್ ವ ಪರ್ಮಿಟ್ ಇಲ್ಲದೇ ಇದ್ದುದು ಕಂಡುಬಂದಿದೆ. ವಾಹನದ ಸಂಖ್ಯೆ ನೋಡಲಾಗಿ ಪ್ಯಾಸೆಂಜರ್ ರಿಕ್ಷಾ ನಂ.ಎಂವೈಇ-4656 ಆಗಿತ್ತು. ಈ ಕೃತ್ಯದ ಬಗ್ಗೆ 1963ರ ಕರ್ನಾಟಕ ಅರಣ್ಯ ಕಾಯ್ದೆ 24E, 50(2)K, 62(1)(3), 71(A) ಯಿಂದ (G), 80, 81, 104A, 104D ಕರ್ನಾಟಕ ಅರಣ್ಯ ನಿಯಮ 1969 ಕಲಂ 163, 144ರ ಅಡಿಯಲ್ಲಿ ಅರಣ್ಯ ಮೊಕದ್ದಮೆ, 1/91-92 ದಿನಾಂಕ:12.06.1991ನ್ನು ದಾಖಲಿಸಿ, ಘಟನೆ ನಡೆದ ಸ್ಥಳದಲ್ಲೇ ಇದ್ದ ಶ್ರೀ ರಾಮವೀರಭದ್ರ ಶಿರಸಿಕರ್, ಟಿ.ಎಸ್.ಎಸ್. ರಸ್ತೆ, ಶಿರಸಿ ಹಾಗೂ ಶ್ರೀ ಚೆನ್ನಬಸಪ್ಪನಾಯ್ಕ, ಟಿ.ಎಸ್.ಎಸ್.ರಸ್ತೆ, ಶಿರಸಿ ಇವರುಗಳನ್ನು ಪಂಚರಾಗಿ ಹೇಳಿಕೆ ಪಡೆದುಕೊಳ್ಳಲಾಗಿದೆ. ಅಮಾನತ್ತುಪಡಿಸಿಕೊಂಡ ಪದಾರ್ಥಗಳು ಎರಡು ಬೀಟೆ ಜಾತಿಯ ಹಾಗೂ ಏಳು ನಂದಿ ಜಾತಿಯ ಹಲಗೆಗಳಿರುವುದನ್ನು ತಾವುಗಳು ಪರೀಕ್ಷಿಸಿ ದೃಢಪಡಿಸಿಕೊಂಡಿದ್ದಾಗಿ ಪಂಚರು ಹೇಳಿಕೆ ನೀಡಿರುತ್ತಾರೆ. ಹಾಗೂ ಅವುಗಳ ಮೇಲೆ ಯಾವುದೇ ಛಾಪಾ ವಗ್ಯೆರೆ ಇರುವುದಿಲ್ಲವೆಂದು, ರಹದಾರಿ ಇಲ್ಲವೆಂದು ಸವಿಸ್ತಾರವಾಗಿ ನುಡಿದಿರುತ್ತಾರೆ.

ಜಪ್ತಿಪಡಿಸಿದ ಕೊರೆದ ನಡೆಗಳ ಅಳತೆ ಮಾಡಲಾಗಿ ವಿವರ ಈ ಕೆಳಗಿನಂತಿದೆ.

ಅ.ನಂ.	ಜಾತಿ	ಉದ್ದ	ಅಗಲ ಮೀ.	ದಪ್ಪ ಮೀ.	ನಡೆ
1.	ಬೀಟೆ	2.78x	0.10x	0.04	2
2.	ನಂದಿ	2.18x	0.24x	0.03	7
				ಅಂತೂ:	9 ನಡೆಗಳು

ಅಂಶ-II-III ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವರದಿಯಂತೆ ಶ್ರೀ ಗೋಪಾಲ ತಿಮ್ಮ ಮಡಿವಾಳ ಸಾ:ಸಂಪಖಂಡ ಇವರಿಗೆ ಜಪ್ತಾದ ವಾಹನ ಆಟೋ ರಿಕ್ಷಾ ಎಂವೈಇ-4656 ಸೇರಿದ್ದಾಗಿರುತ್ತದೆ. ಸದರಿಯವರು ತನ್ನ ವಾಹನವನ್ನು ದಿನಾಂಕ:05.09.1985 ರಂದು ಶಿರಸಿಯ ಶ್ರೀ ಸೇತು ಮಾದವನ್ ಎನ್. ನಾಯರ್ ಎಂಬುವವರಿಗೆ, ಅವರು ದಿನಾಂಕ:11.07.1989 ರಂದು ಶ್ರೀ ಅಬ್ದುಲ್ ಜಲೀಲ್ ಹಸನ್ ಸಾಬ್ ಸಾ:ಗೌಡಳ್ಳಿ ಎಂಬುವವರಿಗೆ ಮಾರಾಟ ಮಾಡಿದ್ದಾಗಿ ಹಾಗೂ ಸದರ ವಾಹನವನ್ನು ಶ್ರೀ ಅಬ್ದುಲ್ ಜಲೀಲ್ ಹಸನ್ ಸಾಬ್ ಸಾ:ಗೌಡಳ್ಳಿ ಇವರಿಗೆ ಅಥವಾ ವಾರಸುದಾರರಿಗೆ ಬಿಟ್ಟುಕೊಡಲು ತನ್ನ ತಕರಾರು ಇಲ್ಲವಾಗಿ ಈ ಪ್ರಾಧಿಕಾರಕ್ಕೆ ಒಪ್ಪಿಗೆ ನೀಡಿರುತ್ತಾರೆ.

ವಾಹನದ ಮಾಲೀಕರುಗಳಿಗೆ ಸಾಕಷ್ಟು ಕಾಲಾವಕಾಶ ಕೊಟ್ಟಿದ್ದರೂ ಸಹ ಈ ಪ್ರಾಧಿಕಾರದ ಮುಂದೆ ಬಂದು ಸಾಕ್ಷಿ ನುಡಿಯಲು ವಿಫಲರಾಗಿರುತ್ತಾರೆ. ವಾಹನವನ್ನು ಅಮಾನತ್ತುಗೊಳಿಸುವಾಗ ಓಡಿಹೋದ ಅಪರಾಧಿಗಳಲ್ಲಿ ಅಬ್ದುಲ್ ಜಲೀಲ್ ಹಸನ್ ಸಾಬ್, ಸಾ:ಗೌಡಳ್ಳಿ, ಒಬ್ಬರಾಗಿದ್ದು ಅವರೇ ವಾಹನ ಮಾಲೀಕರಾಗಿದ್ದು ಅವರ ಪ್ರಜ್ಞಾಪೂರ್ವಕವಾಗಿಯೇ ವಾಹನವು

ಈ ಅಪರಾಧದಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ. ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿರುವುದು ಕಂಡುಬಂದಿರುವುದಿಲ್ಲ.

ಈ ಪ್ರಕರಣದ ಬಗ್ಗೆ ಈ ಪ್ರಾಧಿಕಾರವು ದಿನಾಂಕ:29.10.1991, 20.06.1995, 24.01.2004, 22.07.2006, 25.11.2006 ಹಾಗೂ 01.08.2009 ಗಳಂದು ವಿಚಾರಣೆ ನಿಗದಿಪಡಿಸಿ, ವಾಹನ ಮಾಲೀಕರಾದ ಅಬ್ದುಲ್ ಜಲೀಲ್ ಹಸನ್ ಸಾಬ, ಸಾ:ಗೌಡಳ್ಳಿ ಇವರ ವಾರಸುದಾರರಾಗಿರುವ, ಶ್ರೀಮತಿ ಹಜಿರಾಬಿ ಕೋಂ ಅಬ್ದುಲ್ ಜಲೀಲ್ ಸಾ:ಗೌಡಳ್ಳಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಹೆಸರಿಸಲ್ಪಟ್ಟಿರುವ ಶ್ರೀ ಗೋಪಾಲ ತಿಮ್ಮ ಮಡಿವಾಳ ಸಾ: ಸಂಪಖಂಡ ಇವರುಗಳಿಗೆ ನೋಂದಾಯಿತ ಅಂಚೆ ಮೂಲಕ ಸಮನ್ಸ್ ಕಳಿಸಲಾಗಿ ಅರ್ಜಿದಾರರು ಪಡೆದುಕೊಂಡಿದ್ದು ಇರುತ್ತದೆ. ಆದರೂ ಅರ್ಜಿದಾರರಾಗಲಿ ಅವರ ಪರ ವಕೀಲರಾಗಲಿ ನ್ಯಾಯಾಲಯದ ವೇಳೆಗೆ ಹಾಜರಾಗಿ ಹೇಳಿಕೆ ನೀಡಿದ್ದು ಇರುವುದಿಲ್ಲ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶ ಮಾಡಿದೆ.

ಆದೇಶ

ಈ ಮೇಲಿನ ಅಂಶಗಳ ಹಾಗೂ ವಿವರಗಳ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿ, ಶಿರಸಿ ವಲಯ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.1/91-92 ದಿನಾಂಕ:12.06.1991ಕ್ಕೆ ಸಂಬಂಧಿಸಿದಂತೆ ಸರ್ಕಾರದ ಪರ ಅಮಾನತ್ತುಪಡಿಸಿದ್ದ ರಿಕ್ಷಾ ನಂ.ಎಂವೈಇ-4656 ನ್ನು ಹಾಗೂ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಬೀಟೆ ಹಾಗೂ ನಂದಿ ತುಂಡುಗಳನ್ನು (9ನಡೆಗಳು) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ಆರೋಪಿತರ ಮೇಲೆ ದಾವೆ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ ಆ ದಾವೆಯ ಇತ್ಯರ್ಥದ ತನಕ ಅರಣ್ಯ ಸಂಪತ್ತನ್ನು ಕಾಯ್ದಿರಿಸತಕ್ಕದ್ದು.

ಈ ಆದೇಶ ತಲುಪಿದ ಮೂವತ್ತು (30) ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸದೇ ಇದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತವಾಗುತ್ತದೆ. ತದನಂತರ ವಾಹನವನ್ನು ಹಾಗೂ ಜಪ್ತು ಮಾಲನ್ನು ಕಾನೂನು ರೀತ್ಯಾ ವಿಲೇಗೊಳಿಸಲು ಆದೇಶಿಸಲಾಗಿದೆ. ಈ ಆದೇಶವನ್ನು ಈ ಪ್ರಾಧಿಕಾರದ ಮೊಹರು ಹಾಕಿ ದಿನಾಂಕ:10.08.2009ರಂದು ಹೊರಡಿಸಲಾಗಿದೆ.

ಮನೋಜಕುಮಾರ., ಭಾ.ಅ.ಸೇ.
ಅಧಿಕಾರಯುತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ.

ಪಿ.ಆರ್.845

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಡಬ್ಲ್ಯೂಸಿಎ/ಸಿ.ಆರ್-13/ಎಫ್.ಸಿ./2009, ದಿನಾಂಕ:28ನೇ ಆಗಸ್ಟ್, 2009

ಅರ್ಜಿದಾರರು:

1) ಸುಬ್ರಹ್ಮಣ್ಯ ಐತಾಳ್, ಬಿನ್ ದಿ॥ ಕೃಷ್ಣದೇವ ಐತಾಳ್.
2) ಗಿರಿಜಾ ಐತಾಳ್, ಕೋಂ ಸುಬ್ರಹ್ಮಣ್ಯ ಐತಾಳ್, ಹೋಲಿ ಕ್ರಾಸ್ ಆಸ್ಪತ್ರೆ, ತ್ರಾಸಿ, ಗುಜ್ಜಾಡಿ ಅಂಚೆ, ಕುಂದಾಪುರ ತಾಲ್ಲೂಕು.

ಪ್ರತಿವಾದಿಗಳು:

1) ರೋನಿ ಡಿ' ಸೋಜಾ ಬಿನ್ ಮೈಕಲ್ ಡಿ'ಸೋಜಾ. ವಾಸ: ಮನೆ ನಂಬರ್ 4-75, ಹಂಗಳೂರು ಅಂಚೆ, ಕುಂದಾಪುರ ತಾಲ್ಲೂಕು.
2) ನ್ಯಾಶನಲ್ ಇನ್ಸೂರೆನ್ಸ್ ಕಂ.ಲಿ., ಡಿವಿಜನಲ್ ಆಫೀಸ್, 1ನೇ ಮಹಡಿ, ಶಂಕರ ಬಿಲ್ಡಿಂಗ್ ಮೊಸ್ಕ್ಯೂ ರೋಡ್, ಉಡುಪಿ.

ಅಧಿಸೂಚನೆ

ಅರ್ಜಿದಾರರಾದ ಸುಬ್ರಹ್ಮಣ್ಯ ಐತಾಳ್ ಇವರು ತಮ್ಮ ಮಗನಾದ ವಿಷ್ಣುಮೂರ್ತಿ ಐತಾಳ್ ಇವರು 1ನೇ ಪ್ರತಿವಾದಿಯವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:01.08.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿವಸಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸುವುದೆಂದು ತಿಳಿಸಲಾಗಿದೆ.

ಎಂ. ಆನಂದಮೂರ್ತಿ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ.

ಪಿ.ಆರ್.846

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್.ಆರ್-27:2009, ದಿನಾಂಕ:27ನೇ ಆಗಸ್ಟ್, 2009

ಅರ್ಜಿದಾರರು:

1) ಶ್ರೀಮತಿ ಕಲ್ಯಾಣಮ್ಮ ಕೋಂ ಲೇಟ್ ಮಂಜೇಗೌಡ
2) ಗೀತಾ ಬಿನ್ ಲೇಟ್ ಮಂಜೇಗೌಡ
3) ಆರತಿ ಬಿನ್ ಲೇಟ್ ಮಂಜೇಗೌಡ
ವಾಸ: ದೇವಿನಗರ, ಹುಣಸಿನಕೆರೆ ರಸ್ತೆ, ಹಾಸನ ನಗರ.

ಪ್ರತಿವಾದಿಗಳು:

1) ಶ್ರೀ ಮನಸೂರ್ ಬಿನ್ ಅಹಮದ್ ಷರೀಫ್, ಅಂಬೇಡ್ಕರ್ ನಗರ, ಹಾಸನ.
2) ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹುಣಸೂರು.

ಪ್ರತಿನಿಧಿಸುವವರು:

ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹಾಸನ ಶಾಖೆ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಮಂಜೇಗೌಡ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:19.04.2009 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಪಿ.ಆರ್.847

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಕರ್ನಾಟಕ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/ಕಕ್ರೆಸಿಎಸ್/ಸಿಆರ್-03/2009-10, ದಿನಾಂಕ:23.06.2009.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-11/2009-10, ದಿನಾಂಕ:19ನೇ ಆಗಸ್ಟ್, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು. ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಕರ್ನಾಟಕ ಪತ್ತಿನ ಸಹಕಾರ ಸಂಘ ನಿ.,

ದಾವಣಗೆರೆ, ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಮೇಲ್ವಿಚಾರಕರು, 1ನೇ ವೃತ್ತ, ಡಿ.ಡಿ.ಸಿ.ಸಿ. ಬ್ಯಾಂಕ್ ನಿ., ದಾವಣಗೆರೆ. ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:19.08.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.850

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಕಾರ್ಮಿಕ ಭವನ, ಐ.ಟಿ.ಐ. ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ಸಂಖ್ಯೆ: ಡಬ್ಲ್ಯೂಸಿಎ/ಎಫ್‌ಸಿ/ಸಿ.ಆರ್-37/09, ದಿನಾಂಕ:5ನೇ ಸೆಪ್ಟೆಂಬರ್, 2009

ಅರ್ಜಿದಾರರು:

1) ಶ್ರೀ ಸಿದ್ಧಗಂಗಯ್ಯ S/o ಲೇ: ದಾಸಪ್ಪ, ವರ್ಷ-55.
2) ಶ್ರೀಮತಿ ಲಕ್ಷ್ಮಮ್ಮ W/o ಸಿದ್ಧಗಂಗಯ್ಯ, ವರ್ಷ-45.
3) ಕು॥ ಮಂಗಳಮ್ಮ D/o ಸಿದ್ಧಗಂಗಯ್ಯ, ವರ್ಷ-19.

ಪ್ರತಿವಾದಿಗಳು:

1) ಶ್ರೀ ವಿ. ಶಿವಕುಮಾರ್ S/o ವೀರಪ್ಪ ಸೀತಾರಾಮ ಭಟ್ಟರ ಪಾಳ್ಯ, ಯಂಟಗಾನಹಳ್ಳಿ (ಅಂಚೆ), ನೆಲಮಂಗಲ (ತಾ), ಬೆಂಗಳೂರು (ಜಿ).
2) ದಿ ಮ್ಯಾನೇಜರ್, ಮೆ: ನ್ಯೂ ಇಂಡಿಯಾ ಅಶೂರೆನ್ಸ್ ಕಂ.ಲಿ., ನಂ.47, ಗೋಪಾಲ್ ಕಾಂಪ್ಲೆಕ್ಸ್, 2ನೇ ಮಹಡಿ, ಬಜಾರ್ ಸ್ಟ್ರೀಟ್, ಯಶವಂತಪುರ, ಬೆಂಗಳೂರು-22.

ಪ್ರಕಟಣೆ

ಈ ಮೇಲೆ ನಮೂದಿಸಿರುವ ಅರ್ಜಿದಾರರು ತಾವು ಮೃತ ಶ್ರೀ ರಾಜ @ ತಿಮ್ಮರಾಜು ಇವರ ಅವಲಂಬಿತರೆಂದು, ಮೃತನು 1ನೇ ಪ್ರತಿವಾದಿ ಬಳಿ ಕ್ಲೀನರ್ & ಕೂಲಿ ಕೆಲಸ ಮಾಡುವಾಗ ಕೆಲಸದ ವೇಳೆಯಲ್ಲಿ ಹಾಗೂ ಕೆಲಸದ ಕಾರಣದಿಂದ ಉಂಟಾದ ಅಪಘಾತದಲ್ಲಿ ದಿನಾಂಕ:29.04.2009 ಮರಣ ಹೊಂದಿರುತ್ತಾರೆ ಎಂದು, ಈ ಸಂಬಂಧ ತಮಗೆ ಕಾಯ್ದೆಯ ಅನುಸಾರ ಪ್ರತಿವಾದಿಗಳಿಂದ ಬರತಕ್ಕ ಪರಿಹಾರವನ್ನು ಕೊಡಿಸಬೇಕೆಂದು ಈ ನ್ಯಾಯಾಲಯದ ಮುಂದೆ ಬೇಡಿಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ ಕಾರಣ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಬೇಡಿಕೆ ಅರ್ಜಿಯ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಮೇಲೆ ನಮೂದಿಸಿರುವ ಅರ್ಜಿದಾರರಲ್ಲದೇ, ತಾವೂ ಸಹಾ ಮೃತನ ನಿಜವಾದ "ಅವಲಂಬಿತರು" ಎಂದು ಪರಿಗಣಿಸಲು ಕೇಳಿಕೊಳ್ಳುವುದಾದರೇ, ಅಂತಹವರು ಈ ಪ್ರಕಟಣೆಯು ಈ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 (ಮೂವತ್ತು) ದಿವಸದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲಿ ಅಥವಾ ಅರ್ಜಿಗಳಾಗಲಿ ಬಾರದೇ ಇದ್ದಲ್ಲಿ, ಮೇಲ್ಕಂಡ ಅರ್ಜಿದಾರರ ಬೇಡಿಕೆ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಹಾಗೂ ಕಾರ್ಮಿಕ
ಅಧಿಕಾರಿ, ಉಪವಿಭಾಗ-1, ಬೆಂಗಳೂರು-560029

ಪಿ.ಆರ್.878

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯ

ಸಂಖ್ಯೆ:ಕಾಅಗ/ಕಾನಪ/ಎಫ್-64/2009/438, ದಿನಾಂಕ:11ನೇ ಸೆಪ್ಟೆಂಬರ್, 2009

ಅರ್ಜಿದಾರರು:

1) ವೀರಪ್ಪ ವೀರಭದ್ರಪ್ಪ ಕಲ್ಲೊಡಿ (ಮಗ)
2) ಪಾರವ್ವ ವೀರಪ್ಪ ಕಲ್ಲೊಡಿ R/o ಪುಟಗಾನೂರ, ತಾ:ಯಲಬುರ್ಗ, ಜಿ:ಕೊಪ್ಪಳ.

ಪ್ರತಿವಾದಿಗಳು:

1) ಮಹಾದೇವಪ್ಪ ಡಿ. ಬತ್ತೂರ R/o ಕರಿಯಮ್ಮ ಗುಡಿಯ ಹತ್ತಿರ, ಮುಳಗುಂದ ಜಿ: ಗದಗ.
2) ದಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ., ಎಸ್.ಕೆ. ಕಾಂಪ್ಲೆಕ್ಸ್, ಕೇಶ್ವಾಪುರ, ಹುಬ್ಬಳ್ಳಿ.

ಪ್ರಕಟಣೆ

ಅರ್ಜಿದಾರರಾದ ಶ್ರೀ ವೀರಪ್ಪ ವೀರಭದ್ರಪ್ಪ ಕಲ್ಲೊಡಿ ಮತ್ತು ಪಾರವ್ವ ವೀರಪ್ಪ ಕಲ್ಲೊಡಿ ಇವರು, ತಾವು ಮೃತ ಮುದಕಪ್ಪ ವೀರಭದ್ರಪ್ಪ ಕಲ್ಲೊಡಿ ಇವರ ಮಗ ಮತ್ತು ಹೆಂಡತಿ ಎಂದೂ, ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಮುದಕಪ್ಪ ವಿ. ಕಲ್ಲೊಡಿ ಇವರು ಒಂದನೇ ಪ್ರತಿವಾದಿಗಳಾದ ಮಹಾದೇವಪ್ಪ ಡಿ. ಬತ್ತೂರ ಇವರಲ್ಲಿ ಕ್ಲೀನರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲಿ ಅಥವಾ ಅರ್ಜಿಯನ್ನಾಗಲಿ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ, ಗದಗ ಜಿಲ್ಲೆ ಗದಗ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಕಾನೂನು ಅಡಿ ಆಯುಕ್ತರು.

ಪಿ.ಆರ್.914

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ- II, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ/ಎಸ್ಆರ್-117/09, ದಿನಾಂಕ:12ನೇ ಆಗಸ್ಟ್, 2009

ಅರ್ಜಿದಾರರು:

1) ಮನಿಷ ಮಹದೇವ ಗುಂಡ.
2) ಸುಭಾಬಾಯಿ ಉತ್ತಮ ಗುಂಡ,
ಎಲ್ಲರೂ ಇರುವುದು ಡೊಬಳೆಗಲ್ಲಿ, ವಿಜಾಪುರ.

ಪ್ರತಿವಾದಿಗಳು:

1) ಸಮಾಧಾನ ಭಾಗವತ ಭೋಸಲೆ,
ಟ್ರ್ಯಾಕ್ಟರ್ ಮಾಲೀಕರು, ನಂ. MH-13/AJ-0191 ಸಾ:ರೂಪಳೆ,
ತಾ: ಪಂಡರಪುರ, ಜಿ:ಸೊಲ್ಲಾಪುರ.
2) ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ.,
ಎಸ್.ಎಸ್. ಫ್ರಂಟರೋಡ್, ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಮಹಾದೇವ ಉತ್ತಮಗುಂಡ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:30.07.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲಿ ಅಥವಾ ಅರ್ಜಿಯಾಗಲಿ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು, ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಉಪವಿಭಾಗ-II, ವಿಜಾಪುರ.

ಪಿ.ಆರ್.881

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ- II, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ/ಎಸ್ಆರ್-103/09, ದಿನಾಂಕ:1ನೇ ಆಗಸ್ಟ್, 2009

ಅರ್ಜಿದಾರರು:

1) ಶ್ಯಾಮಲಾ ಅಣ್ಣಾಗುಂಡ
2) ಮಂದಾಕಿನಿ ಅಮೋಲಗುಂಡ
ಸಾ: ಡೊಬಳೆಗಲ್ಲಿ, ವಿಜಾಪುರ.

ಪ್ರತಿವಾದಿಗಳು:

1) ಅಂಬಾದಾಸ ಸದಾಶಿವ ಸೂರವಳೆ,
ಆಟೋ ರಿಕ್ಷಾ ನಂ. MH-13/G-4327 126. ಭವಾನಿಪೇಟ
ಮಡ್ಡಿವಸ್ತಿ, ಸೊಲ್ಲಾಪುರ.
2) ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ, ಎಸ್.ಎಸ್.
ಫ್ರಂಟರೋಡ್, ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಅಮೋಲ ಅಣ್ಣಾಗುಂಡ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:21.04.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲಿ ಅಥವಾ ಅರ್ಜಿಯಾಗಲಿ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು, ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ
ಪಿ.ಆರ್.913 ಆಯುಕ್ತರು, ಉಪವಿಭಾಗ-II, ವಿಜಾಪುರ.

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಪಂಚಾಯತಿ ಸದಸ್ಯ ಸ್ಥಾನಕ್ಕೆ ಚಾಮುಂಡಿಬೆಟ್ಟ ತಾಲ್ಲೂಕು ಪಂಚಾಯಿತಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಚುನಾವಣಾ ವೆಚ್ಚದ ಲೆಕ್ಕ ಪತ್ರಗಳನ್ನು ಸಲ್ಲಿಸದಿದ್ದ ಕಾರಣ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 308-ಸಿ ಪ್ರಕಾರ ಅನರ್ಹಗೊಳಿಸಿದ ಆದೇಶವನ್ನು ಹಿಂಪಡೆಯುವ ಬಗ್ಗೆ.

ಆದೇಶ ಸಂಖ್ಯೆ:ರಾಚುಆ/01(21)/ಟಿಜಡ್‌ಪಿ/2007, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2009

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಪಂಚಾಯತಿ ಸದಸ್ಯ ಸ್ಥಾನಕ್ಕೆ ಚಾಮುಂಡಿಬೆಟ್ಟ ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಿಂದ ಸಾರ್ವತ್ರಿಕ ಚುನಾವಣೆ 2005ರಲ್ಲಿ ಸ್ಪರ್ಧಿಸಿದ್ದ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಹೇಳಲಾಗುವುದು) ರ ಪ್ರಕರಣ 308-ಬಿ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚ ಮಿತಿ) ನಿಯಮಗಳು 2005ರ ನಿಯಮ 2 ಮತ್ತು ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚ ಮಿತಿ) ಆದೇಶ 2005 (ಇನ್ನು ಮುಂದೆ ಸದರಿ ಆದೇಶ ಎಂದು ಹೇಳಲಾಗುವುದು)ರ ಖಂಡ 3 ರ ಪ್ರಕಾರ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ನಿಗದಿತ ನಮೂನೆಯಲ್ಲಿ ಚುನಾವಣಾ ಫಲಿತಾಂಶ ಘೋಷಿತವಾದ 30 ದಿನಗೊಳಗೆ ಸಲ್ಲಿಸಲು ವಿಫಲರಾಗಿದ್ದಾರೆಂದು ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ವರದಿ ಮಾಡಿದ್ದರು.

ಸದರಿ ಅಧಿನಿಯಮದ ಪ್ರಕರಣ 308-ಸಿ ಸದರಿ ಆದೇಶದ ಖಂಡ 6ರ ಉಪಖಂಡ (5)ರನ್ವಯ ದಿನಾಂಕ:08.05.2006ರಂದು ನೋಟೀಸನ್ನು ಅಭ್ಯರ್ಥಿಗೆ ನೀಡಿ ಅವರನ್ನು ಏಕೆ ಅನರ್ಹಗೊಳಿಸಬಾರದು ಎಂಬುದಕ್ಕೆ ನೋಟೀಸು ತಲುಪಿದ 20 ದಿನಗಳೊಳಗಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಕಾರಣಗಳನ್ನು ಸಲ್ಲಿಸತಕ್ಕದೆಂದು ತಿಳಿಸಲಾಗಿತ್ತು.

ಮೇಲ್ಕಂಡ ನೋಟೀಸು ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರಿಗೆ ಜಾರಿಯಾಗಿದ್ದಾಗ್ಯೂ ಕೂಡ ಅವರು ಆಯೋಗಕ್ಕೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಹಾಗೂ ಜಿಲ್ಲಾಧಿಕಾರಿಗಳೂ ಸಹ ಅಭ್ಯರ್ಥಿಯು ಚುನಾವಣಾ ವೆಚ್ಚದ ಲೆಕ್ಕ ವಿವರಗಳನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿದ್ದರು.

ಈ ರೀತಿ ಅಭ್ಯರ್ಥಿಯು ಸರಿಯಾದ ಕಾರಣ ಅಥವಾ ಸಮರ್ಥನೆಗಳನ್ನು ನೀಡದೇ ಚುನಾವಣಾ ವೆಚ್ಚದ ಲೆಕ್ಕ ಪತ್ರಗಳನ್ನು ಸಲ್ಲಿಸಲು ವಿಫಲರಾಗಿರುವುದರಿಂದ ರಾಜ್ಯ ಚುನಾವಣಾ ಆಯೋಗವು ಸದರಿ ಅಧಿನಿಯಮದ ಪ್ರಕರಣ 308-ಸಿ ರನ್ವಯ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರನ್ನು ಆದೇಶ ಸಂಖ್ಯೆ: ರಾಚುಆ/01(21)/ ಟಿಜಡ್‌ಪಿ/2007, ಬೆಂಗಳೂರು ದಿನಾಂಕ:08.01.2008 ರಂತೆ ಆರು ವರ್ಷಗಳ ಅವಧಿಗೆ ಅನರ್ಹರೆಂದು ಘೋಷಿಸಿತು.

ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್‌ಅರ್ಜಿ ಸಂಖ್ಯೆ:4383/2008 (ಎಲ್‌ಬಿ ಇಎಲ್‌ಇ) ಅನ್ನು ದಾಖಲಿಸಿ ಚುನಾವಣಾ ಆಯೋಗದ ಆದೇಶವನ್ನು ಪ್ರಶ್ನಿಸಿದ್ದರು. ಅವರು ತಮ್ಮ ರಿಟ್ ಅರ್ಜಿಯಲ್ಲಿ ತಾವು ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಂಬಂಧಿಸಿದ ಚುನಾವಣಾಧಿಕಾರಿಗಳಿಗೆ ನಿಗದಿತ ಅವಧಿಯೊಳಗೆ ಸಲ್ಲಿಸಿದ್ದಾಗ್ಯೂ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ರಾಜ್ಯ ಚುನಾವಣಾ ಆಯೋಗವು ತಮ್ಮನ್ನು ಆರು

ವರ್ಷಗಳ ಅವಧಿಗೆ ಅನರ್ಹಗೊಳಿಸಿ ಆದೇಶ ಹೊರಡಿಸಿದ್ದು ಆಯೋಗದ ಸದರಿ ಆದೇಶ ಸಂಖ್ಯೆ ರಾಚುಆ/ 01(21)/ ಟಿಜಡ್‌ಪಿ/2007, ಬೆಂಗಳೂರು ದಿನಾಂಕ:08.01.2008 ಅನ್ನು ರದ್ದುಪಡಿಸಲು ಕೋರಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:25.06.2009 ರಲ್ಲಿ ಹೊರಡಿಸಿದ ಆದೇಶದಲ್ಲಿ ಆಯೋಗವು ಹೊರಡಿಸಿರುವ ಆದೇಶ ಸಂಖ್ಯೆ: ರಾಚುಆ/01/(21)/ಟಿಜಡ್‌ಪಿ/2007, ಬೆಂಗಳೂರು ದಿನಾಂಕ:08.01.2008 ಅನ್ನು ರದ್ದುಪಡಿಸಿ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿ ಅವರು ಸಲ್ಲಿಸಿರುವ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಪರಿಶೀಲಿಸಿ ಸೂಕ್ತ ಆದೇಶವನ್ನು ಹೊರಡಿಸಲು ಸೂಚಿಸಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಚುನಾವಣಾ ವೆಚ್ಚದ ಲೆಕ್ಕವಿವರಗಳನ್ನು ಸಲ್ಲಿಸಿರುವ ಬಗ್ಗೆ ಪರಿಶೀಲಿಸಿ ವಸ್ತುನಿಷ್ಟ ವರದಿಯನ್ನು ಆಯೋಗಕ್ಕೆ ಕಳುಹಿಸಿಕೊಡುವಂತೆ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆರವರನ್ನು ಕೋರಲಾಗಿತ್ತು. ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಪತ್ರಸಂಖ್ಯೆ ಇಎಲ್‌ಎನ್(2)11/2009-10 ದಿನಾಂಕ:19.08.2009 ರಂತೆ ಆಯೋಗಕ್ಕೆ ವರದಿಯನ್ನು ಕಳುಹಿಸಿರುತ್ತಾರೆ. ಜಿಲ್ಲಾಧಿಕಾರಿಗಳ ವರದಿಯನ್ನು ಪರಿಶೀಲಿಸಲಾಗಿ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಅವರ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ದಿನಾಂಕ:25.01.2006 ರಂದು ಸಲ್ಲಿಸಿರುವುದಾಗಿ ಆ ಕ್ಷೇತ್ರದ ಚುನಾವಣಾಧಿಕಾರಿಗಳು ದಿನಾಂಕ:06.02.2006ರ ವರದಿಯಲ್ಲಿ ತಿಳಿಸಿದ್ದು, ನಂತರ ಚುನಾವಣಾಧಿಕಾರಿಗಳು ದಿನಾಂಕ:13.02.2006ರ ವರದಿಯಲ್ಲಿ ಈ ಕ್ಷೇತ್ರಕ್ಕೆ ನಾಗರಾಜು ಎಂಬ ಹೆಸರಿನ ಮೂರು ಅಭ್ಯರ್ಥಿಗಳು ಸ್ಪರ್ಧಿಸಿದ್ದರಿಂದ ಕೈತಪ್ಪಿನಿಂದಾಗಿ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಚುನಾವಣಾ ವೆಚ್ಚದ ಲೆಕ್ಕದ ವಿವರಗಳನ್ನು ಸಲ್ಲಿಸಿಲ್ಲವೆಂದು ತಿಳಿಸಲಾಗಿದ್ದು, ನಂತರ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಸಲ್ಲಿಸಿರುವ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಮೈಸೂರು ತಾಲ್ಲೂಕು ಕಛೇರಿಗೆ ನೀಡಿರುವುದಾಗಿಯೂ ತಿಳಿಸಿರುತ್ತಾರೆ. ಅಲ್ಲದೆ ತಹಶೀಲ್ದಾರ್ ಮೈಸೂರು ತಾಲ್ಲೂಕು ಇವರು ಸಹ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸಿರುವುದಾಗಿ ಮತ್ತು ವೆಚ್ಚಮಿತಿ ಮೀರಿರುವುದಿಲ್ಲವೆಂದು ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ವಿವರಿಸಿರುವ ಕಾರಣಗಳಿಂದ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರು ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸಿರುವುದು ಸಾಬೀತಾಗಿರುವುದರಿಂದ ಅವರನ್ನು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 308-ಸಿ ಅನುಸಾರ ಅನರ್ಹಗೊಳಿಸಲು ಬರಲಾರದು. ಆದುದರಿಂದ ಆದೇಶ ಸಂಖ್ಯೆ: ರಾಚುಆ/01(21)/ ಟಿಜಡ್‌ಪಿ/2007, ಬೆಂಗಳೂರು ದಿನಾಂಕ:08.01.2008 ಪ್ರಾರಂಭದಿಂದಲೇ ಶೂನ್ಯವಾದ ಆದೇಶವಾಗಿರುತ್ತದೆ. ಆದುದರಿಂದ ಶ್ರೀ ಕೆ.ನಾಗರಾಜು ಬಿನ್ ಕೆಂಪೇಗೌಡ ರವರನ್ನು ಆದೇಶ ಸಂಖ್ಯೆ:ರಾಚುಆ/01(21)/ಟಿಜಡ್‌ಪಿ/2007, ಬೆಂಗಳೂರು ದಿನಾಂಕ:08.01.2008ರಲ್ಲಿ ಅನರ್ಹಗೊಳಿಸಿರುವ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಆಯುಕ್ತರು,
ರಾಜ್ಯ ಚುನಾವಣಾ ಆಯೋಗ.

ಪಿ.ಆರ್.915

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ, ಉಪವಿಭಾಗ-2, ಬೆಂದೂರ್ ವೆಲ್ ವೃತ್ತ, ಕಂಕನಾಡಿ, ಮಂಗಳೂರು-2, ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ:ಎಸ್‌ಆರ್-24/2009ಎಫ್, ದಿನಾಂಕ:14ನೇ ಸೆಪ್ಟೆಂಬರ್, 2009

ಅರ್ಜಿದಾರರು:

1) ಆಯಿಷಾ ಗಂಡ ಝುಕಾರಿಯ, ಪ್ರಾಯ 19 ವರ್ಷ.
2) ಉಮರ್ ಕೆ. ತಂದೆ ಅಬ್ದುಲ್ ಖಾದರ್, ಪ್ರಾಯ:58 ವರ್ಷ.
3) ಸಾರಮ್ಮ ಗಂಡ ಉಮರ್ ಕೆ. ಪ್ರಾಯ:47 ವರ್ಷ.
4) ಅಮೀನಬಾನು ತಂದೆ ಉಮರ್ ಕೆ. ಪ್ರಾಯ: 18 ವರ್ಷ, ವಾಸ:ಶಾಂತಿಬೆಟ್ಟುಮನೆ, ಕಾಕ್ರಾಡಿ ಗ್ರಾಮ, ಪುತ್ತೂರು ತಾಲ್ಲೂಕು.

ಪ್ರತಿವಾದಿಗಳು:

1) ಎ. ಆಶ್ರಫ್, ತಂದೆ: ಉಮ್ಮರ್ ಹಾಜಿ, ವಾಸ: ಶಾಂತಿ ಬೆಟ್ಟುಮನೆ, ನೆಲ್ಲಾಡಿ ಅಂಚೆ, ಕಾಕ್ರಾಡಿ ಗ್ರಾಮ, ಪುತ್ತೂರು ತಾಲ್ಲೂಕು.
2) ಶಾಖಾಧಿಕಾರಿ, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ, ಪೋರ್ಟ್ ಬಿಲ್ಡಿಂಗ್ ಮುಖ್ಯರಸ್ತೆ, ಪುತ್ತೂರು ತಾಲ್ಲೂಕು.

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ಆಯಿಷಾ ಇವರು ತಮ್ಮ ಗಂಡನಾದ ಶ್ರೀ ಝುಕಾರಿಯ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:14.07.2009ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್. ಗೋಪಾಲಗೌಡ
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ
ಉಪವಿಭಾಗ-2, ಮಂಗಳೂರು.

ಪಿ.ಆರ್.923

ಆಯುಕ್ತರ ಕಛೇರಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಸಿಎಫ್‌ಎಸ್:ಪಿಡಿ:ಪಿಟಿಎಲ್:9/2002-03, ಬೆಂಗಳೂರು, ದಿನಾಂಕ:10ನೇ ಸೆಪ್ಟೆಂಬರ್, 2009

ವಿಷಯ: ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ವಿತರಿಸಲಾಗುವ ಸೀಮೆಎಣ್ಣೆಯ ಪರಿಷ್ಕೃತ ದರಪಟ್ಟಿಯನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮಸಂಖ್ಯೆಯ ದಿನಾಂಕ:05.10.2007ರ ಅಧಿಸೂಚನೆ.

2) ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಪತ್ರ ಸಂಖ್ಯೆ:ಪಿ-20028/2/2000-ಪಿಪಿ(VOI-III), ದಿನಾಂಕ:23.05.2008 ಮತ್ತು ಪಿ:20028/2/2000-ಪಿಪಿ(VOI-IV) ದಿನಾಂಕ:06.07.2009.

3) ಸರ್ಕಾರದ ಪತ್ರ ಸಂಖ್ಯೆ: ಆನಾಸ 58 ಎಫ್‌ಪಿಪಿ/2009, ದಿನಾಂಕ:03.08.2009.

4) ಈ ಕಛೇರಿಯ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ:31.08.2009.

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (4)ರ ಅಧಿಸೂಚನೆಯಲ್ಲಿ ಸೀಮೆಎಣ್ಣೆಯ ಪರಿಷ್ಕೃತ ದರಪಟ್ಟಿಯನ್ನು ದಿನಾಂಕ:01.09.2009 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿತ್ತು. ಪ್ರಸ್ತುತ ಸರ್ಕಾರವು ಸೇವಾ ತೆರಿಗೆಯನ್ನು ರದ್ದುಪಡಿಸಿದ ಹಿನ್ನೆಲೆಯಲ್ಲಿ ಸೀಮೆಎಣ್ಣೆಯ ದರಪಟ್ಟಿಯನ್ನು ಪರಿಷ್ಕರಿಸಬೇಕಾಗಿದ್ದು ದಿನಾಂಕ:01.09.2009 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಹೆಚ್.ಆರ್.ಶ್ರೀನಿವಾಸ, ಭಾ.ಆ.ಸೇ. ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಆದ ನಾನು ಸೀಮೆಎಣ್ಣೆ (ಉಪಯೋಗದ ಮೇಲಿನ ನಿರ್ಬಂಧ ಮತ್ತು ದರ ನಿಗದಿ) ಆದೇಶ 1993 ರ ಉಪಬಂಧಗಳಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಸಿಎಲ್ 172 ಎಫ್‌ಸಿಎಸ್ 70 ಎಸ್.ಓ.2243, ದಿನಾಂಕ:23.10.1970ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಾರ್ವಜನಿಕ ವಿತರಣಾ ಪದ್ಧತಿಯ ಸೀಮೆಎಣ್ಣೆಯ ಗರಿಷ್ಟ ಮಾರಾಟ ದರವನ್ನು ಪರಿಷ್ಕರಿಸಿ ದರಪಟ್ಟಿಯನ್ನು ಸಿದ್ಧಪಡಿಸಿದ್ದು, ಅನುಬಂಧದಲ್ಲಿರುವ ಸದರಿ ದರಪಟ್ಟಿಯನ್ನು ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:01.09.2009 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಈ ಮೂಲಕ ಆದೇಶಿಸಿದೆ.

ಹೆಚ್.ಆರ್. ಶ್ರೀನಿವಾಸ
ಆಯುಕ್ತರು,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಇಲಾಖೆ, ಬೆಂಗಳೂರು.

ಅನುಬಂಧ

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಸೀಮೆಎಣ್ಣೆ ದರಪಟ್ಟಿ, ದಿನಾಂಕ:01.09.2009 ರಿಂದ ಜಾರಿಗೆ ಬರುವಂತೆ

ಕ್ರ. ಸಂ.	ವಿವರಗಳು	ದೂರ 130 ಕಿ.ಮೀ. (ದರಪ್ರತಿ ಕೆ.ಎಲ್.ಗೆ)
1.	ಎಕ್ಸ್‌ಟರ್ಮಿನಲ್‌ದರ	8241.90
2.	ವ್ಯಾಟ್ ತೆರಿಗೆ @ 4%	329.68
3.	ಟರ್ಮಿನಲ್ ವಿತರಣಾ ದರ	8571.58

4.	ಆಯಿಲ್ ಕಂಪನಿಗೆ ನೀಡಬೇಕಾದ ಸಾಗಾಣಿಕೆ ದರ	167.39
5.	ಆಯಿಲ್ ಕಂಪನಿಗೆ ಪಾವತಿಸಬೇಕಾದ ಮೊತ್ತ	8738.97
6.	ಸಗಟು ವಹಿವಾಟುದಾರರ ಕಮೀಷನ್	263.00
7.	ನ್ಯಾಯಬೆಲೆ ಅಂಗಡಿಗೆ ಸೀಮೆಎಣ್ಣೆ ವಿತರಿಸುವ ಸಾಗಾಣಿಕೆ ದರ	0
8.	ಸುಮೌಲ್ಯ ತೆರಿಗೆ @4% (ಸಗಟು ಲಾಭಾಂಶ)	10.52
9.	ಸಗಟು ಬೆಲೆ	9012.49
10.	ಸರ್ಕಾರಕ್ಕೆ ಪಾವತಿಸಬೇಕಾದ ವ್ಯತ್ಯಾಸದ ದರ ಪ್ರತಿ ಕೆ.ಎಲ್.ಗೆ	75.51
11.	ಸಗಟು ವಿತರಣಾ ಬೆಲೆ ಪ್ರತಿ ಕೆ.ಎಲ್.ಗೆ	9088.00
12.	ಚಿಲ್ಲರೆ ಮಾರಾಟಗಾರರ ಕಮೀಷನ್ ಪ್ರತಿ ಕೆ.ಎಲ್.ಗೆ	300.00
13.	ಸುಮೌಲ್ಯ ತೆರಿಗೆ:@4% (ಚಿಲ್ಲರೆ ಲಾಭಾಂಶ)	12.00
14.	ಚಿಲ್ಲರೆ ಮಾರಾಟ ದರ ಪ್ರತಿ ಕೆ.ಎಲ್.ಗೆ	9400.00
15.	ಚಿಲ್ಲರೆ ಮಾರಾಟ ದರ ಪ್ರತಿ ಲೀಟರ್‌ಗೆ	9.40

ಆಯುಕ್ತರ ಪರವಾಗಿ,

ಪಿ.ಆರ್.925

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಅಷ್ಟಲಕ್ಷ್ಮಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ಹರಿಹರ ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಸಮಾಪನೆ/ಸಿಆರ್-10/2006-07, ದಿನಾಂಕ:16.11.2006.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪತ್ರ ದಿನಾಂಕ:28.08.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಎಆರ್-31/ಆರ್‌ಜಿಎನ್/29156/02-03, ದಿನಾಂಕ:20.06.2002 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:16.11.2006 ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ:ನೋಸಂರ/ಸಿಆರ್-10/2006-07, ದಿನಾಂಕ:14ನೇ ಸೆಪ್ಟೆಂಬರ್, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಬಿ.ಕುಬೇರಪ್ಪ, ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಅಷ್ಟಲಕ್ಷ್ಮಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ಹರಿಹರ ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ಮೇಲ್ಕಂಡ ವಾಹನದ ಬಗ್ಗೆ ಯಾರು ವಾರಸುದಾರರು ಇಲ್ಲಿಯವರೆಗೆ ಹಾಜರಾಗದೇ ಇರುವುದರಿಂದ ಸದರಿ ವಾಹನಗಳ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನಗಳನ್ನು ಶ್ರೀಗಂಧ ಮತ್ತು ಇತರೇ ಅರಣ್ಯ ಉತ್ಪನ್ನವನ್ನು ಕಳ್ಳಸಾಗಣೆ ಮಾಡಲು ಉಪಯೋಗಿಸಿದಕ್ಕಾಗಿ ವಾಹನಗಳನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿ ಮಾಡಿದವರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ ಈ ಮೇಲ್ಕಂಡ ವಾಹನಗಳ ಬಗ್ಗೆ ಯಾವ ವಾರಸುದಾರರು ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ

ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮಹೇಶ್ ಬಿ. ಶಿರೂರ್
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿ.ಆರ್.966

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ನಾಗರಸನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ದಾವಣಗೆರೆ-ತಾ. ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/ಎಂ.ಪಿ.ಸಿ.ಎಸ್.ನಾಗರಸನಹಳ್ಳಿ/08-09,ಸಿಆರ್-38, ದಿನಾಂಕ:09.01.2009.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-19/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ನಾಗರಸನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ದಾವಣಗೆರೆ-ತಾ, ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ. ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.729

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಶ್ರೀ ವೆಂಕಟೇಶ್ವರ ಕ್ರೆಡಿಟ್ ಕೋ-ಆಫ್ ಸೊಸೈಟಿ ನಿ., ದಾವಣಗೆರೆ, ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/ವೆಂಕಟೇಶ್ವರ ಸಿಎಸ್/08-09, ಸಿಆರ್-33, ದಿನಾಂಕ:09.01.2009.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗಲು ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-18/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಶ್ರೀ ವೆಂಕಟೇಶ್ವರ ಕ್ರೆಡಿಟ್ ಕೋ-ಆಫ್ ಸೊಸೈಟಿ ನಿ., ದಾವಣಗೆರೆ, ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಶ್ರೀ ಎಸ್.ಜಿ. ರುದ್ರಪ್ಪ, ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಾವಣಗೆರೆ, ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ

ಪಿ.ಆರ್.730 ಸಹಕಾರ ಸಂಘಗಳ ಉಪನಿಬಂಧಕರು,

ದಾವಣಗೆರೆ ಜಿಲ್ಲೆ, ದಾವಣಗೆರೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಧುಗಿರಿ ಉಪವಿಭಾಗ, ಮಧುಗಿರಿ, ಇವರ ಕಾರ್ಯಾಲಯದ ನಡವಳಿಕೆಗಳು

ವಿಷಯ: ಸಿ.ಇ.ಪಿ.ನಂ.138/2001-02 ರಲ್ಲಿ ಆಧಾರವಾಗಿರುವ ಸ್ಥಿರಾಸ್ತಿಗಳನ್ನು ಮೂಲ ಖಾತೆದಾರರಾದ ಶ್ರೀ ಜಿ. ಕಾವಲ್ಲಪ್ಪ ಮತ್ತು ಪತ್ನಿ ಎಂ. ಉಮಾದೇವಿ ಇವರ ಹೆಸರಿಗೆ ಪುನರ್ ವರ್ಗಾಯಿಸುವ ಕುರಿತು.

ಉಲ್ಲೇಖ:1) ಮ್ಯಾನೇಜರ್, ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಅರಸಾಪುರ, ಕೊರಟಗೆರೆ ತಾಲ್ಲೂಕು, ಇವರ ಪ್ರಸ್ತಾವನೆ ದಿನಾಂಕ:13.07.2009.

2) ಸಹಕಾರ ಅಭಿವೃದ್ಧಿ ಅಧಿಕಾರಿ ಕೊರಟಗೆರೆ ಇವರ ಪತ್ರದ ಕ್ರಮಸಂಖ್ಯೆ ಸ.ಅ.ಅ.ಕೊ: ಹಣದುರುಪಯೋಗ: ವಿಎಸ್‌ಎಸ್‌ಬಿಎನ್:ಅರಸಾಪುರ:45/2009-10, ದಿನಾಂಕ:21.07.2009.

ಪ್ರಸ್ತಾವನೆ:

ಶ್ರೀ ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ, ಭಕ್ತರಹಳ್ಳಿ, ಮಧುಗಿರಿ ತಾಲ್ಲೂಕು, ಇವರು ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ತುಮಕೂರು ಮತ್ತು ಇದರ ಪೂಲ್ ಕಮಿಟಿ ವತಿಯಿಂದ ವೇತನ ಕಾರ್ಯದರ್ಶಿಯಾಗಿ ನೇಮಕಗೊಂಡು ವ್ಯವಸಾಯ ಸೇವಾ ಸಹಕಾರ ಸಂಘ/ ಬ್ಯಾಂಕ್ ನಿ., ಅರಸಾಪುರ, ಕೊರಟಗೆರೆ ತಾಲ್ಲೂಕು ಇವರ ವೇತನ ಕಾರ್ಯದರ್ಶಿಯಾಗಿ ದಿನಾಂಕ:29.09.1982 ರಿಂದ 10.01.2000 ರವರೆಗೆ ಕೆಲಸ ನಿರ್ವಹಿಸಿರುತ್ತಾರೆ. ಈ ಅವಧಿಯಲ್ಲಿ

ಸಂಘದ ಹಣ ದುರುಪಯೋಗ ಪಡಿಸಿಕೊಂಡಿದ್ದರಿಂದ ಅವರ ಮೇಲೆ ಕಲಂ 64ರ ವಿಚಾರಣೆ ಮತ್ತು ಆಡಿಟ್ ನಡೆದು ತರುವಾಯ ಅದಿಭಾರ ಅರ್ಜಿಯನ್ನು ಕಲಂ 69ರ ರೀತ್ಯಾ ಸಲ್ಲಿಸಿ ವಿಚಾರಣೆ ನಡೆದು ದಿನಾಂಕ:28.11.2001 ರಂದು ರೂ.12,59,790-22 ಗಳಿಗೆ ಅವಾರ್ಡ್ ಆಗಿರುತ್ತದೆ. ಈ ದಾವಾ ಪ್ರಕ್ರಿಯೆಗಳು ನಡೆಯುವಾಗ ದುರುಪಯೋಗ ಹಣದ ಭದ್ರತೆಗಾಗಿ ಸಹಕಾರ ಕಾಯಿದೆ ಕಲಂ 103ರ ರೀತಿ ಅವಾರ್ಡ್‌ಗೆ ಅಥವಾ ಆದೇಶಕ್ಕೆ ಮುನ್ನ ಆಸ್ತಿಯ ಜಪ್ತಿಯ ಆದೇಶ ನಂ.ಸ.ಸಂ.ಸ.ನಿ.33:ಎಬಿಎನ್:ಎಬಿಜೆ:ಸಿಆರ್-116/2000-01 ದಿನಾಂಕ:28.03.2001ರಲ್ಲಿ ಜಿ. ಕಾವಲ್ಲಪ್ಪ ಮತ್ತು ಅವರ ಪತ್ನಿ ಹೆಸರಿನಲ್ಲಿದ್ದ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳು ಸಂಘದ ಹೆಸರಿಗೆ ಜಪ್ತಿಯಾಗಿರುತ್ತವೆ ಮತ್ತು ದಿನಾಂಕ:28.11.2009ರಂದು ಅಂತಿಮ ತೀರ್ಪಾಗಿ ಸದರಿ ಜಪ್ತಿಯಾದ ಸ್ಥಿರಾಸ್ತಿಗಳನ್ನು ಸ್ಥಿರೀಕರಣಗೊಳಿಸಿ ಆದೇಶಿಸಿರುತ್ತದೆ. ತರುವಾಯ ಅಮಲ್ಜಾರಿ ಅರ್ಜಿ ನಂ.138/2001-02 ದಿನಾಂಕ:21.01.2002ರ ರೀತ್ಯಾ ರೂ.18,72,970/-ಗಳಿಗೆ ಅಮಲ್ಜಾರಿ ದಾಖಲಾಗಿರುತ್ತದೆ.

ಏತನ್ಮಧ್ಯೆ ಮೇಲೆ ವಿವರಿಸಿರುವ ತೀರ್ಪು ಋಣಿದಾರರು ಮತ್ತು ಅವರ ಪತ್ನಿಯವರು ಸರ್ವೆ ನಂ.38 ಮತ್ತು 71 ರಲ್ಲಿರುವ ಜಮೀನನ್ನು ಆಧಾರ ಮಾಡಿ ಕೃಷಿ ಸಾಲ ಪಡೆದು ಸುಸ್ತಿದಾರರಾದ ಕಾರಣದಿಂದ ಸದರಿ ಜಮೀನುಗಳನ್ನು ಬಹಿರಂಗ ಹರಾಜಿಗೆ ಒಳಪಡಿಸಿದ್ದು ಯಾವ ಬಿಡ್‌ದಾರರು ಬಾರದ ಪ್ರಯುಕ್ತ ಸಂಘದ/ ಬ್ಯಾಂಕಿನ ಹೆಸರಿಗೆ ವರ್ಗಾಯಿಸಲಾಗಿದ್ದು, ಸದರಿ ಜಮೀನುಗಳ ಒಡೆತನ ಸಂಘ/ ಬ್ಯಾಂಕಿಗೆ ವರ್ಗಾಯಿಸಲ್ಪಟ್ಟು ಪಹಣಿಗಳಲ್ಲಿ ವಿವರ ದಾಖಲಾಗಿರುತ್ತದೆ. ತರುವಾಯ ಸದರಿ ಸಾಲವನ್ನು ತೀರ್ಪುಋಣಿದಾರರು ಪೂರ್ಣವಾಗಿ ರ.ನಂ.347 ದಿನಾಂಕ:30.06.2005ರ ಪ್ರಕಾರ ರೂ.14260/- ಮತ್ತು ರ.ನಂ.293 ದಿನಾಂಕ:12.09.2005ರ ಪ್ರಕಾರ ರೂ.48038/-ತೀರುವಳಿ ಮಾಡಿರುತ್ತಾರೆ. ಆದರೆ ಹಕ್ಕು ಮಾತ್ರ ಸಂಘದ ಹೆಸರಿನಲ್ಲಿ ಮುಂದುವರೆಯುತ್ತಿದೆ.

ಶ್ರೀ ಜಿ. ಕಾವಲ್ಲಪ್ಪನವರು ದುರುಪಯೋಗದ ಹಣವನ್ನು ಈ ಕೆಳಕಂಡ ವಿವರದಂತೆ ಜಮ ಮಾಡಿರುತ್ತಾರೆ.

ಕ್ರ.ಸಂ.	ವಿವರ	ಮೊಬಲಗು
1.	ನಗದು ರೂಪದಲ್ಲಿ: 1) ರಸೀದಿ ನಂ.1324 ದಿನಾಂಕ:04.09.2008 ರೂ.200000/- 2) ರಸೀದಿ ನಂ.1939 ದಿನಾಂಕ:09.02.2009 ರೂ.1080000/-	12,80,000/-
2.	**ಹೊಂದಾಣಿಕೆ ಐಟಂಗಳ ಮೂಲಕ** ದಿನಾಂಕ:31.03.2008ರ ಆಸ್ತಿ ಜವಾಬ್ದಾರಿ ತಃಖ್ತೆ ಜವಾಬ್ದಾರಿ ಕಡೆ ತೋರಿಸಿರುವ ಬಾಬ್ತುಗಳು 1) ಕ್ರ.ಸಂ.8(4) ಡಿಪಾಜಿಟ್ ರೂ.75,000/- 2) ಕ್ರ.ಸಂ.8(5) ಆಡಿಟ್ ಆಕ್ಷೇಪಣೆ ಜಮಾ ಅಮಾನತ್ತು ರೂ.1,29,712/- 3) ಕ್ರ.ಸಂ.8(6) ಡಿಪಾಜಿಟ್ ರೂ.1,600/- 4) ಕ್ರ.ಸಂ.8(10) ದುರುಪಯೋಗ ಜಮಾ ಅಮಾನತ್ತು ರೂ.1,32,100/-	3,38,412/-
	ಒಟ್ಟು ರೂ.	**16,18,412/-**

ಈ ರೀತಿ ಒಡಂಬಡಿಕೆ ಮೂಲಕ ವಸೂಲಾತಿ ಮಾಡಿಕೊಂಡು ಲೆಕ್ಕ ಖೈದುಗೊಳಿಸಿರುತ್ತಾರೆ.

ಜಡ್ಜ್‌ಮೆಂಟ್ ಹೋಲ್ಡರ್ ಬ್ಯಾಂಕಿನ ಆಡಳಿತ ಮಂಡಳಿಯವರು ದಿನಾಂಕ:18.02.2009 ರಂದು ಆಡಳಿತ ಮಂಡಳಿ ಸಭೆ ನಡೆಸಿ ಶ್ರೀ ಜಿ. ಕಾವಲ್ಲಪ್ಪನವರು ದುರುಪಯೋಗದ ಹಣವನ್ನು ಮರುಪಾವತಿಸಲು ಸ್ವತಃ ಮುಂದೆ ಬಂದಿದ್ದು, ಅವರಿಗೆ ಸಾಲಿಯಾನ ಶೇ.10 ಬಡ್ಡಿ ವಿಧಿಸಿ ಉಳಿದ ಶೇ.8 ರಷ್ಟನ್ನು ಬಡ್ಡಿ ರಿಯಾಯಿತಿ ನೀಡಲು ತೀರ್ಮಾನಿಸಿರುತ್ತಾರೆ. ಹಣ ಜಮ ಬಂದ ನಂತರ ಹಾಗೂ ಕಲಂ 64ರ ವಿಚಾರಣಾ ವರದಿ ರೀತ್ಯಾ ರೈತರುಗಳಿಂದ ಆಕ್ಷೇಪಣಾ ರಹಿತ ಪತ್ರ ಬಂದ ನಂತರ ತೀರ್ಪು ಋಣಿದಾರರಿಗೆ ಬೇ ಬಾಕಿ ಪತ್ರ ಮತ್ತು ಎ.ಬಿ.ಜೆ. ಮಾಡಿರುವ ಸ್ಥಿರಾಸ್ತಿಗಳನ್ನು ಮೂಲ ಖಾತೆದಾರರ ಹೆಸರಿಗೆ ವರ್ಗಾಯಿಸಲು ಸಹ ಕ್ರಮವಿಡಬಹುದೆಂದು ತೀರ್ಮಾನಿಸಿರುತ್ತಾರೆ. ಅಲ್ಲದೆ ಅವರಿಗೆ ಬ್ಯಾಂಕ್‌ನಿಂದ ಕೊಡಬೇಕಾದ ಠೇವಣಿಗೆ ಬಡ್ಡಿ ನೀಡಬಾರದೆಂದು ಏಕೆಂದರೆ ದುರುಪಯೋಗದ ಮೊತ್ತಕ್ಕೆ ಶೇ.8 ರ ಬಡ್ಡಿ ರಿಯಾಯಿತಿ ನೀಡಿರುವ ಕಾರಣವನ್ನು ವಿವರಿಸಿರುತ್ತಾರೆ.

ಸದರಿ ಜಡ್ಜ್‌ಮೆಂಟ್ ಹೋಲ್ಡರ್ ಬ್ಯಾಂಕ್‌ನ ಆಡಳಿತ ಮಂಡಳಿಯವರು ಮತ್ತೊಂದು ಆಡಳಿತ ಮಂಡಳಿ ಸಭೆಯನ್ನು ದಿನಾಂಕ:09.07.2009ರಂದು ನಡೆಸಿ ತೀರ್ಪುಋಣಿದಾರರು ಮೇಲಿನ ವಿವರದಂತೆ ದುರುಪಯೋಗ ಪ್ರಕರಣಗಳ ಮೊತ್ತವನ್ನು ಮರುಪಾವತಿ ಮಾಡಿರುವುದರಿಂದ ದುರುಪಯೋಗ ಪ್ರಕರಣಗಳನ್ನು ಖೈದುಗೊಳಿಸಿ ಸಂಘದ ಹೆಸರಿಗೆ ವರ್ಗಾವಣೆಯಾದ ಸ್ಥಿರಾಸ್ತಿಗಳನ್ನು ಹಾಗೂ ಎಬಿಜೆ ಮಾಡಿ ಸ್ಥಿರೀಕರಣಗೊಂಡಿರುವ ಸ್ಥಿರಾಸ್ತಿಗಳನ್ನು ಮೂಲ ಖಾತೆದಾರರಿಗೆ ವರ್ಗಾಯಿಸಲು ಮತ್ತು

ಬೇಬಾಕಿ ಪತ್ರವನ್ನು ನೀಡಲು ಆಡಳಿತಾತ್ಮಕ ಅನುಮತಿ ನೀಡಲು ನಿರ್ಣಯ ಕೈಗೊಂಡ ಇವರ ಮೇಲಿರುವ ಹಣ ದುರುಪಯೋಗದ ಎಲ್ಲಾ ಪ್ರಕರಣಗಳನ್ನು ಮಾನವೀಯ ದೃಷ್ಟಿಯಿಂದ ಮುಕ್ತಾಯಗೊಳಿಸಲು ತೀರ್ಮಾನಿಸಿರುತ್ತಾರೆ.

ಬ್ಯಾಂಕ್‌ನ ಕಲಂ 64ರ ವಿಚಾರಣಾ ವರದಿಯಲ್ಲಿ ಕೃಷಿ ಸಾಲಗಾರರ ಮೇಲೆ ವಿವಾದವಿದ್ದ ರೈತರು ತೀರ್ಪುಋಣಿದಾರರಿಗೂ ರೈತರಿಗೂ ಇದ್ದ ಹಣಕಾಸಿನ ವಿವಾದಗಳನ್ನು ಬಗೆಹರಿಸಿಕೊಂಡಿರುವುದಾಗಿ ಪತ್ರ ಸಲ್ಲಿಸಿ ತೀರ್ಪುಋಣಿದಾರರಿಗೆ ಬೇಬಾಕಿ ಪತ್ರ ಕೊಡಬಹುದೆಂದು ವಿನಂತಿಸಿಕೊಂಡಿರುತ್ತಾರೆ.

ಈ ಬ್ಯಾಂಕಿನ ಆಡಳಿತ ಮಂಡಳಿ ಒಡಂಬಡಿಕೆಯಿಂದ ತೀರ್ಪುಋಣಿದಾರರಿಂದ ದುರುಪಯೋಗದ ಹಣವನ್ನು ವಸೂಲಾತಿ ಮಾಡಿಕೊಂಡು ಪ್ರಕರಣ ಖೈದುಗೊಳಿಸಲು ಮತ್ತು ಎಬಿಜೆ ಮಾಡಿರುವ ಸ್ಥಿರಾಸ್ತಿಗಳನ್ನು ಮೂಲ ಖಾತೆದಾರರಿಗೆ ಹಿಂದಿರುಗಿಸಲು ಕೋರಿರುತ್ತಾರೆ. ಈ ಸಂಬಂಧ ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ನಿರ್ಣಯಗಳು, ಕೃಷಿ ಸಾಲಗಾರರ ಮನವಿ, ಜಡ್ಜ್‌ಮೆಂಟ್ ಹೋಲ್ಡರ್ ಬ್ಯಾಂಕ್‌ನ ವ್ಯವಸ್ಥಾಪಕರ ಮನವಿ, ಸಹಕಾರ ಅಭಿವೃದ್ಧಿ ಅಧಿಕಾರಿಗಳ ವರದಿ ಪರಿಶೀಲಿಸಲಾಯಿತು ಮತ್ತು ಮುಂದುವರೆದು ಹೊಂದಾಣಿಕೆ ಮಾಡಿಕೊಂಡಿರುವ ಬಾಬ್ತುಗಳು 1998-99ನೇ ಸಾಲುಗಳಲ್ಲಿ ಸಂಘಕ್ಕೆ ಪಾವತಿಯಾಗಿದ್ದು, ಇವುಗಳ ಮೇಲೆ ಆಗುವ ಬಡ್ಡಿ ಲೆಕ್ಕಾಚಾರವನ್ನೂ ಸಹ ಪರಿಗಣಿಸಲಾಯಿತು. ಆದುದರಿಂದ ದಿನಾಂಕ:28.03.2001 ರಂದು ಅವಾರ್ಡಿಗಿಂತ ಪೂರ್ವದಲ್ಲಿ ಆಸ್ತಿಯ ಜಪ್ತಿ ಆದೇಶ ಮಾಡಿರುವ ಆದೇಶದ ನಂ.ಸ.ಸಂ.ಸ.ನಿ.33:ಎಬಿಎಸ್:ಎಬಿಜೆ:ಸಿಆರ್-116:2000-01 ಮತ್ತು ದಿನಾಂಕ:28.11.2009ರಂದು ಅಂತಿಮ ತೀರ್ಪು ನೀಡಿ ಸ್ಥಿರಾಸ್ತಿಗಳನ್ನು ಸ್ಥಿರೀಕರಣ ಮಾಡಿರುವುದನ್ನು ರದ್ದುಪಡಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನಂ.ಸ.ಸಂ.ಸ.ನಿ.33:ಎಬಿಎನ್:ಹ.ದು.:ಅಮಲ್ಜಾರಿ:ಬಡ್ಡಿಮನ್ನ:19/2009-10, ದಿನಾಂಕ:19ನೇ ಆಗಸ್ಟ್, 2009

ಶ್ರೀ ಹೆಚ್.ಡಿ. ಶಿವಣ್ಣ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿಗಳು ಮಧುಗಿರಿ ಉಪವಿಭಾಗ, ಮಧುಗಿರಿ ಆದ ನಾನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯಿದೆ 1959ರ ನಿಯಮ 38ಎ (15) ರನ್ವಯ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ರೀತ್ಯಾ ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರವನ್ನು ಉಪಯೋಗಿಸಿ ಶ್ರೀ ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ ಮಾಜಿ ವ್ಯವಸ್ಥಾಪಕರು, ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಅರಸಾಪುರ ಕೊರಟಗೆರೆ ತಾಲ್ಲೂಕು ಮತ್ತು ಅವರ ಪತ್ನಿ ಶ್ರೀಮತಿ ಎಂ. ಉಮಾದೇವಿಯವರ ಹೆಸರಿನಲ್ಲಿದ್ದ ಸ್ಥಿರಾಸ್ತಿಗಳನ್ನು ಕ್ರಮವಾಗಿ ಅವಾರ್ಡಿಗಿಂತ ಅಥವಾ ಆದೇಶಕ್ಕಿಂತ ಪೂರ್ವದಲ್ಲಿ ಆಸ್ತಿಯ ಜಪ್ತಿ ಮತ್ತು ಸ್ಥಿರೀಕರಣ ಮಾಡಿದವುಗಳನ್ನು ಹಿಂತೆಗೆದುಕೊಂಡು ಸದರಿ ಷೆಡ್ಯೂಲ್ ಸ್ಥಿರಾಸ್ತಿಗಳನ್ನು ಶ್ರೀ ಜಿ. ಕಾವಲ್ಲಪ್ಪ ಮತ್ತು ಶ್ರೀಮತಿ ಎಂ. ಉಮಾದೇವಿ ಇವರ ಹೆಸರಿಗೆ ನಿಲ್ಲಿಸಿ ಈ ವರ್ಗಾವಣೆ ಆದೇಶ ನೀಡಿರುತ್ತೇನೆ. ಸಹಕಾರ ಸಂಘಗಳ ಕಾಯಿದೆ ಅನ್ವಯ ನಮೂನೆ 8ರ ನಿಗದಿತ ನಮೂನೆಯಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆ ಪತ್ರವನ್ನು ಅಲಾಯಿದೆ ನೀಡಲಾಗಿರುವುದನ್ನು ಈ ಆದೇಶಕ್ಕೆ ಲಗತ್ತಿಸಿದೆ.

ಈ ಕಛೇರಿಯ ಮೊಹರ್ ಹಾಗೂ ನನ್ನ ಸ್ವಹಸ್ತಾಕ್ಷರದ ಸಹಿಯೊಂದಿಗೆ ದಿನಾಂಕ:19.08.2009 ರಂದು ಪುನರ್ ಆದೇಶ ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಮಧುಗಿರಿ ಉಪವಿಭಾಗ, ಮಧುಗಿರಿ.

ನಮೂನೆ-8

ಕರ್ನಾಟಕ ಸಹಕಾರ ಸಂಘಗಳ ನಿಯಮ 1960:38ಎ (15)ರ ರೀತ್ಯಾ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 101ರ ಅನ್ವಯ ಬಾಕಿಯ ಬಗ್ಗೆ

ಸ್ಥಿರ ಸ್ವತ್ತುಗಳ ಮರು ವರ್ಗಾವಣೆ ಪ್ರಮಾಣ ಪತ್ರ

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಬುಡ್ಡೇನಹಳ್ಳಿ ಗ್ರಾಮದ ವಾಸಿ ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ ಮತ್ತು ಅವರ ಪತ್ನಿ ಎಂ. ಉಮಾದೇವಿ ಇವರ ಹೆಸರಿನಲ್ಲಿದ್ದ ಸ್ಥಿರಾಸ್ತಿಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69ರ ಅನ್ವಯ ಆದೇಶವನ್ನು ಜಾರಿ ಮಾಡಿದ್ದರಿಂದ ಸದರಿಯವರ ಸ್ಥಿರ ಸ್ವತ್ತುಗಳನ್ನು ದಿನಾಂಕ:28.03.2001 ರ ಈ ಕಛೇರಿ ಆದೇಶದಲ್ಲಿ ಕೊರಟಗೆರೆ ತಾಲ್ಲೂಕು, ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಅರಸಾಪುರ ಈ ಬ್ಯಾಂಕಿನ ಹೆಸರಿಗೆ ಕಲಂ 103ರ ರೀತಿ ಅವಾರ್ಡ್‌ಗೆ ಅಥವಾ ಆದೇಶಕ್ಕೆ ಮುನ್ನ ಆಸ್ತಿಯ ಜಪ್ತಿ ಮತ್ತು ದಿನಾಂಕ:28.11.2001 ರಂದು ಅಂತಿಮ ತೀರ್ಪು ನೀಡಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಸ್ಥಿರೀಕರಣಗೊಳಿಸಿ ಆದೇಶ ನೀಡಲಾಗಿತ್ತು. ಈಗ ತೀರ್ಪುಋಣಿದಾರರಿಂದ ಬ್ಯಾಂಕ್‌ಗೆ ಬರಬೇಕಾಗಿದ್ದ ಪೂರಾ ಹಣ ಸಂದಾಯವಾಗಿದ್ದು, ಸದರಿ ಸ್ಥಿರಾಸ್ತಿಗಳನ್ನು ಮೂಲ ಹಕ್ಕುದಾರರಿಗೆ ಪುನರ್ ವರ್ಗಾಯಿಸುವಂತೆ ಬ್ಯಾಂಕಿನ ಕೋರಿಕೆ ಮೇರೆಗೆ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಹಕ್ಕು ಅಧಿಕಾರ, ನಾಮ ಮತ್ತು ಬಾಧ್ಯತೆ

ಶ್ರೀಯುತ ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ, ಬುಡ್ಡೇನಹಳ್ಳಿ, ಕೊರಟಗೆರೆ ತಾಲ್ಲೂಕು ಮತ್ತು ಅವರ ಪತ್ನಿ ಶ್ರೀಮತಿ ಎಂ. ಉಮಾದೇವಿ ಇವರಿಗೆ ನಿರ್ದಿಷ್ಟ ಮಾಡತಕ್ಕದ್ದೆಂದು ಮತ್ತು ಈ ಪ್ರಮಾಣ ಪತ್ರದಲ್ಲಿ ವಿಧಿಸಲಾದ ಷರತ್ತುಗಳಿಗೆ ಮತ್ತು ನಿಯಮಾವಳಿಗೆ ಒಳಪಟ್ಟು ಶ್ರೀಯುತ ಜಿ. ಕಾವಲ್ಲಪ್ಪ ಮತ್ತು ಎಂ. ಉಮಾದೇವಿ, ಬುಡ್ಡೇನಹಳ್ಳಿ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು ಇವರಿಗೆ ಒಪ್ಪಿಸತಕ್ಕದ್ದೆಂದು ಮತ್ತು ಕಾಯಿದೆ ಕಲಂ 101ರ ಮತ್ತು ನಿಯಮ 38ಎ(15) ರ ರೀತ್ಯಾ ಈ ಮೇಲಿನ ಆದೇಶ ನೀಡಲಾಗಿದೆ. ಪುನರ್ ವರ್ಗಾವಣೆ ಮಾಡುವ ಸ್ವತ್ತುಗಳ ವಿವರವನ್ನು ಈ ಪ್ರಮಾಣ ಪತ್ರದೊಂದಿಗೆ ಲಗತ್ತಿಸಿದೆ.

ಷರತ್ತುಗಳು ಮತ್ತು ನಿಯಮಾವಳಿಗಳು

1) ಶ್ರೀಯುತ ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ, ಬುಡ್ಡೇನಹಳ್ಳಿ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ಇವರಿಗೆ ಪುನರ್ ವರ್ಗಾವಣೆ ಮಾಡುವ ಸ್ವತ್ತುಗಳನ್ನು ಇವರೇ ಉಪಯೋಗಿಸತಕ್ಕದ್ದು.

2) ಪುನಃ ಮಾರಾಟ ಮಾಡುವ ಹಕ್ಕು ಇವರು ಹೊಂದಿರುತ್ತಾರೆ.

ಸ್ಥಳ: ಮಧುಗಿರಿ
ದಿನಾಂಕ:19.08.2009

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಮಧುಗಿರಿ ಉಪವಿಭಾಗ, ಮಧುಗಿರಿ.

ಸ್ವತ್ತುಗಳ ವಿವರ

ಕ್ರ. ಸಂ.	ಗ್ರಾಮದ ಹೆಸರು, ತಾಲ್ಲೂಕು ಮತ್ತು ಜಿಲ್ಲೆಯ ಹೆಸರು	ಸರ್ವೆ ನಂ.	ಖಾತೆ ನಂ.	ಖಾತೆದಾರನ ಹೆಸರು	ವಿಸ್ತೀರ್ಣ	ಜಮೀನು ಮತ್ತು ಮಣ್ಣಿನ ಮಾದರಿ	ನಿರ್ಧಾರಿತ ಮೊತ್ತ (ಕಂದಾಯ)	ಚೆಕ್ಕುಬಂದಿ
1.	ಬುಡ್ಡೇನಹಳ್ಳಿ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.	38	106	ಜಿ. ಕಾವಲ್ಲಪ್ಪ ಬಿನ್ ಕಾವಲ್ಲಪ್ಪ	2–35	ಕೆಂಪು	6–80	ಪೂರ್ವ–ಮುದ್ದಲಿಂಗಪ್ಪ, ತಿಮ್ಮಯ್ಯ, ವೆಂಕಟಶಾಮಯ್ಯ ಪಶ್ಚಿಮ–ಲಕ್ಷ್ಮಣ, ಪುಟ್ಟಚೌಡಯ್ಯ ಉತ್ತರ–ಚಿಕ್ಕಮ್ಮ ಕೋಂ ಕರಿಯಣ್ಣ ದಕ್ಷಿಣ– ಸರ್ಕಾರಿ ಹಳ್ಳ ಮತ್ತು ಸರ್ಕಾರಿ ಖರಾಬು
2.	ಬುಡ್ಡೇನಹಳ್ಳಿ ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	69	115	ಎಂ.ಉಮಾದೇವಿ ಕೋಂ ಕಾವಲ್ಲಪ್ಪ	3–00	ಕೆಂಪು	4–20	ಪೂರ್ವ–ಮುದ್ದಲಿಂಗಪ್ಪ, ತಿಮ್ಮಯ್ಯ, ವೆಂಕಟಶಾಮಯ್ಯ ಪಶ್ಚಿಮ–ಲಕ್ಷ್ಮಣ, ಪುಟ್ಟಚೌಡಯ್ಯ ಉತ್ತರ–ಚಿಕ್ಕಮ್ಮ ಕೋಂ ಕರಿಯಣ್ಣ ದಕ್ಷಿಣ– ಸರ್ಕಾರಿ ಹಳ್ಳ ಮತ್ತು ಸರ್ಕಾರಿ ಖರಾಬು
3.	ಬುಡ್ಡೇನಹಳ್ಳಿ ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	70	115	ಎಂ.ಉಮಾದೇವಿ ಕೋಂ ಕಾವಲ್ಲಪ್ಪ	3–00	ಕೆಂಪು	4–20	ಪೂರ್ವ–ಮುದ್ದಲಿಂಗಪ್ಪ, ತಿಮ್ಮಯ್ಯ, ವೆಂಕಟಶಾಮಯ್ಯ ಪಶ್ಚಿಮ–ಲಕ್ಷ್ಮಣ, ಪುಟ್ಟಚೌಡಯ್ಯ ಉತ್ತರ–ಚಿಕ್ಕಮ್ಮ ಕೋಂ ಕರಿಯಣ್ಣ ದಕ್ಷಿಣ– ಸರ್ಕಾರಿ ಹಳ್ಳ ಮತ್ತು ಸರ್ಕಾರಿ ಖರಾಬು
4.	ಬುಡ್ಡೇನಹಳ್ಳಿ ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	71	115	ಎಂ.ಉಮಾದೇವಿ ಕೋಂ ಕಾವಲ್ಲಪ್ಪ	3–00	ಕೆಂಪು	4–20	ಪೂರ್ವ–ಮುದ್ದಲಿಂಗಪ್ಪ, ತಿಮ್ಮಯ್ಯ, ವೆಂಕಟಶಾಮಯ್ಯ ಪಶ್ಚಿಮ–ಲಕ್ಷ್ಮಣ, ಪುಟ್ಟಚೌಡಯ್ಯ ಉತ್ತರ–ಚಿಕ್ಕಮ್ಮ ಕೋಂ ಕರಿಯಣ್ಣ ದಕ್ಷಿಣ– ಸರ್ಕಾರಿ ಹಳ್ಳ ಮತ್ತು ಸರ್ಕಾರಿ ಖರಾಬು

ಕ್ರ. ಸಂ.	ಗ್ರಾಮದ ಹೆಸರು, ತಾಲ್ಲೂಕು ಮತ್ತು ಜಿಲ್ಲೆಯ ಹೆಸರು	ಸರ್ವೆ ನಂ.	ಖಾತೆ ನಂ.	ಖಾತೆದಾರನ ಹೆಸರು	ವಿಸ್ತೀರ್ಣ	ಜಮೀನು ಮತ್ತು ಮಣ್ಣಿನ ಮಾದರಿ	ನಿರ್ಧಾರಿತ ಮೊತ್ತ (ಕಂದಾಯ)	ಚೆಕ್ಕುಬಂದಿ
5.	ಬುಡ್ಡೇನಹಳ್ಳಿ ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ	72	115	ಎಂ.ಉಮಾದೇವಿ ಕೋಂ ಕಾವಲ್ಲಪ್ಪ	3-00	ಕೆಂಪು	4-20	ಪೂರ್ವ-ಮುದ್ದಲಿಂಗಪ್ಪ, ತಿಮ್ಮಯ್ಯ, ವೆಂಕಟಶಾಮಯ್ಯ ಪಶ್ಚಿಮ-ಲಕ್ಷ್ಮಣ, ಪುಟ್ಟಗೌಡಯ್ಯ ಉತ್ತರ-ಚಿಕ್ಕಮ್ಮ ಕೋಂ ಕರಿಯಣ್ಣ ದಕ್ಷಿಣ- ಸರ್ಕಾರಿ ಹಳ್ಳ ಮತ್ತು ಸರ್ಕಾರಿ ಖರಾಬು

ಸ್ಥಳ: ಮಧುಗಿರಿ
ದಿನಾಂಕ:19.08.2009
ಪಿ.ಆರ್.840

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಮಧುಗಿರಿ ಉಪವಿಭಾಗ, ಮಧುಗಿರಿ.

ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ, ಇವರು ಮಂಜೂರಾದ ಕಾಮಗಾರಿಗಳಿಗೆ ರೂ.2.20 ಲಕ್ಷಗಳನ್ನು ಪಡೆದು ಲೆಕ್ಕಪತ್ರ ನಿರ್ವಹಿಸದೆ ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಶಿಸ್ತುಕ್ರಮ.

ಓದಲಾಗಿದೆ:
1) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ:ಜಲಅಇ/ಆಡಳಿತ-3/ವಿನಿ-12/20/2006-07, ದಿನಾಂಕ:30.08.2006.
2) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ ಇವರಿಗೆ ಜಾರಿ ಮಾಡಿದ (ದೋಷಾರೋಪಣೆ ಪಟ್ಟಿ ಅನುಬಂಧ-1 ರಿಂದ 4) ಪತ್ರ ಸಂಖ್ಯೆ: ಜಲಅಇ/ಆಡಳಿತ-3/ವಿನಿ-12/20/2006-07, ದಿನಾಂಕ:22.09.2006.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಜಲಅಇ/ಆಡಳಿತ-3/ವಿನಿ-12/20/2006-07, ದಿನಾಂಕ:15.11.2006.
4) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಕಛೇರಿ ಆದೇಶ ಸಂಖ್ಯೆ: ಜಲಅಇ/ಆಡಳಿತ-3/ವಿನಿ-12/20/2006-07, ದಿನಾಂಕ:11.12.2006.
5) ಶ್ರೀ ಬಿ.ಎಲ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ವಿಚಾರಣಾ ವರದಿ ದಿನಾಂಕ:24.09.2008.
6) ಈ ಕಛೇರಿ ಸೂಚನಾ ಪತ್ರಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/6/08-09, ದಿನಾಂಕ:15/17.12.2008
7) ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರ ಪತ್ರಸಂಖ್ಯೆ: ಸಕೃನಿ/ಜಆಇಹಾ/ಎಸ್‌ಬಿಟಿ/ವಿಚಾರಣೆ/08-09/199, ದಿನಾಂಕ:19.12.2008.
8) ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರ ಪತ್ರ ದಿನಾಂಕ:25.02.2009.

ಪ್ರಸ್ತಾವನೆ:

ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ ಇವರು ರಾಣೀಬೆನ್ನೂರು ತಾಲ್ಲೂಕು ಬೇವಿನಹಳ್ಳಿ DPAP ಜಲಾನಯಾನ ಸಂಘದ ಕಾರ್ಯದರ್ಶಿ/ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ಪಡೆಯದೆ ಕಾಮಗಾರಿಗಳಿಗೆ ಸಂಘದ ಚೆಕ್ ಮೂಲಕ ರೂ.2.20 ಲಕ್ಷಗಳನ್ನು ಪಡೆದು ಇದಕ್ಕೆ ಯಾವುದೇ ಓಚರ್‌ಗಳನ್ನು ಹಾಗೂ ಅಳತೆ ಪುಸ್ತಕ ನಿರ್ವಹಿಸದೆ ದುರುಪಯೋಗ ಪಡಿಸಿಕೊಂಡಿದ್ದರ ಬಗ್ಗೆ ಹಾಗೂ ಇವರು ವರ್ಗಾವಣೆಗೊಂಡು ಸೇವೆಯಿಂದ ಬಿಡುಗಡೆ ಹೊಂದಿದ್ದರೂ DPAP ಜಲಾನಯನ ಸಂಘದ ಕಾರ್ಯಭಾರವನ್ನು ಇವರ ಉತ್ತರಾಧಿಕಾರಿಗೆ ವಹಿಸಿಕೊಡದೆ ಸಂಘದ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟು ಮಾಡಿರುತ್ತಾರೆ. ಈ ಕರ್ತವ್ಯಲೋಪ ಹಾಗೂ ಸರ್ಕಾರಿ ಹಣವನ್ನು ದುರುಪಯೋಗ

ಪಡಿಸಿಕೊಂಡಿದ್ದರ ಬಗ್ಗೆ ಓದಲಾದ ಕ್ರ.ಸಂ.(1)ರ ಪ್ರಕಾರ ಅಪರ ಕೃಷಿ ನಿರ್ದೇಶಕರು (ಜಾಗೃತದಳ ಕೋಶ) ಇವರು ತಪಾಸಣೆ ಕೈಗೊಂಡು ವರದಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ ಇವರ ವಿರುದ್ಧ ಮಾಡಲಾದ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಓದಲಾದ ಕ್ರ.ಸಂ.(1)ರ ಆದೇಶದಲ್ಲಿ ನೌಕರರನ್ನು ನಿಲಂಬನೆಯಲ್ಲಿಡಲಾಗಿದೆ. ಓದಲಾದ ಕ್ರ.ಸಂ.(2) ರಲ್ಲಿ ಸದರಿ ನೌಕರರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 11 ರಡಿಯಲ್ಲಿ ಶಿಸ್ತುಕ್ರಮ ಜರುಗಿಸಲು ದೋಷಾರೋಪಣೆ ಪಟ್ಟಿ ಅನುಬಂಧ-1 ರಿಂದ 4ನ್ನು ಜಾರಿ ಮಾಡಲಾಗಿದೆ. ಓದಲಾದ ಕ್ರ.ಸಂ. (3) ರಲ್ಲಿ ಸದರಿ ನೌಕರರನ್ನು ನಿಲಂಬನೆಯಿಂದ ವಿಖಂಡನೆಗೊಳಿಸಿ ಕೃಷಿ ಸಹಾಯಕ, ಜಲಾನಯನ ಅಭಿವೃದ್ಧಿ ಇಲಾಖೆ, ಕಲಘಟಗಿ ತಾಲ್ಲೂಕು ಹುದ್ದೆಗೆ ಮರು ನೇಮಕ ಮಾಡಲಾಗಿದೆ. ಓದಲಾದ ಕ್ರ.ಸಂ.(4)ರಲ್ಲಿ ಸದರಿ ಆಪಾದಿತ ನೌಕರರ ವಿರುದ್ಧದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರಡಿಯಲ್ಲಿ ವಿಚಾರಣೆನಡೆಸಲು ವಿಚಾರಣಾಧಿಕಾರಿಗಳನ್ನು ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಿ ಆದೇಶಿಸಿದೆ. ಓದಲಾದ ಕ್ರ.ಸಂ.(5)ರಲ್ಲಿ ನೇಮಿಸಲ್ಪಟ್ಟ ವಿಚಾರಣಾಧಿಕಾರಿಗಳಾದ ಶ್ರೀ ಬಿ.ಎಲ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ಮತ್ತೆ ಸತ್ರ ನ್ಯಾಯಾಧೀಶರು, ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ ಇವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಸದರಿ ನೌಕರರ ವಿರುದ್ಧದ 2 ಆರೋಪಗಳು ಸಾಬೀತಾಗಿರುತ್ತವೆ. ಓದಲಾದ ಕ್ರ.ಸಂ.(6)ರಲ್ಲಿ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ ಇವರಿಗೆ ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರ ಮೂಲಕ ಜಾರಿ ಮಾಡಲಾಗಿದೆ. ಓದಲಾದ ಕ್ರ.ಸಂ.(7) ರಲ್ಲಿ ನೌಕರರು 2ನೇ ಕಾರಣ ಕೇಳುವ ಸೂಚನಾ ಪತ್ರ ಪಡೆದಿದ್ದಕ್ಕೆ ಸ್ವೀಕೃತಿಯನ್ನು ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರ ಪತ್ರದೊಂದಿಗೆ ಸಲ್ಲಿಸಿರುತ್ತಾರೆ. ಆದರೆ ಸದರಿಯವರು ಈ ಕಛೇರಿಗೆ ಅವರ ಲಿಖಿತ ರಕ್ಷಣಾತ್ಮಕ ಹೇಳಿಕೆ ಸಲ್ಲಿಸಿರುವುದಿಲ್ಲ ಮತ್ತು ಓದಲಾದ ಕ್ರ.ಸಂ.(8) ರ ಪ್ರಕಾರ ಸದರಿ ನೌಕರರು ಯಾವುದೇ ಲಿಖಿತ ರಕ್ಷಣಾತ್ಮಕ ಹೇಳಿಕೆ ಸಲ್ಲಿಸಿರುವುದಿಲ್ಲ ಎಂಬ ಮಾಹಿತಿಯನ್ನು ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿಯವರ ವಿರುದ್ಧದ ಆರೋಪಗಳು ವಿಚಾರಣಾ ವರದಿಯಲ್ಲಿ ಸಾಭೀತಾಗಿರುವುದರಿಂದ ಇದನ್ನು ಗಂಬೀರವಾಗಿ ಪರಿಗಣಿಸಿ ಸೂಕ್ತ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ಈ ಕೆಳಕಂಡಂತೆ ದಂಡನೆ ವಿಧಿಸಲು ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/5/2008-09, ದಿನಾಂಕ: ಸೆಪ್ಟೆಂಬರ್, 2009

ಈ ಕೆಳಗೆ ಸಹಿ ಮಾಡಿರುವ ಡಾ: ಬಾಬುರಾವ್ ಮುಡಬಿ, ಕೃಷಿ ಆಯುಕ್ತರು ಹಾಗೂ ಶಿಸ್ತುಪ್ರಾಧಿಕಾರಿಗಳು, ಬೆಂಗಳೂರು ಆದ ನಾನು ಈ ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರನ್ನು ಆರೋಪಿ ಎಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(vi) ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತೇನೆ.

ಶ್ರೀ ಎಸ್.ಬಿ. ತಾರಿಕೊಪ್ಪ, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ ಇವರಿಂದ ದುರುಪಯೋಗವಾದ ಹಣ ರೂ.2.20 ಲಕ್ಷಗಳನ್ನು ಅವರ ನಿವೃತ್ತಿ ಸೌಲಭ್ಯಗಳಿಂದ ಶೇ.8% ರ ಬಡ್ಡಿಯೊಂದಿಗೆ, ಪಾವತಿಯಾಗುವ ದಿನಾಂಕದ ವರೆಗೆ ವಸೂಲಾತಿ ಮಾಡಲು ಆದೇಶಿಸಿರುತ್ತೇನೆ. ಹಾಗೂ ನಿಲಂಬನಾ ಅವಧಿಯನ್ನು ನಿಲಂಬನಾ ಅವಧಿ ಎಂದೇ ಪರಿಗಣಿಸಿ ಆದೇಶಿಸಿದೆ.

ಡಾ: ಬಾಬುರಾವ್ ಮುಡಬಿ

ಪಿ.ಆರ್.883

ಕೃಷಿ ಆಯುಕ್ತರು ಹಾಗೂ ಶಿಸ್ತುಪ್ರಾಧಿಕಾರಿಗಳು.

ಕಂದಾಯ ಇಲಾಖೆ

ಚಿತ್ರದುರ್ಗ ಉಪ ವಿಭಾಗಾಧಿಕಾರಿಗಳ ಕಚೇರಿ, ಚಿತ್ರದುರ್ಗ

ಅಧಿಸೂಚನೆ

ನಂ.ಆಡಳಿತ /ಸಿಆರ್/01/09-10, ದಿನಾಂಕ:3ನೇ ಸೆಪ್ಟೆಂಬರ್, 2009

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) (ಬಿ) ಪ್ರಕಾರ ಪ್ರಕಟಿಸಲಾಗಿದ್ದ ಅಧಿಸೂಚನೆಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ಅಧ್ಯಾಯ -1

4(1)(ಬಿ) (i) ಅನ್ವಯ ಸಂಸ್ಥೆಯ ರಚನೆ ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು

ಸಂಸ್ಥೆಯ ಹೆಸರು

ಉಪವಿಭಾಗಾಧಿಕಾರಿಗಳವರ ಕಚೇರಿ, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ.

ಉಪವಿಭಾಗಾಧಿಕಾರಿಗಳವರ ಕಛೇರಿಯ ಕರ್ತವ್ಯಗಳ ವಿವರ-

1. ಉಪವಿಭಾಗ ವ್ಯಾಪ್ತಿಗೆ ಒಳಪಟ್ಟ ತಾಲ್ಲೂಕುಗಳ ಕಂದಾಯ ಆಡಳಿತ ಮೇಲ್ವಿಚಾರಣೆ.
2. ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ.
3. ಬರ/ಮಹಾಪೂರ (ಪ್ರಕೃತಿ ವಿಕೋಪ) ಗಳ ಸಮರ್ಪಕ ನಿರ್ವಹಣೆ ಭೂಸ್ವಾಧೀನ ಪ್ರಕ್ರಿಯೆ ಜರುಗಿಸುವುದು.
4. ವಿವಿಧ ಚುನಾವಣೆಗಳ ಮೇಲ್ವಿಚಾರಣೆ/ನಿರ್ವಾಹಣಾಧಿಕಾರಿ/ಮತದಾರರ ನೋಂದಣಾಧಿಕಾರಿ.
5. ಉಪವಿಭಾಗೀಯ ದಂಡಾಧಿಕಾರಿ ಅಂತಾ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು.
6. ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳು ವಹಿಸಿಕೊಡುವ ಇನ್ನಿತರೆ ಕೆಲಸ ಕಾರ್ಯಗಳು.
7. ಹುಜೂರ ಜಮಾಬಂಧಿ ನಿರ್ವಹಣೆ.

ವಿವಿಧ ಕಾಯ್ದೆಗಳಡಿ ಉಪವಿಭಾಗಾಧಿಕಾರಿಗಳ ಅಧಿಕಾರ ಹಾಗೂ ಕರ್ತವ್ಯಗಳು

ಅ. ನಂ.	ಕಾಯ್ದೆ	ಕಲಂ	ವಿವರ
1.	ಕರ್ನಾಟಕ ಭೂ ಕಂದಾಯ ಅಧಿನಿಯಮ 1964	10(2)	ಕಂದಾಯ ಉಪವಿಭಾಗದ ಆಡಳಿತ ನೋಡಿಕೊಳ್ಳುವುದು
	::	10(3)	ಜಿಲ್ಲಾಧಿಕಾರಿಯು ವಹಿಸಿಕೊಟ್ಟ ಎಲ್ಲ ಕರ್ತವ್ಯಗಳನ್ನು ನಿರ್ವಹಿಸುವುದು
	::	11(1)	ಉಪವಿಭಾಗಾಧಿಕಾರಿಯು ತಾಲ್ಲೂಕಿನ ತಹಶೀಲ್ದಾರ್‌ರ ಮೇಲ್ವಿಚಾರಣಾಧಿಕಾರಿಯಾಗಿರುತ್ತಾರೆ.
	::	14(2)	ಸರ್ಕಾರವು ಕೇಂದ್ರ ಸ್ಥಾನದಲ್ಲಿಯ ಜೇಷ್ಠತಮ ಉಪವಿಭಾಗಾಧಿಕಾರಿಯವರನ್ನು ಜಿಲ್ಲಾಧಿಕಾರಿ ಅಂತಾ
	::	49(ಎ)	ಮೇಲ್ಮನವಿ ಪ್ರಾಧಿಕಾರಿ ಅಂತಾ ಕಾರ್ಯನಿರ್ವಹಿಸುವುದು
	::	67(2)	ಯಾವುದೇ ಹಕ್ಕುಸ್ವಾಧೀನದ ಬಗ್ಗೆ ವಿಚಾರಣೆ ನಡೆಸಿ ಇತ್ಯರ್ಥಪಡಿಸುವುದು.
	::	69	12ನೇ ಅಧ್ಯಾಯದ ಉಪಬಂಧಗೊಳಪಟ್ಟು ಕಟ್ಟಡ ನಿರ್ಮಾಣಕ್ಕೆ ವಿಲೇ ಇಡಬಹುದು.
	::	84	ಅಧ್ಯಾಯದ 10ರ ಅಡಿಯಲ್ಲಿ ಉಪವಿಭಾಗಾಧಿಕಾರಿ ರಾಜ್ಯ ಸರ್ಕಾರ ನಿಗದಿಪಡಿಸಿದ ಗರಿಷ್ಠ ಅವಧಿಗೆ ಭೂ ಕಂದಾಯ ನಿಗದಿಪಡಿಸುವುದು
	::	94(ಸಿ)	ಪುರಸಭೆ ವ್ಯಾಪ್ತಿಯಲ್ಲಿ ಬರುವ ಅಕ್ರಮ ಕಟ್ಟಡಗಳನ್ನು ಸಕಮಗೊಳಿಸುವುದು

ಅ. ನಂ.	ಕಾಯ್ದೆ	ಕಲಂ	ವಿವರ
	::	111	ಜಮೀನು ವಿಭಜನೆ ಸಂದರ್ಭದಲ್ಲಿ ಖರ್ಚನ್ನು ನಿಗದಿಪಡಿಸಿ ಭೂ ಕಂದಾಯ ವಸೂಲಿ ಮಾಡುವುದು
	::	131(ಬಿ)	ನಕಾಶೆ ತಯಾರಿಕೆ ಪರಿಷ್ಕರಣೆ ಮೌಲ್ಯ ನಿಗದಿಪಡಿಸುವುದು.
	::	136(2)	ಮೇಲ್ಮನವಿ ಪ್ರಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
	::	149	ಕಲಂ 148ರಲ್ಲಿ ಕಾಯ್ದಿರಿಸಿದ ಕಟ್ಟಡ ನಿವೇಶನಗಳನ್ನು ಏಲೇ ಮಾಡುವುದು.
	::	151(1)	ಕಲಂ 151 ಗಡಿಯಲ್ಲಿನ ವಿನಾಯಿತಿ ಹಕ್ಕನ್ನು ನಿರ್ಧರಿಸುವುದು.
	::	151(1)ಬಿ 153(2)	ಮೋಜಣಿ ಮಾಡುವ ಸಂದರ್ಭದಲ್ಲಿ ಮೋಜಣಿ ಶುಲ್ಕ ನಿರ್ಧರಿಸುವುದು
	::	160(2)	ಹುಜೂರ್ ಜಮಾಬಂದಿ ಲೆಕ್ಕ ತ:ಖ್ತೆಯ ನಿರ್ಣಾಯಕ ಸಾಕ್ಷಿಯಾಗಿರುವುದು
	::	176	ಸ್ಥಿರಾಸ್ತಿ ಹರಾಜನ್ನು ರದ್ದುಪಡಿಸಿ ಮರು ಹರಾಜಿಗೆ ಆದೇಶಿಸಬಹುದು.
	::	177	ಹರಾಜನ್ನು ಸ್ಥಿರೀಕರಿಸಬಹುದು.
	::	178	176 1(ಬಿ) ಅಡಿಯಲ್ಲಿ ಜಮಾ ಮಾಡಿದ ವ್ಯಕ್ತಿಗೆ ವಾಪಾಸ್ಸು ಮಾಡಲು ಅದೇಶ ಮಾಡುವುದು.
2.	ಕರ್ನಾಟಕ ಭೂ ಕಂದಾಯ ಅಧಿನಿಯಮ 1966	43(3)	ಮೇಲ್ಮನವಿ ಪ್ರಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
	::	69(1)	ಮೇಲ್ಮನವಿ ಪ್ರಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
	::	71	ತಾಲ್ಲೂಕುಗಳ ಹಕ್ಕುಪತ್ರಿಗಳನ್ನು ಪುನಃ ಬರೆಯಲು ಅದೇಶಿಸಬಹುದಾಗಿದೆ.
	::	85(1)	ಕಲಂ 153(1)ಬಿ ಅಡಿಯಲ್ಲಿ ಪಾವತಿಸಬೇಕಾದ ಮೋಜಣಿ ಶುಲ್ಕ ನಿರ್ಧರಿಸುವುದು
	::	91(2)	ಸ್ವತ್ತಿನ ಕಾರ್ಡ್ ರಿಜಿಸ್ಟರ್‌ಗಳನ್ನು ಪುನಃ ಬರೆದಾಗ ಶೇ 5 ರಷ್ಟು ಪರಿಶೀಲಿಸುವುದು
	::	1082 (6)	ಅನಧಿಕೃತ ಸಾಗುವಳಿ ಸಕ್ರಮೀಕರಣ ಸಮಿತಿ ಹೊರಡಿಸಿದ ಅದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುವುದು
	::	108ಎಎ	ಹೆಚ್ಚುವರಿ ಸಮಿತಿಗೆ ಅಧ್ಯಕ್ಷರಾಗಿ ನಿರ್ವಹಿಸುವುದು
	::	108ಕೆ	ತಪ್ಪು ಮಾಹಿತಿ ನೀಡಿ ಜಮೀನು ಮಂಜೂರಾತಿ ಹೊಂದಿರುವುದನ್ನು ರದ್ದುಪಡಿಸಿ ಜಮೀನು ಮರಳಿ ಪಡೆಯುವುದು
	::	113(2)	ಬಾಕಿದಾರರು ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ಸ್ವಂತ ಅಥವಾ ಮತ್ತೊಬ್ಬ ವ್ಯಕ್ತಿಯ ಮೂಲಕ ಖರೀದಿಸಿದಂತಹ ಮಾರಾಟವನ್ನು ರದ್ದುಪಡಿಸುವುದು.

ಅ. ನಂ.	ಕಾಯ್ದೆ	ಕಲಂ	ವಿವರ
3.	ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961/74	48(2)	ತಾಲ್ಲೂಕಿನ ಭೂನ್ಯಾಯ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು
	::	77–ಎ	ನಮೂನೆ –7ಅ ರ ಅರ್ಜಿಗಳನ್ನು ಇತ್ಯರ್ಥಪಡಿಸುವುದು
	::	79-A & B	ಉಲ್ಲಂಘನೆ ಪಕರಣಗಳನ್ನು ಇತ್ಯರ್ಥಪಡಿಸುವುದು
	::	80	ಕೃಷಿ ಜಮೀನು ಖರೀದಿಸಲು ಅನುಮತಿ ನೀಡುವುದು
	::	ಕಲಂ 82ಮತ್ತು ನಿಯಮ 36	ಈ ಕಾಯ್ದೆ ಉಲ್ಲಂಘಿಸಿ ನಡೆಸಿದ ವ್ಯವಹಾರಗಳನ್ನು ಇತ್ಯರ್ಥಪಡಿಸಲಾಯಿತು
	::	ಕಲಂ 83ಮತ್ತು ನಿಯಮ 37	ಕಲಂ 82 ರಲ್ಲಿ ಬಂದ ವರದಿಯನ್ನು ಇತ್ಯರ್ಥಪಡಿಸುವುದು
	::	84	ಸತತ 2 ವರ್ಷಗಳಲ್ಲಿ ಸಾಗುವಳಿ ಮಾಡದಿರುವ ಜಮೀನನ್ನು 1 ವರ್ಷದೊಳಗಾಗಿ ಸಾಗುವಳಿ ಮಾಡುವಂತೆ ನಿರ್ದೇಶನ ನೀಡಬಹುದು
	::	85	ಸಾಗುವಳಿ ಮಾಡಿದ ಜಮೀನನ್ನು ಕನಿಷ್ಠ 5 ವರ್ಷದ ವರೆಗೆ ಲಾವಣಿ ಆಧಾರದ ಮೇರೆ ನೀಡಲು ಉಪವಿಭಾಗಾಧಿಕಾರಿಗಳು ಅಧಿಕಾರ ಹೊಂದಿರುತ್ತಾರೆ.
	::	86	ಕಲಂ 86 ರ ಅಡಿಯಲ್ಲಿ ಲಾವಣಿ ಆಧಾರಿತ ಜಮೀನನ್ನು ರದ್ದುಪಡಿಸಿ ಬೇರೆಯವರಿಗೆ ಷರತ್ತುಗಳ ಮೇರೆಗೆ ನೀಡಬಹುದು
	::	87	ಜಮೀನುಗಳ ಬಗ್ಗೆ ಕರಾರುಪತ್ರ ಹೊರಡಿಸುವ ಅಧಿಕಾರವಿರುತ್ತದೆ.
	::	88	ಜಮೀನು ಲಾವಣಿ ಪಕಾರ ಮುಕ್ತಾಯವಾದ ನಂತರ ಜಮೀನು ಕಬ್ಜೆ ಮರಳೀ ಪಡೆದು ಅರ್ಹ ವ್ಯಕ್ತಿಗೆ ನೀಡುವ ಅಧಿಕಾರವಿರುತ್ತದೆ.
	::	118–2ಬಿ	ಮೇಲ್ಮನವಿ ಪಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
4.	1. ಭೂಸ್ವಾಧೀನ ಕಾಯ್ದೆ 1894 2. ಭೂಸ್ವಾಧೀನ (ಕರ್ನಾಟಕ ವಿಸ್ತರಿತ ಹಾಗೂ ತಿದ್ದುಪಡಿ)ಕಾಯ್ದೆ–1961. 3. ಕರ್ನಾಟಕ.ಭೂಸ್ವಾಧೀನ ನಿಯಮಗಳು 1965. 4. ಕರ್ನಾಟಕ.ಭೂಸ್ವಾಧೀನ (ಕಂಪನಿಗಳು) ನಿಯಮಗಳು 1973.		ಭೂಸ್ವಾಧೀನಾಧಿಕಾರಿಯ ಕಾರ್ಯ ನಿರ್ವಹಿಸುವುದು
	ಕರ್ನಾಟಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳವರ (ಹಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978 ಹಾಗೂ ನಿಯಮಗಳು 1979	ಕಲಂ 5 ಮತ್ತು ನಿಯಮ 3	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳವರ ಜಮೀನುಗಳ ವರ್ಗಾವಣೆ/ ಹಿಂತಿರುಗಿಸುವಿಕೆ (Restore) ಕುರಿತು ಕ್ರಮ ಜರುಗಿಸುವುದು.
	ಕರ್ನಾಟಕ ಹಲವು ಇನಾಂಗಳ ರದ್ದತಿ ಕಾಯ್ದೆ 1977		ಕಾರ್ಯ ನಿರ್ವಹಿಸುವುದು

ಅ. ನಂ.	ಕಾಯ್ದೆ	ಕಲಂ	ವಿವರ
6.	ಕರ್ನಾಟಕ ನೀರಾವರಿ ಅಧಿನಿಯಮಗಳು 1965	21–ಎ(2)	ಮೇಲ್ಮನವಿ ಪ್ರಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
7.	ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993	48(1) 48(3)	ಗ್ರಾಮ ಪಂಚಾಯತ ಅಧ್ಯಕ್ಷ / ಉಪಾಧ್ಯಕ್ಷ ನಿರ್ಣಯಿಸುವುದು. ಉಪಾಧ್ಯಕ್ಷ ರಾಜೀನಾಮೆ
8.	ಕರ್ನಾಟಕ ಪಂಚಾಯತ್ ರಾಜ್ (ತಾ.ಪಂ.ಗಳ	ನಿಯಮ 3	ಚುನಾವಣೆ ಜರುಗಿಸುವಿಕೆ ಅಧಿಕಾರ
9.	ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷ ರ ವಿರುದ್ಧ ಅವಿಶ್ವಾಸ ಮಂಡನೆ) ನಿಯಮಗಳು 1994	ನಿಯಮ 3	ಅವಿಶ್ವಾಸ ಗೊತ್ತುವಳಿ ಜರುಗಿಸುವಿಕೆ ಅಧಿಕಾರ
10.	ಸಾರ್ವತ್ರಿಕ ಚುನಾವಣೆಗಳು: ಮತದಾರರ ನೋಂದಣಿ ಅಧಿಕಾರಿಗಳ ಕೈಪಿಡಿ	.	ಮತದಾರರ ನೋಂದಣಿ ಅಧಿಕಾರಿ/ ನಿರ್ವಾಚಣಾಧಿಕಾರಿ ಅಂತಾ ಕಾರ್ಯ ನಿರ್ವಹಿಸುವುದು
11.	ಕರ್ನಾಟಕ ನಾಗರೀಕ ಸೇವೆಗಳು (ವ,ನಿ ಮತ್ತು ಮೇ) ನಿಯಮಗಳು 1957	ನಿಯಮ 10(1)	ಗ್ರಾಮ ಲೆಕ್ಕಾಧಿಕಾರಿಯವರ ಶಿಸ್ತು ಪ್ರಾಧಿಕಾರಿ ಅಂತಾ ಕಾರ್ಯ ನಿರ್ವಹಿಸಬಹುದು.

ಅಧ್ಯಾಯ–2

ಸೆಕ್ಷನ್ 4(1)(ಬಿ) (ii) ಅಧಿಕಾರಿ/ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯ ವಿವರಗಳು

ಕ್ರ. ಸಂ.	ಅಧಿಕಾರಿ/ಸಿಬ್ಬಂದಿಯ ಹೆಸರು ಶ್ರೀಯುತರಾದ	ಹುದ್ದೆ	ನೇಮಿಸಿರುವ ಕರ್ತವ್ಯಗಳು	ಅಧಿಕಾರ
1.	ವೆಂಕಟೇಶ್ ಟಿ.	ಉಪ ವಿಭಾಗಾಧಿಕಾರಿ	--	ಎಸ್ ಡಿ ಎಂ.
2.	ಜಿ.ಎನ್. ಚಂದ್ರಶೇಖರಪ್ಪ	ವ್ಯವಸ್ಥಾಪಕರು	ಮೇಲ್ವಿಚಾರಣೆ ಮತ್ತು ಆಡಿಟ್	--
3.	ಬಿ. ಗಂಗಾಧರಪ್ಪ	ಪ್ರದಸ.,–1	ಭೂ ಸ್ವಾಧೀನ ಎಸ್ಆರ್ ಭೂ ಸ್ವಾಧೀನ ಸಿಆರ್ ಎಎಲ್ಎನ್	--
4.	ಟಿ. ಸಹದೇವಚಾರ್	ಪ್ರದಸ.,–2	ಆರ್ ಆರ್ ಟಿ (ಹಕ್ಕು ದಾಖಲೆ ಶಾಖೆ) ಪುರಸಭೆ ಗಣಿಗಾರಿಕೆ (ಐಎನ್ಡಿ) ಸಾರ್ವಜನಿಕ ಕುಂದು ಕೊರತೆ	--
5.	ಆರ್. ಲೋಲಾಕ್ಷಮ್ಮ	ಪ್ರದಸ.,–3	ಸಿಬ್ಬಂದಿ ಶಾಖೆ ಗ್ರಾಲೆ ಸಿಬ್ಬಂದಿ ಶಾಖೆ ಸಿಸಿಎ ಪಿಎಫ್ಎಫ್	--
6.	ಆರ್.ಮಂಜುಳಮ್ಮ	ಸ್ಟೆನೋ (ಪ್ರದಸ., ಹುದ್ದೆಯಲ್ಲಿ ತರಬೇತಿ)	ಅಪೀಲುಗಳು ಕಂದಾಯ ಮೇಲ್ಮನವಿ ಪ್ರಕರಣಗಳು ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಪ್ರಕರಣಗಳು ಯುಎಲ್ಎನ್ಡಿ ನ್ಯಾಯಾಂಗ ಪ್ರಕರಣಗಳು ಪುರಸಭೆ ನ್ಯಾಯಾಂಗ ಪ್ರಕರಣಗಳು	--

ಕ್ರ. ಸಂ.	ಅಧಿಕಾರಿ/ಸಿಬ್ಬಂದಿಯ ಹೆಸರು ಶ್ರೀಯುತರಾದ	ಹುದ್ದೆ	ನೇಮಿಸಿರುವ ಕರ್ತವ್ಯಗಳು	ಅಧಿಕಾರ
7.	ಬಿ.ಟಿ. ಬೋರಮ್ಮ	ಪ್ರದಸ-4	1. ಎಸ್ ಸಿ ಪಿ ಟಿ ಎಲ್ ಶಾಖೆ 2. ಎಸ್ ಸಿ ಪಿ ಟಿ ಎಲ್ ನ್ಯಾಯಾಂಗ ಪಕರಣ	--
8.	ಷಡಕ್ಷರಿ ಕೆ.ಬಿ.	ಪ್ರ ದ ರಾ ನಿ.,-5	ಇಎಲ್‌ಎನ್, ಚುನಾವಣೆ, ಯುಎಲ್‌ಎನ್‌ಡಿ ಎಲ್‌ಎನ್‌ಡಿ ಆಶ್ರಯ	--
9.	ಎಸ್. ಪ್ರೇಮಲತ	ದ್ವಿದಸ.,-1	ಮುಜರಾಯಿ ಹೆಚ್ ಅರ್ ಅರ್ ಭೂ ಸುಧಾರಣೆ ಭೂಸುಧಾರಣೆ ಕಾಯ್ದೆ 79ಎ, 80, 82 ಪ್ರಕರಣಗಳು ರಾಷ್ಟ್ರೀಯ ಕುಟುಂಬ ಸಹಾಯ ಯೋಜನೆ, ರೈತರ ಆತ್ಮಹತ್ಯೆ	--
10.	ಹೆಚ್.ಎಸ್. ನಾಗರಾಜ	ದ್ವಿದಸ.,-2	ಭೂ ಸ್ವಾಧೀನ (ನ್ಯಾಯಾಲಯದಿಂದ ಹೆಚ್ಚುವರಿ ಪರಿಹಾರಕ್ಕೆ ಆದೇಶವಾದ ಪಕರಣಗಳು)	--
11.	ಮಮತ	ದ್ವಿದಸ.,-3	ಸಿಎಸ್ ಡಿ ಸಿಎಸ್‌ಡಿ ಇಸಿಎ ಬೆಂಕಿ ಅಪಘಾತ ಎಸ್ ಸಿ ವೈ	--
12.	ಪಿ.ಡಿ. ಮಮತ	ದ್ವಿದಸ.,-4	ಸಂಕೀರ್ಣ ಶಾಖೆ ಜೀತ ಆಮದು ಮತ್ತು ರವಾನೆ	--
13.	ಶ್ರೀನಿವಾಸ	ದ್ವಿದಸ.,-5	ಎಲ್ ಎ ಕ್ಯು ಶಾಖೆಯ ಕೋರ್ಟ್ ಪ್ರಕರಣಗಳಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವುದು.	--
14.	ಬಿ. ಶೋಭ	ಟೈಪಿಸ್ಟ್-1	ಬೆರಳಚ್ಚು ಮಾಡುವುದು	--
15.	ಹೆಚ್. ಭಾರತಿ	ಟೈಪಿಸ್ಟ್-2	ಬೆರಳಚ್ಚು ಮಾಡುವುದು	--
16.	ಬಿ. ಕೇಶವಯ್ಯ	ಡ್ರೈವರ್-	ವಾಹನ ಚಾಲನೆ ಮಾಡುವುದು	--
17.	ಎನ್. ಗುಡ್ಡಪ್ಪ	ಡಿ.ಗ್ರೂಪ್-1	ಗ್ರೂಪ್ ಡಿ ಹುದ್ದೆಗೆ ನೇಮಿಸಿರುವ ಕರ್ತವ್ಯಗಳು	--
18.	ಸತ್ಯಮ್ಮ	ಡಿ.ಗ್ರೂಪ್ -2 (ನಿಯೋಜನೆ)	ಗ್ರೂಪ್ ಡಿ ಹುದ್ದೆಗೆ ನೇಮಿಸಿರುವ ಕರ್ತವ್ಯಗಳು	--
19.	ಸುಲೋಚನಮ್ಮ	ಡಿ.ಗ್ರೂಪ್ -3 (ಯೋಜನೆ)	ಗ್ರೂಪ್ ಡಿ ಹುದ್ದೆಗೆ ನೇಮಿಸಿರುವ ಕರ್ತವ್ಯಗಳು	--
20.	ಕೆ.ಎಂ. ಮಹಮ್ಮದ್ ಗೌಸ್ ಸಾಬ್	ಡಿ.ಗ್ರೂಪ್-4	ಗ್ರೂಪ್ ಡಿ ಹುದ್ದೆಗೆ ನೇಮಿಸಿರುವ ಕರ್ತವ್ಯಗಳು	--

ಅಧ್ಯಾಯ-3

ಸೆಕ್ಷನ್ 4(1)(ಬಿ) (iii) ನಿರ್ಣಯ ತೆಗೆದುಕೊಳ್ಳುವಲ್ಲಿ ಅನುಸರಿಸಲಾಗುವ ವಿಧಿವಿಧಾನಗಳು ಮತ್ತು ಪರಿವೀಕ್ಷಣೆ ಮತ್ತು ಜವಾಬ್ದಾರಿಗಳು

ಯಾವುದೇ ಶಾಖೆಗೆ ಸಂಬಂಧಿಸಿದಂತೆ ಈ ಕಛೇರಿಯ ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿದ ಟಪಾಲುಗಳನ್ನು ಕಛೇರಿ ವ್ಯವಸ್ಥಾಪಕರು ನೋಡಿ ಶಾಖೆಯ ವಿವರವನ್ನು ನಮೂದಿಸಿ ಸಹಿ ಮಾಡಿ ನಂತರ ಉಪ ವಿಭಾಗಾಧಿಕಾರಿಗಳವರಿಗೆ ಗಮನಕ್ಕೆ ತಂದು ಅವರ ಸಹಿ ಪಡೆದು ಸಾಮಾನ್ಯ ಸ್ವೀಕೃತಿಯಲ್ಲಿ ಸಾಮಾನ್ಯ ಸ್ವೀಕೃತಿ ಸಂಖ್ಯೆಯನ್ನು ನೀಡಿ ಸ್ವೀಕೃತವಾದ ಪತ್ರದ ಎಲ್ಲಾ ವಿವರಗಳನ್ನು ಬರೆದು ಸಂಬಂಧಿಸಿದ ಎಲ್ಲಾ ಶಾಖೆಗಳ ವಿಷಯ ನಿರ್ವಾಹಕರುಗಳಿಗೆ ನೀಡಲಾಗುವುದು ಸಂಬಂಧಿಸಿದ ವಿಷಯ ನಿರ್ವಾಹಕರು ಅಥವಾ ಪ್ರದಸ., ದ್ವಿದಸ.ಗಳ ಪತ್ರಗಳನ್ನು ಸ್ವೀಕರಿಸಿ ಸಾಮಾನ್ಯ ಸ್ವೀಕೃತಿ ವಹಿ ಪೂರ್ಣ ಸಹಿ ಮಾಡಿ ತೆಗೆದುಕೊಳ್ಳುವರು. ಸಂಬಂಧಿಸಿದ ವಿಷಯ ನಿರ್ವಾಹಕರು ಸ್ವೀಕರಿಸಿದ ಪತ್ರವನ್ನು ವಿಷಯ ನಿರ್ವಾಹಕರ ದಿನಚರಿಯಲ್ಲಿ ನಮೂದಿಸಿ ನಂತರ ವಿಷಯ ವಹಿಯಲ್ಲಿ ಕ್ರ.ಸಂ.ಯನ್ನು ನೀಡಿ ಎಲ್ಲಾ ವಿವರಗಳನ್ನು ಬರೆದಿರುತ್ತಾರೆ. ನಂತರ ಪ್ರತ್ಯೇಕ ಕಡತವನ್ನು ಸಿದ್ಧಪಡಿಸಿ ಸಂಬಂಧಿಸಿದ ಪತ್ರದ ಬಗ್ಗೆ ಕಛೇರಿ ಟಿಪ್ಪಣಿಯಲ್ಲಿ ವಿಷಯವನ್ನು ಮಂಡಿಸುತ್ತಾರೆ. ತುರ್ತು ಸಂದರ್ಭದಲ್ಲಿ ಕರಡು ಪತ್ರವನ್ನು ಮಂಡಿಸಿ ವ್ಯವಸ್ಥಾಪಕರಿಗೆ ಕಳುಹಿಸುತ್ತಾರೆ. ಕಛೇರಿ ವ್ಯವಸ್ಥಾಪಕರು ಸದರಿ ಪತ್ರವನ್ನು ಪರಿಶೀಲಿಸಿ ಕಛೇರಿ ಟಿಪ್ಪಣಿಯಲ್ಲಿ ಕಂಡಿಕೆಯನ್ನು ಮುಂದುವರೆಸಿ ಅವರ ಅಭಿಪ್ರಾಯವನ್ನು ಮಂಡಿಸಿ ಉಪ ವಿಭಾಗಾಧಿಕಾರಿಗಳಿಗೆ ಮಂಡಿಸಿರುತ್ತಾರೆ. ಉಪ ವಿಭಾಗಾಧಿಕಾರಿಗಳು ಸದರಿ ಪ್ರಕರಣದ ಬಗ್ಗೆ ಪರಿಶೀಲಿಸಿ ಕಛೇರಿ ಟಿಪ್ಪಣಿಯಲ್ಲಿ ಅನುಮೋದನೆಯನ್ನು ಪಡೆಯಲಾಗುವುದು. ಹಾಗೂ ತುರ್ತು ಅವಶ್ಯಕತೆ ಇದ್ದಲ್ಲಿ ತುರ್ತು ಸಲ್ಲಿಸುವ ಪ್ರಕರಣಗಳಿಗೆ ಕರಡು ಪತ್ರವನ್ನು ಸಹ ಅನುಮೋದಿಸುವುದು. ನಂತರ ಆ ಪ್ರಕರಣದ ಬಗ್ಗೆ ಸಂಬಂಧಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಆದೇಶ ಹೊರಡಿಸುವುದು.

ಹೊಣೆಗಾರಿಕೆ ಮತ್ತು ಮೇಲ್ವಿಚಾರಣೆ

ವಿಷಯ ನಿರ್ವಾಹಕರು ಸ್ವೀಕೃತಿ ಆದ ಪತ್ರಗಳನ್ನು ಕಛೇರಿ ಕಾರ್ಯ ವಿಧಾನ ಕೈಪಿಡಿಯಲ್ಲಿ ನೀಡಿದ ನಿರ್ದೇಶನದಂತೆ ಕಡತ ಮಂಡಿಸುವ ಬಗ್ಗೆ ಕ್ರಮ ಕೈಗೊಳ್ಳುವರು. ಅಲ್ಲದೆ ಇತರೆ ಕಛೇರಿಗಳಿಂದ ಬರಬೇಕಾದ ಮಾಹಿತಿಯ ಬಗ್ಗೆ ನೆನಪೋಲೆ ನೀಡುವುದರ ಮೂಲಕ ಸಂಬಂಧಿಸಿದ ಕಛೇರಿಗಳಿಂದ ಮಾಹಿತಿ ತರಿಸಿ ಕಡತವನ್ನು ಮಂಡಿಸುತ್ತಾರೆ. ಈ ಕಛೇರಿಯಲ್ಲಿ ಕ್ರಮ ಕೈಗೊಳ್ಳಲಿರುವ ಕಾಯ್ದೆ ಹಾಗೂ ನಿಯಮಗಳ ಅಡಿಯಲ್ಲಿ ಅನುಸರಿಸಬೇಕಾದ ಕಾಲಾವಧಿಯನ್ನು ಗಮನಿಸಿ ನಿಗದಿತ ಕಾಲಾವಧಿಯೊಳಗೆ ಪೂರೈಸುವಂತೆ ಕ್ರಮ ಕೈಗೊಳ್ಳುತ್ತಾರೆ. ಈ ಬಗ್ಗೆ ಕಛೇರಿಯ ವ್ಯವಸ್ಥಾಪಕರು ಹಾಗೂ ಉಪ ವಿಭಾಗಾಧಿಕಾರಿಗಳು ಇಂತಹ ಪ್ರಕರಣಗಳ ವಿಳಂಬದ ಬಗ್ಗೆ ಮತ್ತು ವಿಲೇವಾರಿ ಪರಿಶೀಲಿಸಿ ಪ್ರತಿ ಹಂತದಲ್ಲೂ ಮೇಲ್ವಿಚಾರಣೆ ನಡೆಸುತ್ತಾರೆ.

ಅಧ್ಯಾಯ-4

4(1) (ಬಿ) (iv) ಕರ್ತವ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಸೂತ್ರಗಳು

ಈ ಕಚೇರಿಯ ವ್ಯಾಪ್ತಿಗೆ ಬರುವ ವಿವಿಧ ಕಾಯ್ದೆಯ ಅಡಿಯಲ್ಲಿ ಸಲ್ಲಿಸುವ ಮೇಲ್ಮನವಿಗಳು ಹಾಗೂ ನ್ಯಾಯಾಲಯಕ್ಕೆ ದಾಖಲಾಗುವ ಎಸ್ ಸಿ ಪಿ ಟಿ ಎಲ್ ಪ್ರಕರಣ ಮತ್ತು ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆಯಲ್ಲಿ ಕೆಲವು ಕಲಂಗಳನ್ನು ಉಲ್ಲಂಘನೆ ದಾಖಲು ಮಾಡಿದ ಪ್ರಕರಣಗಳನ್ನು ಹಾಗೂ ಜಿಲ್ಲಾಧಿಕಾರಿಗಳ, ಉಪವಿಭಾಗಾಧಿಕಾರಿಗಳ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ಅಗತ್ಯ ವಸ್ತುಗಳ ಉಲ್ಲಂಘನೆ ಕಾಯಿದೆ ಅಡಿಯಲ್ಲಿ ದಾಖಲಾಗುವ ಪ್ರಕರಣಗಳು ಅಲ್ಲದೆ ನ್ಯಾಯಾಂಗ ಶಾಖೆಗೆ ಸಂಬಂಧಿಸಿದ ಶಾಖೆಗೆ ಸಂಬಂಧಿಸಿದ ಪ್ರಕರಣಗಳು ಉಭಯತ್ರರರು ಸಾಕಷ್ಟು ಅವಕಾಶ ನೀಡಿ ವಿಚಾರಣೆ ನಡೆಸಿ ಆದ್ಯತೆ ಮೇಲೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲು ಕಂದಾಯ ಇಲಾಖೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಕಡತಗಳ ಬಗ್ಗೆ ಹಾಗೂ ನ್ಯಾಯಾಂಗ ಶಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮತ್ತು ಚುನಾವಣೆಗಳಿಗೆ ಸಂಬಂಧಿಸಿದ ಹಾಗೂ ಮತದಾರರ ಪಟ್ಟಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕಾಲ ಕಾಲಕ್ಕೆ ಸರ್ಕಾರದಿಂದ ಹಾಗೂ ಮೇಲಾಧಿಕಾರಿಗಳಿಂದ ಬರುವ ನಿರ್ದೇಶನಗಳನ್ನು ಅನುಸರಿಸಿ ನಿಗದಿಪಡಿಸಿದ ಕಾಲಾವಧಿಯೊಳಗೆ ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ಉಪವಿಭಾಗಾಧಿಕಾರಿಗಳು ಪ್ರವಾಸ ಕಾಲದಲ್ಲಿ ಅಧೀನ ಕಚೇರಿಗಳಿಗೆ ಭೇಟಿ ನೀಡಿ ಕಂದಾಯ ಇಲಾಖೆಯ ಎಲ್ಲಾ ವಿಷಯಗಳ ಕಾರ್ಯವೈಖರಿ ಬಗ್ಗೆ ಪರಿಶೀಲಿಸಿ ಪ್ರಗತಿಯು ಸಮರ್ಪಕವಾಗಿಲ್ಲದಿದ್ದಲ್ಲಿಸೂಕ್ತ ನಿರ್ದೇಶನ ನೀಡುತ್ತಾರೆ. ಸುಧಾರಣೆ ಅಗುವಂತೆ ಕ್ರಮ ಕೈಗೊಳ್ಳುತ್ತಾರೆ.

ನೈಸರ್ಗಿಕ ವಿಕೋಪ ಹಾಗೂ ಕಾನೂನು ಶಾಂತಿ ಪಾಲನೆಗಳ ತುರ್ತು ಸಂದರ್ಭದಲ್ಲಿ ಅಗತ್ಯ ಕ್ರಮಗಳನ್ನು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಅಧೀನ ಕಚೇರಿಗಳಿಂದ ಕಾಲಕಾಲಕ್ಕೆ ಅಗತ್ಯ ಮಾಹಿತಿಗಳನ್ನು ತರಿಸಿ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದು.

ಅಧ್ಯಾಯ-5

4(1) (ಬಿ) (v) ಅನ್ವಯ ಅನುಸರಿಸಬೇಕಾದ ನಿಯಮ ಇತ್ಯಾದಿ ಪಟ್ಟಿ

1) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಮತ್ತು ನಿಯಮಗಳು 1966
2) ಕರ್ನಾಟಕ ಭೂ ಸುಧಾರಣಾ ಕಾಯ್ದೆ 1964 ಮತ್ತು ನಿಯಮಗಳು 1974
3) ಕರ್ನಾಟಕ ಭೂ ಸ್ವಾಧೀನ ಕಾಯ್ದೆ 1894
4) ಕರ್ನಾಟಕ ಮುದ್ರಾಂಕ ಅಧಿನಿಯಮ 1967 ಮತ್ತು ನಿಯಮಾವಳಿ 1958
5) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಪರಭಾರೆ ನಿಷೇಧ ಅಧಿನಿಯಮ
6) ಕರ್ನಾಟಕ ಕೆ ಎ ಸಿ ಎಸ್ ವೃಂದ ಮತ್ತು ನೇಮಕಾತಿ, ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ನಿಯಮಗಳು
7) ಕಂದಾಯ ವಸೂಲಿ ಕಾಯ್ದೆ
8) ಪತ್ರಿಕಾ ಮತ್ತು ನೊಂದಣಿ ಅಧಿನಿಯಮ 1867
9) ಜೀತದಾಳು ನಿರ್ಮೂಲನಾ ಕಾಯ್ದೆ 1976
10) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಷೇಧ) ಅಧಿನಿಯಮ 1989
11) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957
12) ದಂಡ ಪ್ರಕ್ರಿಯೆ ಸಂಹಿತೆ.

ಅಧ್ಯಾಯ-6

ಸೆಕ್ಷನ್ 4(1)(ಬಿ) (vi) ಈ ಕಛೇರಿ ವ್ಯಾಪ್ತಿಗೆ ಬರುವ ಕಾಯಿದೆಗಳ ಕಾನೂನುಗಳ ವಿವರ ತ:ಖ್ತೆ

1) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಮತ್ತು ನಿಯಮಗಳು 1966
2) ಕರ್ನಾಟಕ ಭೂ ಸುಧಾರಣಾ ಕಾಯ್ದೆ 1964 ಮತ್ತು ನಿಯಮಗಳು 1974
3) ಕರ್ನಾಟಕ ಭೂ ಸ್ವಾಧೀನ ಕಾಯ್ದೆ 1894
4) ಕರ್ನಾಟಕ ಮುದ್ರಾಂಕ ಅಧಿನಿಯಮ 1967 ಮತ್ತು ನಿಯಮಗಳು 1958
5) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರಭಾರೆ ನಿಷೇಧ ಅಧಿನಿಯಮ
6) ಕರ್ನಾಟಕ ಕೆ.ಎಸಿ ಎಸ್ ವೃಂದ ಮತ್ತು ನೇಮಕಾತಿ ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ನಿಯಮಗಳು
7) ಕಂದಾಯ ವಸೂಲಿ ಕಾಯ್ದೆ.
8) ಪತ್ರಿಕಾ ಮತ್ತು ನೊಂದಣಿ ಅಧಿನಿಯಮ 1867
9) ಜೀತದಾಳು ನಿರ್ಮೂಲನ ಕಾಯ್ದೆ 1976
10) ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಷೇಧ) ಅಧಿನಿಯಮ 1989
11) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957
12) ದಂಡ ಪ್ರಕ್ರಿಯೆ ಸಂಹಿತೆ

ಅಧ್ಯಾಯ-7

4(1) (ಬಿ) (vii)

ಈ ಕಚೇರಿಯಲ್ಲಿ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಸೂತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ

ಈ ಕಚೇರಿಗೆ ಅನ್ವಯಿಸುವುದಿಲ್ಲ.

ಅಧ್ಯಾಯ -8

4(1) (ಬಿ) (vii) ಈ ಕಚೇರಿಯಲ್ಲಿರುವ ನಿಗಮ/ಪರಿಷತ್ತು ಸಮಿತಿ ಇತರ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ.

ಈ ಕಚೇರಿಗೆ ಅನ್ವಯಿಸುವುದಿಲ್ಲ.

ಅಧ್ಯಾಯ-9

ಸೆಕ್ಷನ್ 4(1)(ಬಿ) (ix) ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ

ಕ್ರ. ಸಂ.	ಅಧಿಕಾರಿ/ ಸಿಬ್ಬಂದಿಯ ಹೆಸರು ಶ್ರೀಯುತರಾದ	ಹುದ್ದೆ	ಕಛೇರಿ ವಿಳಾಸ	ಸಂಪರ್ಕದ ನಂಬರ್/ ಇ.ಮೇಲ್ ಐ.ಡಿ
1.	ವೆಂಕಟೇಶ್ ಟಿ.	ಉಪ ವಿಭಾಗಾಧಿಕಾರಿ	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತ್ರದುರ್ಗ	9980821911 a.c.chitradurga @ gmail.com.
2.	ಜಿ.ಎನ್. ಚಂದ್ರಶೇಖರಪ್ಪ	ವ್ಯವಸ್ಥಾಪಕರು	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9448924492
3.	ಬಿ. ಗಂಗಾಧರಪ್ಪ	ಪ್ರದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9980447079
4.	ಟಿ. ಸಹದೇವಚಾರ್	ಪ್ರದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9743446945
5.	ಆರ್. ಲೋಲಾಕ್ಷಮ್ಮ	ಪ್ರದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9448694877
6.	ಆರ್. ಮಂಜುಳಮ್ಮ	ಸ್ಟೆನೋ (ಪದಸ., ಹುದ್ದೆಯಲ್ಲಿ ತರಬೇತಿ)	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9449374747
7.	ಬಿ.ಟಿ. ಬೋರಮ್ಮ	ಪ್ರದಸ	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	226293
8.	ಕೆ.ಬಿ. ಷಡಕ್ಷರಿ	ಪ್ರ ದ ರಾ ನಿ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9481720727
9.	ಎಸ್. ಪ್ರೇಮಲತ	ದ್ವಿದಸ	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9980442092
10.	ಹೆಚ್.ಎಸ್. ನಾಗರಾಜ	ದ್ವಿದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9632667699
11.	ಮಮತ	ದ್ವಿದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9731215524
12.	ಪಿ.ಡಿ. ಮಮತ	ದ್ವಿದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9945522727
13.	ಶ್ರೀನಿವಾಸ ಎಸ್.	ದ್ವಿದಸ.,	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9916931837
14.	ಬಿ. ಶೋಭ	ಟೈಪಿಸ್ಟ್	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9449850185
15.	ಹೆಚ್. ಭಾರತಿ	ಟೈಪಿಸ್ಟ್	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9448565345
16.	ಬಿ. ಕೇಶವಯ್ಯ	ಡ್ರೈವರ್	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9731329934
17.	ಎನ್. ಗುಡ್ಡಪ್ಪ	ಡಿ.ಗ್ರೂಫ್	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	--
18.	ಸತ್ಯಮ್ಮ	ಡಿ.ಗ್ರೂಫ್ (ನಿಯೋಜನೆ)	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	225[illegible]
19.	ಸುಲೋಚನಮ್ಮ	ಡಿ.ಗ್ರೂಫ್ (ನಿಯೋಜನೆ)	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9945307027
20.	ಕೆ.ಎಂ. ಮಹಮ್ಮದ್ ಗೌಸ್ ಸಾಬ್	ಡಿ.ಗ್ರೂಫ್	ಉಪ ವಿಭಾಗಾಧಿಕಾರಿಗಳ ಕಛೇರಿ, ಚಿತದುರ್ಗ	9611244454

ಅಧ್ಯಾಯ-10

ಸೆಕ್ಷನ್ 4(1)(ಬಿ) (x) ನಿಯಮಗಳಲ್ಲಿ ಅವಕಾಶ ಮಾಡಿದ ವ್ಯವಸ್ಥೆಯನ್ವಯ ಪರಿಹಾರ ಭತ್ಯೆಗಳನ್ನು ಒಳಗೊಂಡಂತೆ ಅಧಿಕಾರಿ/ನೌಕರರ ಮಾಸಿಕ ವೇತನ ವಿವರ

ಕ್ರ ಸಂ	ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯ ಹೆಸರು ಶ್ರೀಯುತರಾದ	ಹುದ್ದೆ	ಮಾಹೆಯಾನ ವೇತನ
1.	ವೆಂಕಟೇಶ್ ಟಿ.	ಉಪ ವಿಭಾಗಾಧಿಕಾರಿ	19331-00
2.	ಜಿ.ಎನ್. ಚಂದ್ರಶೇಖರಪ್ಪ	ವ್ಯವಸ್ಥಾಪಕರು	9932-00
3.	ಬಿ. ಗಂಗಾಧರಪ್ಪ	ಪ್ರದಸ.,	9960-00
4.	ಟಿ. ಸಹದೇವಚಾರ್	ಪ್ರದಸ.,	15039-00
5.	ಆರ್. ಲೋಲಾಕ್ಷಮ್ಮ	ಪ್ರದಸ.,	11671-00
6.	ಆರ್. ಮಂಜುಳಮ್ಮ	ಸ್ಟೆನೋ (ಪ್ರದಸ., ಹುದ್ದೆಯಲ್ಲಿ ತರಬೇತಿ)	8515-00
7.	ಬಿ.ಟಿ. ಬೋರಮ್ಮ	ಪ್ರದಸ	10257-00
8.	ಕೆ.ಬಿ. ಷಡಕ್ಷರಿ	ಪ್ರ ದ ರಾ ನಿ.,	8294-00
9.	ಎಸ್. ಪ್ರೇಮಲತ	ದ್ವಿದಸ	6633-00
10.	ಹೆಚ್.ಎಸ್. ನಾಗರಾಜ	ದ್ವಿದಸ.,	9264-00
11.	ಮಮತ	ದ್ವಿದಸ.,	7305-00
12.	ಪಿ.ಡಿ. ಮಮತ	ದ್ವಿದಸ.,	6826-00
13.	ಶ್ರೀನಿವಾಸ ಎಸ್.	ದ್ವಿದಸ.,	8234-00
14.	ಬಿ. ಶೋಭ	ಸೀ.ಟೈಪಿಸ್ಟ್	12330-00
15.	ಹೆಚ್. ಭಾರತಿ	ಟೈಪಿಸ್ಟ್	9102-00
16.	ಬಿ. ಕೇಶವಯ್ಯ	ಡ್ರೈವರ್	13704-00
17.	ಎನ್. ಗುಡ್ಡಪ್ಪ	ಡಿ.ಗ್ರೂಫ್	6605-00
18.	ಸತ್ಯಮ್ಮ	ಡಿ.ಗ್ರೂಫ್ (ನಿಯೋಜನೆ)	8555-00
19.	ಸುಲೋಚನಮ್ಮ	ಡಿ.ಗ್ರೂಫ್ (ನಿಯೋಜನೆ)	5980-00
20.	ಕೆ.ಎಂ. ಮಹಮ್ಮದ್ ಗೌಸ್ ಸಾಬ್	ಡಿ.ಗ್ರೂಫ್	6990-00

ಅಧ್ಯಾಯ -11

4(1) (ಬಿ) (xi) 2008-09 ಸಾಲಿಗೆ ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ನಿಗದಿಪಡಿಸಲಾದ ಅನುದಾನ ಈ ಕೆಳಗಿನಂತಿದೆ

ಈ ಕಚೇರಿಗೆ ಅನ್ವಯಿಸುವುದಿಲ್ಲ.

ಅಧ್ಯಾಯ -12

4(1) (ಬಿ) (xii) ಈ ಕಚೇರಿಯಲ್ಲಿ ನೀಡುವ ಸಹಾಯಧನ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರ.

ಈ ಕಚೇರಿಗೆ ಅನ್ವಯಿಸುವುದಿಲ್ಲ.

III -F7-B/B

ಅಧ್ಯಾಯ-13

4(1) ಬಿ (xiii) ಈ ಕಚೇರಿಯಲ್ಲಿ ನೀಡುವ ಪರ್ಮಿಟ್ ಅಥವಾ ಅಧಿಕಾರಿ ಪತ್ರಗಳ ವಿವರ ಮತ್ತು ರಿಯಾಯತಿ ಪಡೆಯುವ ವಿವರ.

ಈ ಕಛೇರಿಗೆ ಅನ್ವಯಿಸುವುದಿಲ್ಲ.

ಅಧ್ಯಾಯ-14

4(1) ಬಿ (xiv) ಕಚೇರಿಯ ಮಾಹಿತಿಯಸ್ನು ವೆಬ್ ಸೈಟ್‌ನಲ್ಲಿ ನೀಡಿರುವ ವಿವರ:

ಜಿಲ್ಲಾ ಆಡಳಿತದ (ಎನ್ ಐ ಸಿ) ರಾಷ್ಟ್ರೀಯ ಮಾಹಿತಿ ಕೇಂದ್ರದಲ್ಲಿ ಅಳವಡಿಸಿದೆ.

ಅಧ್ಯಾಯ-15

4(1) ಬಿ (xv) ಕಚೇರಿಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಲಭ್ಯವಿರುವ ಸವಲತ್ತುಗಳು ಹಾಗೂ ಗ್ರಂಥಾಲಯ ಹಾಗೂ ವಾಚನಾಲಯಗಳು:

ಈ ಕಚೇರಿಯಲ್ಲಿ ಗ್ರಂಥಾಲಯ ಸೌಲಭ್ಯವಿಲ್ಲ.

ಅಧ್ಯಾಯ-16

4(1) ಬಿ (xvi) ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು, ಪದನಾಮ ಹಾಗೂ ವಿಳಾಸದ ವಿವರ

1) ಸಾರ್ವಜನಿಕ ಸಂಪರ್ಕಾಧಿಕಾರಿ

ಕ್ರ. ಸಂ.	ಸಾರ್ವಜನಿಕ ಸಂಪರ್ಕಾಧಿಕಾರಿಯವರ ಕಛೇರಿ	ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು, ಪದನಾಮ	ಕಛೇರಿ ದೂರವಾಣಿ ಸಂಖ್ಯೆ ಮತ್ತು ಫ್ಯಾಕ್ಸ್	ಇ-ಮೇಲ್
1.	ಉಪ ವಿಬಾಗಾಧಿಕಾರಿಗಳ ಕಛೇರಿ ಚಿತ್ರದುರ್ಗ ಉಪ ವಿಭಾಗ	ವೆಂಕಟೇಶ್.ಟಿ. ಕೆ.ಎ.ಎಸ್., ಉಪ ವಿಭಾಗಾಧಿಕಾರಿ ಚಿತದುರ್ಗ.	222413 9980821911	a.c. chitradurga @ gmail com.

2) ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ

ಕ್ರ. ಸಂ.	ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಕಛೇರಿ	ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು, ಪದನಾಮ	ಕಛೇರಿ ದೂರವಾಣಿ ಸಂಖ್ಯೆ ಮತ್ತು ಫ್ಯಾಕ್ಸ್	ಇ-ಮೇಲ್
1.	ಉಪ ವಿಬಾಗಾಧಿಕಾರಿಗಳ ಕಛೇರಿ ಚಿತ್ರದುರ್ಗ ಉಪ ವಿಭಾಗ	ಜಿ.ಎನ್.ಚಂದ್ರಶೇಖರಪ್ಪ ವ್ಯವಸ್ಥಾಪಕರು ಚಿತದುರ್ಗ ಉಪ ವಿಭಾಗ	222413 9448924492	

3) ಮೇಲ್ಮನವಿ ಪ್ರಾಧಿಕಾರಿ

ಕ್ರ. ಸಂ.	ಮೇಲ್ಮನವಿ ಪ್ರಾಧಿಕಾರಿಯವರ ಕಛೇರಿ ಹೆಸರು	ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು, ಪದನಾಮ	ಕಛೇರಿ ದೂರವಾಣಿ ಸಂಖ್ಯೆ ಮತ್ತು ಫ್ಯಾಕ್ಸ್	ಇ-ಮೇಲ್
1.	ಜಿಲ್ಲಾಧಿಕಾರಿಗಳ ಕಛೇರಿ ಚಿತ್ರದುರ್ಗ	ಅಮ್ಲಾನ್ ಆದಿತ್ಯ ಬಿಸ್ವಾಸ್ ಭಾ.ಆ.ಸೇ., ಜಿಲ್ಲಾಧಿಕಾರಿಗಳು ಚಿತದುರ್ಗ	222811 ಫ್ಯಾ:224355	deo.chitradurga @ gmail.com.

ಅಧ್ಯಾಯ -17

4(1) (ಬಿ) (xvii) ಇತರೆ ವಿವರ

ಏನೂ ಇರುವುದಿಲ್ಲ.

ವೆಂಕಟೇಶ್ ಟಿ.
ಉಪ ವಿಭಾಗಾಧಿಕಾರಿ,
ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ.

ಪಿ.ಆರ್.884

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

"ಕನ್ನಡ ಅನುಷ್ಠಾನ ವರ್ಷ-2009"

2009-10ನೇ ಸಾಲು

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಮಾಹಿತಿ ಹಕ್ಕು ಕೈಪಿಡಿ-2005

ಸೆಕ್ಷನ್ 4(1)(ಬಿ) ಅನ್ವಯ

ಜಿಲ್ಲಾಧಿಕಾರಿಗಳು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ

ಅಧಿಸೂಚನೆ

ಸಂ. ಮಾಹ.ಸಿಆರ್ 01/2008-09, ದಿನಾಂಕ: -08-2009

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ, 2005ರ (Central Act 22 of 2005) ಅಡಿ ಪ್ರತಿ ಇಲಾಖೆಯ ಸೆಕ್ಷನ್ 4(i)B ಹಾಗೂ ಸೆಕ್ಷನ್ 5(i), 5(2) ಮತ್ತು 19(i) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ರವರಲ್ಲಿ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಮಾಹಿತಿ ಒದಗಿಸಲು ಮಾಹಿತಿ ಕೋರಿರುವ ಅರ್ಜಿದಾರರು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸುವುದಕ್ಕಾಗಿ ಕ್ರಮವಾಗಿ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಗಿನಂತೆ ನೇಮಿಸಲಾಗಿದೆ.

(ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 37 ಉಮಕ 2005 ದಿನಾಂಕ:08.02.2006)

ಕ್ರಮ ಸಂಖ್ಯೆ	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಕಲಂ 5(1)ರ ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಕಲಂ 5(1)ರ ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಕಲಂ 5(1)ರ ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾಧಿಕಾರ
1.	ಜಿಲ್ಲಾಧಿಕಾರಿಗಳ ಕಛೇರಿ	ಅಪರ ಜಿಲ್ಲಾಧಿಕಾರಿ ಶಿವಮೊಗ್ಗ..	ಕಛೇರಿ ಸಹಾಯಕರು ಜಿಲ್ಲಾಧಿಕಾರಿಗಳ ಕಛೇರಿ ಶಿವಮೊಗ್ಗ	ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ ಶಿವಮೊಗ್ಗ .

ಜಿಲ್ಲಾಧಿಕಾರಿ
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ

ಸುತ್ತೋಲೆ

ಸಂ. ಮಾಹ.ಸಿಆರ್ 01/2009-10, ದಿನಾಂಕ: -08-2009

ಸರ್ಕಾರದ ಅಧಿಸೂಚನೆ ನಂ. DPAR 74 RTI 2005(Part-2) ಬೆಂಗಳೂರು ದಿನಾಂಕ:11.10.2005ರ ನಿರ್ದೇಶನದಂತೆ 2005ರ ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಕಾಯ್ದೆ ಸಂಖ್ಯೆ 22)ರ ಅಡಿಯಲ್ಲಿ ಕಂದಾಯ ಇಲಾಖೆಯ ಮುಖ್ಯಸ್ಥರನ್ನು **ಸಾರ್ವಜನಿಕ ಪ್ರಾಧಿಕಾರಿ** ಎಂದು ನಾಮಾಂಕಿತ ಮಾಡಿ ಸರ್ಕಾರವು ನೇಮಿಸಿದೆ.

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1)ರ ಅಡಿಯಲ್ಲಿ ಇಲಾಖಾ ಮುಖ್ಯಸ್ಥರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯ ವಿಧಾನದ ಬಗ್ಗೆ ಮಾಹಿತಿ ನೀಡಲು ಇಲಾಖಾ ಮುಖ್ಯಸ್ಥರು ಮತ್ತು ಎಲ್ಲಾ ತಾಲ್ಲೂಕಿನ ಶಿರಸ್ತೇದಾರ್‌ರವರು, ಉಪ ತಹಶೀಲ್ದಾರರು, **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ** ಎಂದು ಮತ್ತು ಸದರಿ ನಿಯಮ 19(1)ರ ಅಡಿಯಲ್ಲಿ ತಹಶೀಲ್ದಾರರನ್ನು **ಸಾರ್ವಜನಿಕ ಮಾಹಿತಿ ಅಧಿಕಾರಿ** ಎಂದು ನೇಮಕ ಮಾಡಿರುತ್ತಾರೆ.

ಈ ಸಂಬಂಧ ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ತಾಲ್ಲೂಕಿನ ತಾಲ್ಲೂಕು ಶಿರಸ್ತೇದಾರ್/ ಉಪವಿಭಾಗದ ಕಛೇರಿ ವ್ಯವಸ್ಥಾಪಕರು ಹಾಗೂ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ. ಶಿವಮೊಗ್ಗ ರವರುಗಳನ್ನು **ಸಹಾಯಕ**

ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ಹಾಗೂ ತಾಲ್ಲೂಕು ತಹಶೀಲ್ದಾರ್, ಅಪರ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಗಳ ಕಛೇರಿ, ಇವರುಗಳನ್ನು **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ** ಎಂದು ಈ ಮೂಲಕ ನಾಮಾಂಕಿತ ಮಾಡಲಾಗಿದೆ.

ಈ ಬಗ್ಗೆ ಈ ಕಛೇರಿಯಿಂದ ಮಾಹಿತಿ ಹಕ್ಕು ಕೈಪಿಡಿ 2005ನ್ನು ಪ್ರಕಟಿಸಿದ್ದು, ಅಧೀನ ಕಛೇರಿಗಳಾದ ಶಿವಮೊಗ್ಗ ಮತ್ತು ಸಾಗರ ಉಪವಿಭಾಗಗಳು, ತಾಲ್ಲೂಕು ಕಛೇರಿ ಮತ್ತು ನಾಡ ಕಛೇರಿಗಳಲ್ಲಿ ಇದೇ ರೀತಿಯಲ್ಲಿ ತಮ್ಮ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕೈಪಿಡಿ 2005ನ್ನು ಪ್ರಕಟಿಸಿ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವಂತೆ DCP/NPC ಇವರಿಗೆ ತಿಳಿಸಲು ಸೂಚಿಸಿದೆ.

ಜಿಲ್ಲಾಧಿಕಾರಿ
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ

ಅಧಿಸೂಚನೆ

ಸಂ. ಮಾಹ.ಸಿಆರ್ 01/2009-10, ದಿನಾಂಕ: -08-2009

ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಅಧಿನಿಯಮ ಸಂಖ್ಯೆ 22)ರ ಸೆಕ್ಷನ್ 5(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳನ್ನು **ಸಾರ್ವಜನಿಕ ಮಾಹಿತಿ ಅಧಿಕಾರಿಗಳು** ಎಂದು ನೇಮಕ ಮಾಡಲಾಗಿದೆ.

1. ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ
2. ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಉಪವಿಭಾಗ
3. ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ
4. ತಹಶೀಲ್ದಾರ್, ಶಿವಮೊಗ್ಗ/ಭದ್ರಾವತಿ/ತೀರ್ಥಹಳ್ಳಿ/ಸಾಗರ/ಸೊರಬ/ಹೊಸನಗರ ಮತ್ತು ಶಿಕಾರಿಪುರ
5. ಶಿವಮೊಗ್ಗ ಜಿಲ್ಲೆಯ ಎಲ್ಲಾ ನಾಡಕಛೇರಿಗಳ ಉಪತಹಶೀಲ್ದಾರರುಗಳು

ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಅಧಿನಿಯಮ ಸಂಖ್ಯೆ 22)ರ ಸೆಕ್ಷನ್ 5(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳನ್ನು **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು** ಎಂದು ನೇಮಕ ಮಾಡಲಾಗಿದೆ.

1. ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ
2. ವ್ಯವಸ್ಥಾಪಕರು ಉಪವಿಭಾಗಾಧಿಕಾರಿಗಳ ಕಛೇರಿ ಶಿವಮೊಗ್ಗ ಮತ್ತು ಸಾಗರ.
3. ತಾಲ್ಲೂಕು ಶಿರಸ್ತೇದಾರ್, ಶಿವಮೊಗ್ಗ/ಭದ್ರಾವತಿ/ತೀರ್ಥಹಳ್ಳಿ/ಸಾಗರ/ ಸೊರಬ/ ಹೊಸನಗರ ಮತ್ತು ಶಿಕಾರಿಪುರ
4. ಶಿವಮೊಗ್ಗ ಜಿಲ್ಲೆಯ ಎಲ್ಲಾ ನಾಡಕಛೇರಿಗಳ ವಿಷಯ ನಿರ್ವಾಹಕರು.

ಜಿಲ್ಲೆಯ ತಾಲ್ಲೂಕು ಕಛೇರಿ ಹಾಗೂ ನಾಡಕಛೇರಿ ಅಧಿಕಾರಿಗಳು ಮಾಹಿತಿಯನ್ನು 30 ದಿನಗಳೊಳಗಾಗಿ ನೀಡದಿದ್ದ ಪಕ್ಷದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಹಾಗೂ ಮೇಲ್ಮನವಿಯನ್ನು ಉಪವಿಭಾಗಾಧಿಕಾರಿಗಳು, ಶಿವಮೊಗ್ಗ/ಸಾಗರ ಉಪವಿಭಾಗ ರವರಿಗೆ ನೀಡಬಹುದು.

ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಮತ್ತು ಸಾಗರ ಉಪವಿಭಾಗ ಹಾಗೂ ಜಿಲ್ಲಾಧಿಕಾರಿಗಳ ಅಪರ ಜಿಲ್ಲಾಧಿಕಾರಿಗಳು ಮಾಹಿತಿಯನ್ನು ನೀಡದಿದ್ದ ಪಕ್ಷದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಮತ್ತು ಮೇಲ್ಮನವಿಯನ್ನು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರಿಗೆ ನೀಡಬಹುದು.

ಜಿಲ್ಲಾಧಿಕಾರಿ
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಬಿ.(1)(ಅ) **ಶಿವಮೊಗ್ಗ ಜಿಲ್ಲೆಯ ಸಾಮಾನ್ಯ ಮಾಹಿತಿಗಳು.**

ಕ್ರ.ಸಂ.	ವಿವರ	
I	**ಭೌಗೋಳಿಕ ವಿಸ್ತೀರ್ಣ**	9497 ಚ.ಕಿ.ಮೀ. 1642545 ಉದ್ದ ಹೆಕ್ಟೇರ್
II	**ಒಟ್ಟು ಜನಸಂಖ್ಯೆ**	
	(ಎ) ನಗರ ಪ್ರದೇಶದ ಜನಸಂಖ್ಯೆ	571010
	(ಬಿ) ಗ್ರಾಮೀಣ ಪ್ರದೇಶದ ಜನಸಂಖ್ಯೆ	1091535
	(ಎ) ಪುರುಷರು	830559
	(ಬಿ) ಮಹಿಳೆಯರು	811986

ಕ್ರ.ಸಂ.	ವಿವರ	
3.	ಲಿಂಗಾನುಪಾತ	978
4.	ಜನಸಾಂದ್ರತೆ	194
5.	ಪರಿಶಿಷ್ಟ ಜಾತಿ	199671
6.	ಪರಿಶಿಷ್ಟ ಪಂಗಡ	43592
7.	ಕೃಷಿ ಸಾಗುವಳಿದಾರರು	217740
8.	ಕೃಷಿ ಕಾರ್ಮಿಕರು	224124
III	**ಉಪ ವಿಭಾಗಗಳು:**	02
	1) ಶಿವಮೊಗ್ಗ ಉಪವಿಭಾಗ	01
	2) ಸಾಗರ ಉಪವಿಭಾಗ	01
IV	**ತಾಲ್ಲೂಕುಗಳು**	07
	1) ಶಿವಮೊಗ್ಗ	01
	2) ಭದ್ರಾವತಿ	01
	3) ತೀರ್ಥಹಳ್ಳಿ	01
	4) ಹೊಸನಗರ	01
	5) ಸಾಗರ	01
	6) ಸೊರಬ	01
	7) ಶಿಕಾರಿಪುರ	01
V	**ಶೈಕ್ಷಣಿಕ ಸಂಸ್ಥೆಗಳು**	
	1) ಪದವಿ ಕಾಲೇಜುಗಳು	21+ 22
	2) ಟೆಕ್ನಿಕಲ್ ಕಾಲೇಜುಗಳು	02
	3) ಮೆಡಿಕಲ್ ಕಾಲೇಜುಗಳು	01
	4) ಪದವಿಪೂರ್ವ ಕಾಲೇಜುಗಳು	101
	5) ಪ್ರೌಢಶಾಲೆಗಳು	379
	6) ಪ್ರಾಥಮಿಕ ಶಾಲೆಗಳು	2278
	7) ಪದವಿಪೂರ್ವ ವೈದ್ಯಕೀಯ ಕಾಲೇಜುಗಳು	01
	8)ಟೆಕ್ನಿಕಲ್ ಕಾಲೇಜು ITI	04
	9) ಪಶು ವೈದ್ಯಕೀಯ ಕಾಲೇಜುಗಳು	01
V	**ಮಳೆ ಪ್ರಮಾಣ**	ಶೇ. 81%
	1) ವಾರ್ಷಿಕ ಮಳೆ	1813'
	2) ವಾಸ್ತವಿಕ ಮಳೆ	2492.9
VI	ಹೋಬಳಿಗಳು	34
VII	ರಾಜಸ್ವ ನಿರೀಕ್ಷಕರುಗಳ ಸಂಖ್ಯೆ	35
VIII	ಗ್ರಾಮಗಳ ಸಂಖ್ಯೆ	1615
IX	ವೃತ್ತಗಳ ಸಂಖ್ಯೆ	326

ಕ್ರ.ಸಂ.	ವಿವರ	
X	ಆರೋಗ್ಯ ಇಲಾಖೆ	
	1) ಜಿಲ್ಲಾ ಆಸ್ಪತ್ರೆ	01
	2) ಪ್ರಾಥಮಿಕ ಆರೋಗ್ಯ ಕೇಂದ್ರಗಳು	59
	3) ಖಾಸಗಿ ಆಸ್ಪತ್ರೆಗಳು	58
	4) ಅಲೋಪತಿ ಆಸ್ಪತ್ರೆಗಳು	09
	5) ಭಾರತೀಯ ವೈದ್ಯ ಪದ್ಧತಿ	01
	6) ಸಮುದಾಯ ಆರೋಗ್ಯ ಕೇಂದ್ರಗಳು	07
	7) ಚಿಕಿತ್ಸಾಲಯಗಳು	34

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಮಾಹಿತಿ ಹಕ್ಕು ಕೈಪಿಡಿ-2005

ಸೆಕ್ಷನ್ 4(1)(ಬಿ) ಅನ್ವಯ-11 ರಲ್ಲಿ

1. ಇಲಾಖೆಯ ಬಗ್ಗೆ ವಿವರಗಳುಃ ಕಾರ್ಯಗಳು ಮತ್ತು ಕರ್ತವ್ಯಗಳು.

(ಎ) ಸಂಸ್ಥೆಯ ಹೆಸರು: ಕಂದಾಯ ಇಲಾಖೆ

(ಬಿ) ರಚನೆ:

ಜಿಲ್ಲಾಧಿಕಾರಿಗಳ ಕಛೇರಿ

1. ಜಿಲ್ಲಾಧಿಕಾರಿಗಳು
2. ಅಪರ ಜಿಲ್ಲಾಧಿಕಾರಿಗಳು
3. ಕಛೇರಿ ಸಹಾಯಕರು
4. ಆಡಿಟ್ ಅಧಿಕಾರಿಗಳು.

1. ಅಕೌಂಟ್ಸ್ ಶಾಖೆ

(1) ಅಕೌಂಟೆಂಟ್

(2) ಪ್ರ.ದ.ಸ. 04

(3) ದ್ವಿ.ದ.ಸ. 06

(4) ಶೀಘ್ರಲಿಪಿಗಾರರು 02

(5) ಬೆರಳಚ್ಚುಗಾರರು 06

(6) ಚಾಲಕರು 04

(7) ಡಿ ದರ್ಜೆ ನೌಕರರು

2. ಕಂದಾಯ ಶಾಖೆ

(1) ಹೆಡ್‌ಮುನ್ಷಿ

(2) ಪ್ರ.ದ.ಸ. 04

(3) ದ್ವಿ.ದ.ಸ. 03

3. ನ್ಯಾಯಾಂಗ ಶಾಖೆ:

(1) ಜುಡಿಷಿಯಲ್ ಹೆಡ್‌ಮುನ್ಷಿ

(2) ಪ್ರ.ದ.ಸ. 02

(3) ದ್ವಿ.ದ.ಸ. 03

4. ಚುನಾವಣಾ ಶಾಖೆ:

(1) ಚುನಾವಣಾ ತಹಶೀಲ್ದಾರ್ 01

(2) ಚುನಾವಣಾ ಶಿರಸ್ತೇದಾರರು 01

(2) ಪ್ರ.ದ.ಸ. 02

(3) ದ್ವಿ.ದ.ಸ. 01

(4) ಬೆರಳಚ್ಚುಗಾರರು 01

(5) ಡಿ ದರ್ಜೆ ನೌಕರರು 01

5. ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಶಾಖೆ

(1) ಉಪನಿರ್ದೇಶಕರು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು 01

(2) ಭೂ ದಾಖಲೆಗಳ ಸಹಾಯಕ ನಿರ್ದೇಶಕರು 01

6. ಮುಜರಾಯಿ ಶಾಖೆ

(1) ಮುಜರಾಯಿ ಸಹಾಯಕರುಃ 01

(2) ಮುಜರಾಯಿ ಅಧೀಕ್ಷಕರು 01

(3) ಅಧೀಕ್ಷಕರು (ಆ)	01	(3) ಪ್ರ.ದ.ಸ.	01
(4) ದ್ವಿತೀಯ ದರ್ಜೆ ಭೂಮಾಪಕರುಃ	02	(4) ದ್ವಿ.ದ.ಸ.	02
(5) ಬೆರಳಚ್ಚುಗಾರರು	01	(5) ಡಿ ದರ್ಜೆ ನೌಕರರು	01
(6) ಸರ್ವೆಯರ್	02		
(7) ವಾಹನ ಚಾಲಕರು	01		
(8) ಡಿ ದರ್ಜೆ ನೌಕರರು	03		

ಕಾರ್ಯಗಳು ಮತ್ತು ಕರ್ತವ್ಯಗಳು:

ಕಂದಾಯ ಇಲಾಖೆ, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉಪವಿಭಾಗಗಳ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಆಡಳಿತಾತ್ಮಕ, ಆರ್ಥಿಕ ಮತ್ತು ಸೇವೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತಿದೆ.

(1) ಉಪವಿಭಾಗಾಧಿಕಾರಿಗಳ ಕಛೇರಿ, ಶಿವಮೊಗ್ಗ:

ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ.

(2) ಉಪವಿಭಾಗಾಧಿಕಾರಿಗಳ ಕಛೇರಿ, ಸಾಗರ:

ಸಾಗರ, ಸೊರಬ, ಹೊಸನಗರ, ಶಿಕಾರಿಪುರ ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ.

ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ. ಶಿವಮೊಗ್ಗ.

ಸಂಘಟನಾ ಫಲಕ
ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ, ಕಂದಾಯ ಇಲಾಖೆ
ದಿನಾಂಕ: -08-2009 ರಲ್ಲಿದ್ದಂತೆ
ಜಿಲ್ಲಾಧಿಕಾರಿ: ಶ್ರೀ ಪಂಕಜ್ ಕುಮಾರ ಪಾಂಡೆ, ಭಾ.ಆ.ಸೇ.,

ಜಿಲ್ಲಾಧಿಕಾರಿಗಳ ಕಛೇರಿ

(1) ಅಪರ ಜಿಲ್ಲಾಧಿಕಾರಿಗಳು (2) ಕಛೇರಿ ಸಹಾಯಕರು (3) ಆಡಿಟ್ ಅಧಿಕಾರಿಗಳು

1. ಅಕೌಂಟ್ಸ್ ಶಾಖೆ:

1. ಹೆಚ್.ಎಸ್. ಕುಲಕರ್ಣಿ, ರೆವಿನ್ಯೂ ಹೆಡ್ ಅಕೌಂಟೆಂಟ್
2. ಎನ್. ಎಫ್. ಡಿಸೋಜಾ, ಪ್ರ.ದ.ಸ.
3. ಕೆ.ಎನ್. ಮಂಜಪ್ಪ, ಪ್ರ.ದ.ಸ.
4. ಹೆಚ್.ಆರ್. ಪುಷ್ಪಾ, ದ್ವಿ.ದ.ಸ.
5. ಎಸ್.ಬಿ. ದಾಕ್ಷಾಯಿಣಿ, ದ್ವಿ.ದ.ಸ.
6. ಕೆ. ಗಾಯಿತ್ರಿ. ದ್ವಿ.ದ.ಸ.
7. ಹೀನಾ ಕೌಸರ್, ದ್ವಿ.ದ.ಸ.
8. ರಾಜಪ್ಪ, ದ್ವಿ.ದ.ಸ.
9. ಎಂ. ನಾಗರಾಜ, ದ್ವಿ.ದ.ಸ.
10. ಶೋಭಾಲಕ್ಷ್ಮಿ, ಶೀಘ್ರಲಿಪಿಗಾರರು
11. ಟಿ.ವಿ. ಕಾಂತಮ್ಮ, ಶೀಘ್ರಲಿಪಿಗಾರರು
12. ಕೆ. ರೇಖಾ, ಬೆರಳಚ್ಚುಗಾರರು
13. ಕೆ.ಆರ್. ವಾಣಿ. ಬೆರಳಚ್ಚುಗಾರರು
14. ಇಂದಿರಾಬಾಯಿ. ಬೆರಳಚ್ಚುಗಾರರು
15. ಸಿ. ದಾಕ್ಷಾಯಿಣಿ, ಬೆರಳಚ್ಚುಗಾರರು
16. ಶಿವರಾಮಯ್ಯ, ವಾಹನ ಚಾಲಕರು
17. ಎನ್. ಶ್ರೀಧರ್, ವಾಹನ ಚಾಲಕರು

18. ಸುಂದರ ಸಿಂಗ್. ವಾಹನ ಚಾಲಕರು
19. ಸದಾನಂದ, ವಾಹನ ಚಾಲಕರು
20. ಗಿಡ್ಡಣ್ಣ. ದಫೇದಾರ್
21. ಫಿಲಿಪ್ ಲೋಬೋ, ದಫೇದಾರ್
22. ಡಿ.ಪಿ. ಮಲ್ಲಯ್ಯ, ದಫೇದಾರ್
23. ಅನಿಲ್ ಆರ್.ಡಿ. ಡಿ ದರ್ಜೆ ನೌಕರರು
24. ಚಂದ್ರಶೇಖರ, ಡಿ ದರ್ಜೆ ನೌಕರರು
25. ಎಂ. ಪ್ರಭು, ಡಿ ದರ್ಜೆ ನೌಕರರು
26. ಜಯದೇವಪ್ಪ, ಡಿ ದರ್ಜೆ ನೌಕರರು
27. ಎಸ್.ಆರ್. ಶಂಕರ, ಡಿ ದರ್ಜೆ ನೌಕರರು
28. ಮಲ್ಲೇಶಯ್ಯ, ಡಿ ದರ್ಜೆ ನೌಕರರು
29 ಮಂಜು, ಡಿ ದರ್ಜೆ ನೌಕರರು.

4 (B) 11 :ಕಾರ್ಯ ವಿಧಾನ:

1. ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳು:

ಜಿಲ್ಲಾಧಿಕಾರಿಗಳು ಜಿಲ್ಲೆಯ ಇಲಾಖೆಯ ಅಧಿಕೃತ ಮುಖ್ಯಸ್ಥರಾಗಿದ್ದು, ಸರ್ಕಾರದ ಮುಖ್ಯಸ್ಥರ ನಿರ್ದೇಶನಗಳನ್ನು ನಿಯಮದ ಚೌಕಟ್ಟಿನಲ್ಲಿ ಜಾರಿಗೊಳಿಸುವ ಮತ್ತು ಕ್ರಮ ಕೈಗೊಳ್ಳುವ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಇಲಾಖೆಯ ಹಾಗೂ ಕಛೇರಿಯಲ್ಲಿ ಹಾಗೂ ಅಧೀನ ಕಛೇರಿಗಳ ಸಿಬ್ಬಂದಿ ಕೆಲಸ ಕಾರ್ಯಗಳ ಮೇಲುಸ್ತುವಾರಿಯನ್ನು ಪರಿಶೀಲಿಸುತ್ತಾರೆ.

1. ಕಛೇರಿ ಹಾಗೂ ಜಿಲ್ಲೆಯ ಅಧೀನ ಕಛೇರಿಗಳ, ಸಿಬ್ಬಂದಿಗಳ ಮೇಲುಸ್ತುವಾರಿ.
2. ಜಿಲ್ಲೆಯ ಇತರೆ ಇಲಾಖೆಯ ಅಧ್ಯಕ್ಷರು ಆಗಿರುತ್ತಾರೆ.
3. ಜಿಲ್ಲೆಯ ಕಾರ್ಯಕಾರಿ ದಂಡಾಧಿಕಾರಿಗಳ ಕಾರ್ಯ ನಿರ್ವಹಣೆ.
4. ಸಾರ್ವಜನಿಕ ದೂರು ನಿರ್ವಹಣೆ.
5. ನ್ಯಾಯಾಲಯ ಪ್ರಕರಣಗಳ ಮೇಲ್ಮನವಿ ಪ್ರಕರಣಗಳ ವಿಚಾರಣೆ.
6. ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ
7. ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು.
8. ಎಲ್ಲಾ ರೀತಿಯ ಗಣತಿ ಕಾರ್ಯಗಳನ್ನು ನಡೆಸುವುದು.
   (ಜನಗಣತಿ, ಜಾನುವಾರು ಗಣತಿ, ಕೃಷಿ ಗಣತಿ, ಆರ್ಥಿಕ ಗಣತಿ, ನೀರಾವರಿ ಗಣತಿ ಇತ್ಯಾದಿ)
9. ಪ್ರಕೃತಿ ವಿಕೋಪ, ನೈಸರ್ಗಿಕ ವಿಕೋಪ ಮತ್ತು ಮಾನವ ನಿರ್ಮಿತ ವಿಕೋಪಗಳಿಂದ ಬಾದಿತರಾದವರಿಗೆ ಪರಿಹಾರ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯ ನಿರ್ವಹಣೆ.
10. ಸರ್ಕಾರದಿಂದ ಮಂಜೂರಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು.
11. ಕಾನೂನು ವ್ಯವಸ್ಥೆ ಬಗ್ಗೆ ಕ್ರಮ ಕೈಗೊಳ್ಳುವುದು.
12. ಆಯುಧ ಕಾಯಿದೆಯಡಿ ಪ್ರಕರಣಗಳ ವಿಲೇವಾರಿ.
13. ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ
14. ಮಾನ್ಯ ಸಚಿವರ ಆಗಮನಃನಿರ್ಗಮನ ಕಡೆ ನಿಗಾ ವಹಿಸುವುದು.
15. ಸರ್ಕಾರದಿಂದ ಕಾಲ ಕಾಲಕ್ಕೆ ಜಾರಿಗೆ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಗಳ ನಿರ್ವಹಣೆ.

2. ಅಪರ ಜಿಲ್ಲಾಧಿಕಾರಿಗಳ ಕಾರ್ಯ ವಿಧಾನ:

ಅಪರ ಜಿಲ್ಲಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಛೇರಿಯ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಹಾಗೂ ಜಿಲ್ಲಾಧಿಕಾರಿಗಳ ನಿರ್ದೇಶನ/ಕಾನೂನು ರೀತ್ಯಾ ಜಿಲ್ಲೆಯ ಎಲ್ಲಾ ಕಛೇರಿ/ಅಧೀನ ಕಛೇರಿ ಸಿಬ್ಬಂದಿಗಳ ಸರ್ಕಾರದ ಕಾರ್ಯಗಳನ್ನು ಜಾರಿಗೊಳಿಸುವ ಪೂರ್ಣ ಹೊಣೆಗಾರರಾಗಿರುತ್ತಾರೆ.

3. ಆಡಳಿತ ಶಾಖೆ (RHA) ಅಕೌಂಟ್ಸ್ ಶಾಖೆ:

1. ಸಿಬ್ಬಂದಿಗಳ ಮೇಲುಸ್ತುವಾರಿ
2. ಶಿಸ್ತು ಪ್ರಕರಣಗಳು
3. ಮಾಹಿತಿ ಹಕ್ಕು ಅಧಿನಿಯಮ, 2005ರ ಅರ್ಜಿಗಳ ವಿಲೇವಾರಿ
4. ಬರ ಪರಿಹಾರ, ಅತಿವೃಷ್ಟಿ, ಅನಾವೃಷ್ಟಿ ಪರಿಹಾರ
5. ಶಾಸಕರ ಯೋಜನೆಗಳು
6. ಸಿಬ್ಬಂದಿ ನೇಮಕಾತಿ, ವರ್ಗಾವಣೆ.
7. ಸಿಬ್ಬಂದಿ ವೇತನ
8. ಸಾರ್ವಜನಿಕ ಕುಂದುಕೊರತೆ, ಮುಖ್ಯಮಂತ್ರಿ ಪರಿಹಾರ
9. ವಾಹನಗಳ ಸಂರಕ್ಷಣೆ, ಮತ್ತು ಸುಧಾರಣೆ
10. ಆಯವ್ಯಯ, ಅಂದಾಜು ಪಟ್ಟಿ ಅನುಮೋದನೆ.
11. ಆಡಿಟ್
12. ಕಛೇರಿ ತಪಾಸಣೆ
13. ಇತರೇ ಸರ್ಕಾರದಿಂದ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ
14. ಕಂದಾಯ ವಸೂಲಿ, ನೀರಾವರಿ ಶುಲ್ಕ ವಸೂಲಾತಿ. ಸರ್ಕಾರಿ ಬಾಕಿ ವಸೂಲಿ, ಇತರೇ ಕರ್ತವ್ಯಗಳು.

4. ಕಂದಾಯ ಶಾಖೆ (RHM) REVENUE HEAD MUNSHI ಶಾಖೆ:

1. ಜಿಲ್ಲೆಯಲ್ಲಿನ ಭೂ ದಾಖಲೆಗಳ ನಿರ್ವಹಣೆ.
2. ಜಿಲ್ಲೆಯಲ್ಲಿನ ಎಲ್ಲಾ ಜಮೀನುಗಳ ಭೂಮಾಪನ
3. ಗೋಮಾಳ, ಕೆರೆ, ಅಂಗಳ, ಉಪವನಗಳು, ಶಾಲೆ ಇತ್ಯಾದಿ ಸಮುದಾಯಿಕ ಜಮೀನುಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನುಗಳ ನಿರ್ವಹಣೆ, ಮಂಜೂರಾತಿ, ಪರಿಸರ ಸಂರಕ್ಷಣೆ.
4. ಅಕ್ರಮ-ಸಕ್ರಮ, ಮಂಜೂರಾತಿ.
5. ಭೂ ಸುಧಾರಣೆ ಮತ್ತು ಗಣಿಗಾರಿಕೆ ನಿಬಂಧನೆಗಳು.
6. ಭೂ ಸ್ವಾಧೀನ, ಅಲಿನೇಷನ್, ಮಾಫಿಪಾಸು, ಭೂ ಮಂಜೂರಾತಿ, ಖಾತೆ ಬದಲಾವಣೆ.
7. ಮೇಲ್ಮನವಿ ಪ್ರಕರಣಗಳ ಪರಿಶೀಲನೆ ಮತ್ತು ವಿಚಾರಣೆ.
8. ಭೂ ಪರಿವರ್ತನೆ.
9. ಕರ್ನಾಟಕ ಭೂ ಕಂದಾಯ ಕಾಯ್ದೆಯಡಿಯಲ್ಲಿ ಬರುವ ಎಲ್ಲಾ ಕಾರ್ಯಗಳ ನಿರ್ವಹಣೆ.
10. OAP, PHP, DWP, ಸಂಧ್ಯಾ ಸುರಕ್ಷಾ ಯೋಜನೆಗಳ ಅನುಷ್ಠಾನ.

5. ಜಿಲ್ಲಾಧಿಕಾರಿಗಳು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಪರಿಶೀಲನೆ, ಮತ್ತು ನಿಯಮಗಳು.

1. KLR ಕಾಯ್ದೆ ಅಧಿನಿಯಮ 1961 ಮತ್ತು ನಿಯಮಾವಳಿ 1961
2. ಇನಾಂ ರದ್ದತಿ ಅಧಿನಿಯಮ 1979
3. ಕರ್ನಾಟಕ ಗ್ರಾಮ ನೌಕರಿಗಳ ರದ್ದತಿ ಅಧಿನಿಯಮ 1961
4. ಕರ್ನಾಟಕ ಪುರಸಭೆಗಳ ಅಧಿನಿಯಮ 1964
5. ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ 1974 ಮತ್ತು ನಿಯಮಾವಳಿ 1975
6. ಕರ್ನಾಟಕ ಗೋವಾ ವಿಮೋಚನಾ ಅಧಿನಿಯಮ.
7. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಅಧಿನಿಯಮ 1966
8. ಕರ್ನಾಟಕ ನೀರಾವರಿ ಅಧಿನಿಯಮ 1965
9. ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಾವಳಿ 1965
10. ಕರ್ನಾಟಕ ಅರಣ್ಯ ನಿಯಮಾವಳಿ 1969
11. ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ 1966
12. ಕರ್ನಾಟಕ ಸಾರ್ವಜನಿಕ ಆಚರಣೆಗಳ ಅಧಿನಿಯಮ 1974 ಮತ್ತು ಅದರಡಿಯ ನಿರ್ವಹಣೆ.

6. ನ್ಯಾಯಾಂಗ ಶಾಖೆ:

ನ್ಯಾಯಾಂಗ ಶಾಖೆಯಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆಯ ಬಗ್ಗೆ , ಬಂದೂಕು ನವೀಕರಣ, ಚಿತ್ರಮಂದಿರಗಳ ನವೀಕರಣ, ಪರವಾನಗಿ, ಪೆಟ್ರೋಲ್ ಬಂಕ್ ಪರವಾನಿಗೆ. PTCL ಮೇಲ್ಮನವಿ, ಪ್ರಕರಣ, SC/ST ಜಮೀನುಗಳ ಪರಭಾರೆ, ಅನುಮತಿ, OBC, ಸಿಂಧುತ್ವ ಪರಿಶೀಲನೆ.

ಜಿಲ್ಲಾಧಿಕಾರಿಗಳು, ಜಿಲ್ಲಾ ದಂಡಾಧಿಕಾರಿಗಳು ಈ ಕೆಳಗಿನ ಕಾಯಿದೆಗಳಡಿಯಲ್ಲಿ ಅಧಿಕಾರ ಮತ್ತು ಕರ್ತವ್ಯಗಳನ್ನು ಹೊಂದಿರುತ್ತಾರೆ.

1. ದಂಡ ಪ್ರಕ್ರಿಯೆ ಸಂಹಿತೆ 1974
2. ಭಾರತ ಸಾಕ್ಷ್ಯ ಅಧಿನಿಯಮ 1963
3. ಕರ್ನಾಟಕ ಪೋಲೀಸ್ ಅಧಿನಿಯಮ 1976
4. ಜೀತದಾಳು ಪದ್ಧತಿ(ನಿರ್ಮೂಲನ) ಅಧಿನಿಯಮ 1976
5. ಪ್ರಮಾಣ ವಚನ ಅಧಿನಿಯಮ 1999
6. ಭಾರತೀಯ ಮುದ್ರಾಂಕ ಅಧಿನಿಯಮ 1899
7. ಪ್ರಾಣಿಗಳ ಹಿಂಸೆ ಅಧಿನಿಯಮ 1960
8. ಕರ್ನಾಟಕ ಭಿಕ್ಷಾಟನಾ ಅಧಿನಿಯಮ 1975
9. ಸಾರ್ವಜನಿಕ ಆರೋಗ್ಯ ಅಧಿನಿಯಮ 1944
10. ಕರ್ನಾಟಕ ಮಾರಾಟಕರ ಅಧಿನಿಯಮ 1957
11. ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಷೇಧ) ಅಧಿನಿಯಮ 1989
12. ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ಅಧಿನಿಯಮ.

7. ಪ್ರಕೃತಿ ವಿಕೋಪ:

ಪ್ರಕೃತಿ ವಿಕೋಪಗಳಿಂದ ಅತಿವೃಷ್ಟಿ ಸೇರಿದಂತೆ ಎಲ್ಲಾ ವಿಕೋಪಗಳ ಬಗ್ಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತಿದೆ. ಅಲ್ಲದೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಾರ್ವಜನಿಕರಿಗೆ ಮನವರಿಕೆ ಅಗತ್ಯವಿದ್ದಲ್ಲಿ, ಸಾಕಷ್ಟು ಮಾಹಿತಿ ಪಡೆಯಲು ಹಾಗೂ ತುರ್ತು ಪರಿಹಾರ ನೀಡಲು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದೆ .

ಜಿಲ್ಲಾಧಿಕಾರಿಗಳ ಕಛೇರಿಯ ದೂರವಾಣಿ ಸಂಖ್ಯೆ 958182-221010
958182-271102

ಚುನಾವಣಾ ಶಾಖೆ:

ಜಿಲ್ಲೆಯಲ್ಲಿ, ಲೋಕಸಭೆ/ರಾಜ್ಯಸಭೆ/ವಿಧಾನಸಭೆ/ವಿಧಾನ ಪರಿಷತ್/ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಬಗ್ಗೆ ಕ್ರಮವನ್ನು ಕೈಗೊಳ್ಳುವುದು.

ಮುಜರಾಯಿ ಶಾಖೆ:

ಜಿಲ್ಲೆಯಲ್ಲಿನ, ಮುಜರಾಯಿ ದೇವಸ್ಥಾನಗಳ ಉಸ್ತುವಾರಿ, ಆಯವ್ಯಯ, ದೇವಸ್ಥಾನದ ಅಭಿವೃದ್ಧಿ, ಅನುದಾನ ಬಿಡುಗಡೆ, ತಸ್ತೀಕ್ ಬಿಡುಗಡೆ, ಆರಾಧನಾ ಸಮಿತಿ ರಚನೆ, ಸರ್ಕಾರದಿಂದ ಅನುದಾನ ಬಿಡುಗಡೆಯ ಬಗ್ಗೆ ಪ್ರಸ್ತಾವನೆ ಕ್ರಮ ಕೈಗೊಳ್ಳುವುದು.

ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಶಾಖೆ:

ಜಮೀನುಗಳಿಗೆ ಸಂಬಂಧಿಸಿದ ಅಳತೆ ಹಾಗೂ ಪೋಡಿ ದುರಸ್ತಿ, ರೀಸರ್ವೆ ಜಮೀನುಗಳ ವಿಸ್ತೀರ್ಣದ ಬಗ್ಗೆ ಇರುವ ಸಮಸ್ಯೆಗಳ ಬಗ್ಗೆ ಪರಿಶೀಲನೆ.

ಆಡಿಟ್ ಅಧಿಕಾರಿ:

ಕಛೇರಿಯ ಎಲ್ಲಾ ಶಾಖೆಯಲ್ಲಿ ಮಹಾಲೇಖಪಾಲರು ಹಾಗೂ ಮೇಲಾಧಿಕಾರಿಗಳು ನಡೆಸಿದ ತಪಾಸಣೆಯ ಬಗ್ಗೆ ಪಾಲನಾ ವರದಿ ಸಲ್ಲಿಕೆಯ ಬಗ್ಗೆ, ವೇತನ, ವಿವಿಧ ವೇತನಗಳ ನಿಗದಿಯ ಬಗ್ಗೆ, ನಗದು ವಹಿ, ಅಂದಾಜು ಪಟ್ಟಿಗಳ ಆಡಳಿತಾತ್ಮಕ ಮಂಜೂರಾತಿ, ಇತರೆ ವಿಷಯಗಳ ಬಗ್ಗೆ ಮೇಲ್ವಿಚಾರಣೆ.

ಕಛೇರಿ ಸಹಾಯಕರು:

ಕಛೇರಿಯ ಎಲ್ಲಾ ಕಡತಗಳ ಮೇಲ್ವಿಚಾರಣೆ ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಕ್ರಮ ವಹಿಸುವುದು.

ಆಪ್ತ ಸಹಾಯಕರು:

ಕಛೇರಿಗೆ ಬರುವ ಎಲ್ಲಾ ದೂರವಾಣಿ ಹಾಗೂ ಫ್ಯಾಕ್ಸ್ ಸಂದೇಶಗಳ ಸ್ವೀಕೃತಿ ಮತ್ತು ಮಾಹಿತಿಯನ್ನು ಸಂಬಂಧಪಟ್ಟವರಿಗೆ ತಲುಪಿಸುವುದು ಹಾಗೂ ದಿನಚರಿಯ ನಿರ್ವಹಣೆ, ಇತ್ಯಾದಿ.

ಗಣಕೀಕರಣ ಶಾಖೆ ಮತ್ತು ಬೆರಳಚ್ಚುಗಾರರು:

ಗಣಕ ಯಂತ್ರದ ಮೂಲಕ ಪ್ರತಿಯನ್ನು ಬೆರಳಚ್ಚುಪಡಿಸಿ ಶುದ್ಧಪ್ರತಿಯನ್ನು ತೆಗೆಯುವ ಕೆಲಸ.

4B(1)5 ಅಭಿಲೇಖಾಲಯ:

ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳು ಜಿಲ್ಲಾಧಿಕಾರಿರವರು ಮೇಲೆ ರೂಪಿಸಲಾದ ಕಾಯಿದೆ ನಿಯಮಗಳಡಿ ನಿರ್ವಹಿಸುವ ಎಲ್ಲಾ ಕಡತಗಳಲ್ಲಿ ಅಂತಿಮವಾಗಿ ಮುಕ್ತಾಯಗೊಂಡ ನಂತರ ಬಾಕಿ ಕಡತಗಳ ಪ್ರಾಮುಖ್ಯತೆಯನ್ನು ಅನುಸರಿಸಿ. ಪ್ರವರ್ಗ A,B,C,D ಮತ್ತು E ಎಂದು ವರ್ಗೀಕರಿಸಿ ನಿರ್ವಹಿಸಲಾಗುತ್ತಿವೆ.

ಪ್ರತಿ ವರ್ಗೀಕರಣ ಅವಧಿ ಈ ಕೆಳಕಂಡಂತಿರುತ್ತದೆ.

A Dis	ಶಾಶ್ವತ
B Dis	30 ವರ್ಷಗಳು
C Dis	10 ವರ್ಷಗಳು
D Dis	5 ವರ್ಷಗಳು
E Dis	1 ವರ್ಷ.

ವಾಹನ ಚಾಲಕರು:

ಇಲಾಖೆಯ ವಾಹನ ಚಾಲನೆ ಮತ್ತು ನಿರ್ವಹಣೆ.

ಅಟೆಂಡರ್:

ಕಛೇರಿಯ ಅಭಿಲೇಖಾಲಯದಲ್ಲಿ ಕಡತಗಳ ಸ್ವೀಕೃತಿ, ಕಛೇರಿ ದಾಸ್ತಾನು ಪಾಲನೆ, ನಕಲುಗಳ ನೀಡುವಿಕೆ ಇತ್ಯಾದಿ.

ಡಿ ದರ್ಜೆ ನೌಕರರು:

ಕಛೇರಿಯ ಎಲ್ಲಾ ಕೊಠಡಿಗಳಲ್ಲಿ ಕಡತ, ಟಪಾಲು ಇತ್ಯಾದಿಗಳನ್ನು ಶಾಖೆಯೊಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ, ಮೇಲಾಧಿಕಾರಿಗಳಿಗೆ ತಲುಪಿಸುವುದು.

4B (6) ಕಛೇರಿಯ ಕೆಲಸದ ಬಗ್ಗೆ ವಿಷಯ ನಿರ್ವಾಹಕರು ನಿರ್ವಹಿಸಲಾದ ವಹಿಗಳ ವಿವರ.

A)	ವಿಷಯ ವಹಿ (ದಿನವಹಿ)
B)	ದಿನಚರಿ ವಹಿ
C)	ವಾರದ ಪ್ರಗತಿ ತಃಖ್ತೆ
D)	ಮಾಸಿಕ ಪ್ರಗತಿ ತಃಖ್ತೆ

ವಿಷಯವಾರು ನಿರ್ವಹಿಸುವ ಅವರುಗಳು ನಿರ್ವಹಿಸುವ ಶಾಖೆಯ ವಿಷಯಗಳ ಮೇಲೆ ಅವಲಂಬಿತವಾಗಿ ವಿವಿಧ ರೀತಿಯ ವಹಿಗಳನ್ನು ನಿರ್ವಹಿಸುತ್ತಿರುತ್ತಾರೆ ಮತ್ತು ಸುತ್ತೋಲೆಯಂತೆ 05 ಕಟ್ಟುಗಳಲ್ಲಿ ಕಡತವನ್ನು ನಿರ್ವಹಿಸುತ್ತಿದ್ದಾರೆ .

1)	ಸುತ್ತೋಲೆ No. RD 1 INNC
2)	ನಿರ್ವಹಿಸತಕ್ಕ ಕಡತ
3)	ಕಾಯ್ದಿರಿಸಿದ ಕಡತಗಳು
4)	ನಿಯತ ಕಾಲಿಕೆಗಳ ಕಡತಗಳು
5)	ವಿಲೇವಾರಿ ಕಡತ.

4B (1) 7: ಕಾರ್ಯ ನೀತಿಯ ರಚನೆ, ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರತಿನಿಧಿ ಬರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು.

1. ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.
2. ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಸಭೆಗಳನ್ನು ಏರ್ಪಡಿಸುವುದು.
3. ಸಾರ್ವಜನಿಕ ಕುಂದು ಕೊರತೆ ಆಲಿಸುವುದು.
4. ಪಾರದರ್ಶಕ ಕಾಯ್ದೆ ಅನುಷ್ಠಾನ
5. ಜನರಿಂದ ಸ್ವೀಕರಿಸುವಂತಹ ಅಹವಾಲುಗಳು ಸಾರ್ವಜನಿಕರ ಸಂಘ ಸಂಸ್ಥೆಗಳ ಕುಂದುಕೊರತೆಗಳಲ್ಲದೇ ಇನ್ನಿತರ ಸಂಘಟನೆಗಳಿಂದ ನಡೆಸುವ ಪ್ರತಿಭಟನೆಗಳ ಅಹವಾಲುಗಳನ್ನು ಸ್ವೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು.

4B (1) 8:

ಮಂಡಳಿ, ಮುಂತಾದ ಸಮಿತಿಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳಿಂದ ರಚಿಸಲಾದ ಸಮಿತಿಯ ಸಲಹೆ ಹಾಗೂ ಸರ್ಕಾರದ ನಡಾವಳಿಗಳುಃ ಸರ್ಕಾರದ ಆದೇಶದಂತೆ,

1. ಅಕ್ರಮ ಸಕ್ರಮೀಕರಣ ಸಮಿತಿ
2. ಭೂ ನ್ಯಾಯ ಮಂಡಳಿ ಸಮಿತಿ
3. ಆರಾಧನಾ ಸಮಿತಿಗಳು ರಚನೆಯಾಗಿ ಕೆಲಸ ನಿರ್ವಹಿಸಲಾಗುತ್ತಿದೆ.

4B (1) 9.10:

ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಸೇವಾ ಮಾಹಿತಿ ಪುಸ್ತಕ, ವೇತನ ವಿವರ ಜಿಲ್ಲಾಧಿಕಾರಿಯವರು ಮುಖ್ಯಸ್ಥರಾಗಿದ್ದು, ಮುಖ್ಯಸ್ಥರಿಗೆ ಸರ್ಕಾರ ಇಲ್ಲವೇ ಇಲಾಖೆ ನೀಡಿದ ಹಕ್ಕು ಬಾಧ್ಯತೆಗನುಗುಣವಾಗಿ ಕರ್ತವ್ಯ ನಿರ್ವಹಣೆ.

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಪದನಾಮ	ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ
1.	ಜಿಲ್ಲಾಧಿಕಾರಿ	15600–39100	01
2.	ಅಪರ ಜಿಲ್ಲಾಧಿಕಾರಿ	15200–25650	01
3.	ತಾಂತ್ರಿಕ ಸಹಾಯಕರು	14050–25050	01
4.	ತಹಶೀಲ್ದಾರ್	11400–21600	01
5.	ಆಡಿಟ್ ಅಧಿಕಾರಿ	11400–21600	01
6.	ಕಛೇರಿ ಸಹಾಯಕರು	10800–20025	01
7.	ಶಾಖಾ ಮುಖ್ಯಸ್ಥರು (ಶಿರಸ್ತೇದಾರ್)	10000–18150	05
8.	ಪ್ರಥಮ ದರ್ಜೆ ಸಹಾಯಕರು	7275–13050	13
9.	ದ್ವಿತೀಯ ದರ್ಜೆ ಸಹಾಯಕರು	5800–10500	15
10.	ದ್ವಿತೀಯ ದರ್ಜೆ ಭೂಮಾಪಕರು	5800–10500	02
11.	ಬೆರಳಚ್ಚುಗಾರರು	5800–10500	08
12.	ಶೀಘ್ರಲಿಪಿಗಾರರು	8000–14800	02
13.	ಆಪ್ತ ಸಹಾಯಕರು	8000–14800	0
14.	ದಫೇದಾರ್	5200–8200	04
15.	ಆರ್.ಆರ್. ಅಟೆಂಡರ್	4800–7275	02
16.	ವಾಹನ ಚಾಲಕರು	5800–10500	02
17.	ದಫ್ತರ್ ಬಂದ್	4800–7275	03
18.	ಬಾಂದ್ ಜವಾನ	4800–7275	02
19.	ಜವಾನರು	4800–7275	10

4B (1) 9.10:

2009–10ನೇ ಸಾಲಿನ ಆಯವ್ಯಯ ಬಗ್ಗೆ ಟಿಪ್ಪಣಿ.

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ವಿವರ	ಅಗತ್ಯವಿರುವ ಅಂದಾಜು ವೆಚ್ಚದ ವಿಭಾಗದ ವಿವರ
1.	2053–00–093–1–01	ವೇತನ	ಜಿಲ್ಲಾಡಳಿತ (ಯೋಜನೇತರ)
2.	2053–00–094–5–01	ವೇತನ	ಭೂ ಸ್ವಾಧೀನ (LAQ)
3.	2053–00–094–1–01	ವೇತನ	ಉಪವಿಭಾಗಾಧಿಕಾರಿಗಳು
4.	2506–00–101–1–01	ವೇತನ	ತಾಲ್ಲೂಕು ಆಡಳಿತ
5.	2011–02–101–0–09	ವೇತನ	ತಾಲ್ಲೂಕು ಆಡಳಿತ
6.	2515–00–101–0–17	ವೇತನ	ತಾಲ್ಲೂಕು ಆಡಳಿತ
7.	2071–01–200–0–06	ವೇತನ	ತಾಲ್ಲೂಕು ಆಡಳಿತ
8.	2071–01–200–0–06	ವೇತನ	ತಾಲ್ಲೂಕು ಆಡಳಿತ
9.	2070–00–115–1–01	ವೇತನ	ಡಿ.ವಿ. ಕಾರ್
10.	2053–00–094–1–01	ವೇತನ	ಉಪವಿಭಾಗಾಧಿಕಾರಿಗಳ ಕಛೇರಿ ಸಿಬ್ಬಂದಿ
11.	2053–00–094–7–01	ವೇತನ	ತಹಶೀಲ್ದಾರರು
12.	2053–00–094–7–01	ವೇತನ	ತಾಲ್ಲೂಕಿನ ಆಹಾರ ಸಿಬ್ಬಂದಿ

ಕಂದಾಯ ಇಲಾಖೆ

ಶಿವಮೊಗ್ಗ ಜಿಲ್ಲಾಧಿಕಾರಿಗಳವರ ಕಛೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹೆಸರು ಹುದ್ದೆ ಮತ್ತು ದೂರವಾಣಿ ಸಂಖ್ಯೆ

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಹೆಸರು ಶ್ರೀಮತಿ/ಶ್ರೀ	ಪದನಾಮ	ವೇತನ ಶ್ರೇಣಿ	ದೂರವಾಣಿ ಸಂಖ್ಯೆ
1.	ಪಂಕಜ್ ಕುಮಾರ ಪಾಂಡೆ	ಜಿಲ್ಲಾಧಿಕಾರಿ	15600-39100	221101, 9900095440
2.	ಎ.ಎಸ್.ನಿರ್ವಾಣಪ್ಪ	ಅಪರ ಜಿಲ್ಲಾಧಿಕಾರಿ	15200-25650	221010
3.	ಹೆಚ್.ಆರ್.ಮರುಳಸಿದ್ದಪ್ಪ	ಆಡಿಟ್ ಅಧಿಕಾರಿ	11400-21600	271102
4.	ಬಿ.ಹೆಚ್.ಚಿಕ್ಕಪ್ಪ	ಕಛೇರಿ ಸಹಾಯಕರು	11400-21600	277082
5.	ಹೆಚ್.ಎಸ್. ಕುಲಕರ್ಣಿ	ಆರ್.ಹೆಚ್.ಎ.	10000-18150	
6.	ಹೆಚ್.ಬಿ.ಚೆನ್ನಪ್ಪ	ಆರ್.ಹೆಚ್.ಎಂ.	11400-21600	
7.	ಸಿ.ಎಂ. ಕುಲಕರ್ಣಿ	ಜೆ.ಹೆಚ್.ಎಂ.	10000-18150	
8.	ಎನ್.ಎಫ್.ಡಿಸೋಜಾ	ಪ್ರ.ದ.ಸ.	7275-13350	
9.	ಕೆ.ಎನ್. ಮಂಜಪ್ಪ,	ಪ್ರ.ದ.ಸ.	7275-13350	
10.	ಬಿ.ಎಸ್.ಶಂಕರಪ್ರಸಾದ್	ಪ್ರ.ದ.ಸ.	7275-13350	
11.	ಮಾಲತೇಶ ಕುರುಬರ್	ಪ್ರ.ದ.ಸ.	7275-13350	
12.	ಕೆ. ಪದ್ಮಾಕ್ಷಿ	ಪ್ರ.ದ.ಸ.	7275-13350	
13.	ಬಿ.ಎಸ್.ಮೈಲಾರಯ್ಯ	ಪ್ರ.ದ.ಸ.	7275-13350	
14.	ಟಿ.ಕೆ. ದೀಪಕ್	ದ್ವಿ.ದ.ಸ.	5800-10500	
15.	ಕೆ. ಗಾಯಿತ್ರಿ	ದ್ವಿ.ದ.ಸ.	6250-12000	
16.	ವಿಕ್ಟರ್ ಶಾಂತಕುಮಾರ್	ದ್ವಿ.ದ.ಸ.	6250-12000	
17.	ಹೀನಾ ಕೌಸರ್	ದ್ವಿ.ದ.ಸ.	5800-10500	
18.	ಎಸ್.ಬಿ.ದಾಕ್ಷಾಯಿಣಿ	ದ್ವಿ.ದ.ಸ.	5800-10500	
19.	ಹೆಚ್.ಆರ್. ಪುಷ್ಪಾ	ದ್ವಿ.ದ.ಸ.	6250-12000	
20.	ಎಂ. ನಾಗರಾಜ್	ಪ್ರ.ದ.ಸ.	7275-13350	
21.	ರಾಜಪ್ಪ	ದ್ವಿ.ದ.ಸ.	5800-10500	
22.	ಪಿ. ಶ್ರೀನಿವಾಸ	ದ್ವಿ.ದ.ಸ.	6250-12000	
23.	ಜೆ. ವೇದಾವತಿ	ದ್ವಿ.ದ.ಸ.	5800-10500	
24.	ಟಿ.ವಿ. ಕಾಂತಮ್ಮ	ಶೀಘ್ರಲಿಪಿಗಾರರು	8000-14800	
25.	ಶೋಭಾಲಕ್ಷ್ಮಿ	ಶೀಘ್ರಲಿಪಿಗಾರರು	7275-13350	
26.	ಓ. ಕುಸುಮಾಕ್ಷಿ	ಬೆರಳಚ್ಚುಗಾರರು	6250-12000	
27.	ಕೆ. ರೇಖಾ	ಬೆರಳಚ್ಚುಗಾರರು	5800-10500	
28.	ಕೆ.ಆರ್.ವಾಣಿ	ಬೆರಳಚ್ಚುಗಾರರು	7275-13350	
29.	ಶಿವರಾಮಯ್ಯ	ವಾಹನ ಚಾಲಕರು	7275-13350	
30.	ಎನ್. ಶ್ರೀಧರ್	ವಾಹನ ಚಾಲಕರು	7275-13350	
31.	ಗಿಡ್ಡಣ್ಣ	ದಫೇದಾರ್	5500-9500	
32.	ಫಿಲಿಪ್ ಲೋಬೋ	ದಫೇದಾರ್	5500-9500	
33.	ಡಿ.ಪಿ. ಮಲ್ಕಯ್ಯ	ಜಮೇದಾರ್	5500-9500	

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಹೆಸರು ಶ್ರೀಮತಿ/ಶ್ರೀ	ಪದನಾಮ	ವೇತನ ಶ್ರೇಣಿ	ದೂರವಾಣಿ ಸಂಖ್ಯೆ
34.	ಅನಿಲ್ ಆರ್.ಡಿ.	ಡಿ ದರ್ಜೆ ನೌಕರ	4800–7275	
35.	ಚಂದ್ರಶೇಖರ್	ಡಿ ದರ್ಜೆ ನೌಕರ	4800–7275	
36.	ಎಂ. ಪ್ರಭು	ಡಿ ದರ್ಜೆ ನೌಕರ	4800–7275	
37.	ವೆಂಕಟೇಶ್	ಡಿ ದರ್ಜೆ ನೌಕರ	4800–7275	
38.	ಜಯದೇವಪ್ಪ	ರಾತ್ರಿ ಕಾವಲುಗಾರ		
39.	ಎಸ್.ಆರ್. ಶಂಕರ್	ಡಿ ದರ್ಜೆ ನೌಕರ	5200–8200	
40.	ಪುಟ್ಟರಾಜು	ಡಿ ದರ್ಜೆ ನೌಕರ		
41.	ಮಲ್ಲೇಶಯ್ಯ	ಡಿ ದರ್ಜೆ ನೌಕರ	5200–8200	
42.	ಮಂಜು ಎಂ.	ಡಿ ದರ್ಜೆ ನೌಕರ	5200–8200	
	ಚುನಾವಣಾ ಸಿಬ್ಬಂದಿ:			
43.	ಶ್ರೀಕಂಠಮೂರ್ತಿ ಬಿ.ಆರ್.	ತಹಶೀಲ್ದಾರ್	11400–21600	272282
44.	ಕೆ.ಕಲಾವತಿ	ಶಿರಸ್ತೇದಾರ್	7275–13350	
45.	ಆರ್. ಪ್ರದೀಪ್	ಪ್ರ.ದ.ಸ.	7275–13350	
46.	ಎಂ. ಆಂಜನೇಯ	ಪ್ರ.ದ.ಸ.	5800–10500	
47.	ವೆಂಕಟೇಶ ವಿಠಲ	ದ್ವಿ.ದ.ಸ.	5800–10500	
48.	ಸಿ.ಎಸ್.ದೇಸಾಯಿ	ಬೆರಳಚ್ಚುಗಾರರು	7275–13350	
	ಸಾಕಮ್ಮ	ಡಿ ದರ್ಜೆ ನೌಕರ	5200–8200	
	ಭೂಸ್ವಾಧೀನ ಸಿಬ್ಬಂದಿ			
49.	ಪಿ.ಮಂಜುನಾಥ	ಪ್ರ.ದ.ಸ.	7275–13350	
50.	ಕೆ. ನವೀನ್‌ಮೂರ್ತಿ	ದ್ವಿ.ದ.ಸ.	5800–10500	
51.	ಸಿ. ದಾಕ್ಷಾಯಿಣಿ	ಬೆರಳಚ್ಚುಗಾರರು	5800–10500	
52.	ಹುದ್ದೆ ಖಾಲಿ	ಡಿ ದರ್ಜೆ ನೌಕರ		
	ನೀರಾವರಿ ಸಿಬ್ಬಂದಿ			
53.	ಎಸ್.ಹೆಚ್. ಪಾಟೀಲ್	ಪ್ರ.ದ.ಸ.	7275–13350	
	ಸಾರ್ವಜನಿಕ ಕುಂದುಕೊರತೆ ಸಿಬ್ಬಂದಿ			
54.	ಇಂದಿರಾಬಾಯಿ	ಬೆರಳಚ್ಚುಗಾರರು	5800–10500	
55.		ಜಿಲ್ಲಾ ಮಂತ್ರಿಗಳ ಆಪ್ತ ಸಹಾಯಕರು		
	ನಿಯೋಜಿತ ನೌಕರರು			
56.	ನಾಗರಾಜರಾವ್	ಪ್ರ..ದ.ಸ.		
57.	ಎಂ. ನಿಂಗಯ್ಯ	ಪ್ರ.ದ.ಸ.		
58.	ಜೆ. ಶಶಿಧರ್	ಬೆರಳಚ್ಚುಗಾರರು		
59.	ಗಿರಿರಾಜ್	ದ್ವಿ.ದ.ಸ.		
60.	ಕೃಷ್ಣ	ಡಿ ದರ್ಜೆ ನೌಕರ		
61.	ಡಾಕಪ್ಪ	ದಫೇದಾರ್		

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಹೆಸರು ಶ್ರೀಮತಿ/ಶ್ರೀ	ಪದನಾಮ	ವೇತನ ಶ್ರೇಣಿ	ದೂರವಾಣಿ ಸಂಖ್ಯೆ
62.	ಸರಸ್ವತಮ್ಮ	ಡಿ ದರ್ಜೆ ನೌಕರ		
63.	ಬಿ.ಜಿ. ಅರುಣಕುಮಾರ್	ಭೂಮಿ ಕನ್ಸಲ್ಟೆಂಟ್		
64.	ಲಕ್ಷ್ಮಿದೇವಿ	ಡಿ ದರ್ಜೆ ನೌಕರ		
65.	ಉದಯಕುಮಾರ್	ಡಿ ದರ್ಜೆ ನೌಕರ		
66.	ಜಯಮ್ಮ	ಡಿ ದರ್ಜೆ ನೌಕರ		
	D.D.L.R. ಶಾಖೆ:			
67.	ಎನ್.ಸಿ.ವಸಂತಕುಮಾರ್	ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು	14000-25050	222174
68.	ಎ.ಎಂ. ರಮೇಶ್	ಭೂ ದಾಖಲೆಗಳ ಸಹಾಯಕ ನಿರ್ದೇಶಕರು (ಆ)	10800-20025	
69.	ಮಹಾದೇವ. ಡಿ.	ಅಧೀಕ್ಷಕರು (ಆ)	10000-18150	
70.	ಎಸ್.ಹೇಮಾವತಿ	ಬೆರಳಚ್ಚುಗಾರರು	5800-10500	
71.	ಎ. ಜಯರಾಮ್	ವಾಹನ ಚಾಲಕರು	5800-10500	
72.	ಸಿ.ಸುಧಾ	ಡಿ ದರ್ಜೆ ನೌಕರ	4800-7275	
73.	ರಾಧಮ್ಮ	ಡಿ ದರ್ಜೆ ನೌಕರ	4800-7275	
74.	ಕೃಷ್ಣ	ಡಿ ದರ್ಜೆ ನೌಕರ	4800-7275	
	ಮುಜರಾಯಿ ಶಾಖೆ:			
75.	ಲಕ್ಷ್ಮೀನರಸಯ್ಯ	ಜಿಲ್ಲಾಧಿಕಾರಿಗಳ ಮುಜರಾಯಿ ಸಹಾಯಕರು	10800-20025	
76.	ಎಸ್.ಟಿ.ಸುನೀಲ್‌ಕುಮಾರ್	ದ್ವಿ.ದ.ಸ.	5800-10500	
77.	ಗಂಗಾಧರಪ್ಪ ಹೆಚ್.	ದ್ವಿ.ದ.ಸ.	5800-10500	
78.	ಗುತ್ಯಪ್ಪ	ಡಿ ದರ್ಜೆ ನೌಕರ	5500-9500	

ಜಿಲ್ಲಾಧಿಕಾರಿ

ಪಿ.ಆರ್.911 ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಸವಿತಾ ವಿವಿಧೋದ್ದೇಶ ಸಹಕಾರ ಸಂಘ ನಿ., ದಾವಣಗೆರೆ, ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/08-09, ಸಿಆರ್-35, ದಿನಾಂಕ:06.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗಲು ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-24/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಸವಿತಾ ವಿವಿಧೋದ್ದೇಶ ಸಹಕಾರ ಸಂಘ ನಿ., ದಾವಣಗೆರೆ, ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.731

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕುಂಟಪಾಲನಹಳ್ಳಿ, ದಾವಣಗೆರೆ-ತಾ. ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/08-09, ಸಿಆರ್-40, ದಿನಾಂಕ:19.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗಲು ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-25/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕುಂಟಪಾಲನಹಳ್ಳಿ, ದಾವಣಗೆರೆ-ತಾ. ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.732

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಅಕ್ಟೋಬರ್ ೧೫, ೨೦೦೯ (ಆಶ್ವಯುಜ ೨೩, ಶಕ ವರ್ಷ ೧೯೩೧)	ಸಂಚಿಕೆ ೪೧

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 117 ಎಲ್ಆರ್ಎ 2009, ಬೆಂಗಳೂರು, ದಿನಾಂಕ: 19ನೇ ಸೆಪ್ಟೆಂಬರ್, 2009

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ (1962ರ 10ನೇ ಸಂಖ್ಯೆಯ) ಕರ್ನಾಟಕ ಕಾಯ್ದೆ ತಿದ್ದುಪಡಿಯಾದಂತೆ ಕಲಂ 48ರ ಉಪ ಕಲಂ (1) ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ.ಸಂ	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1	ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ	1. ಶ್ರೀ ದೊರೆಸ್ವಾಮಿ ನಾಯ್ಕ ಬಿನ್ ಕರಿನಾಯ್ಕ, ಹಡತಲೆ ಗ್ರಾಮ ಮತ್ತು ಅಂಚೆ, ನಂಜನಗೂಡು ತಾಲ್ಲೂಕು
		2. ಶ್ರೀ ವಾಲ್ಟರ್ (ಬಾಬು) ಬಿನ್ ಬುತ್ತಾಲ್, ರಾಷ್ಟಪತಿ ರಸ್ತೆ, ನಂಜನಗೂಡು ಪಟ್ಟಣ
		3. ಶ್ರೀ ಹೆಚ್.ಎಲ್. ಮಲ್ಲಿಕಾರ್ಜುನ ಬಿನ್ ಲಿಂಗಪ್ಪ ಹದಿನಾರು, ಚಿಕ್ಕಯ್ಯನ ಛತ್ರ ಹೋಬಳಿ ನಂಜನಗೂಡು ತಾಲ್ಲೂಕು (ಮೀಸಲಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಸುಧಾರಣೆ)

ಪಿ.ಆರ್. 559

IVA -F1-B/B

ಅಧಿಸೂಚನೆ

ಸಂಖ್ಯೆ: ಕಂಇ 190 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ: 24ನೇ ಸೆಪ್ಟೆಂಬರ್, 2009

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ (1962ರ 10ನೇ ಸಂಖ್ಯೆಯ) ಕರ್ನಾಟಕ ಕಾಯ್ದೆ ತಿದ್ದುಪಡಿಯಾದಂತೆ ಕಲಂ 48ರ ಉಪ ಕಲಂ (1) ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ.ಸಂ	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1	ಕಾರ್ಕಳ ತಾಲ್ಲೂಕು ಉಡುಪಿ ಜಿಲ್ಲೆ	1. ಶ್ರೀ ಆನಂದ ಬಂಡೀಮಠ ಬಿನ್, ಪಿ.ಕೆ. ಗೋಪಾಲ, (ಮೀಸಲು) ಗೋಪಾಲ ನಿವಾಸ, ಬಂಡೀಮಠ, ಕಾರ್ಕಳ
		2. ಶ್ರೀ ಮಣಿರಾಜ್ ಶೆಟ್ಟಿ, ನ್ಯಾಯವಾದಿ ತೆಳ್ಳಾರ್ ರಸ್ತೆ, ಕಾರ್ಕಳ
		3. ಶ್ರೀ ಗಣಪತಿ ಮುದ್ರಾಡಿ, ಬಿನ್ ಬಾಬು ಅಲಿಯಾಸ್ ನಾರಾಯಣ, ವ್ಯಾಪಾರಸ್ಥರು, ಮುದ್ರಾಡಿ
		4. ಶ್ರೀಮತಿ ಸುಮಾ ಕೇಶವ್, ಲಲಿತ ಕೃಪ, ಫಿಶರೀಸ್ ರಸ್ತೆ, ಕಾರ್ಕಳ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಸುಧಾರಣೆ)

ಪಿ.ಆರ್. 560

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಪಸಂಮೀ 46 ಮೀಇಇ 2009, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2009

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ 1996 ಅಧ್ಯಾಯ– II ರ ಪ್ರಕರಣ 7(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿವನಸಮುದ್ರ ಜಲಾಶಯದಲ್ಲಿ ಅಪರೂಪದ ಹಾಗೂ ಅಳಿವಿನ ಅಂಚಿನಲ್ಲಿರುವ ಮಹಶೀರ್, ಪಂಟಿಯಸ್ ಕರ್ನಾಟಿಕಸ್ ಮುಂತಾದ ಮೀನುಗಳ ಸಂತತಿಯನ್ನು ಸಂರಕ್ಷಿಸುವ ದೃಷ್ಟಿಯಿಂದ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಗ್ರಾಮ ಪಂಚಾಯತಿ ಸರ್ವೆ ನಂಬರು 341, 342, 343, 344, 345, 346, 347, 348, 349, 355, 358, 359/2ಬಿ, 373/374, 379/384. 385,. 386, 387, 388, 390, 391, 392, 393, 394, 402, 403, 405 ರಲ್ಲಿ ಬರುವ ಶಿವನಸಮುದ್ರ ಜಲಾಶಯವನ್ನು ಮತ್ತು ಜಲಾಶಯಕ್ಕೆ ಬರುವ ಚಾನಲ್ ಹೆಡ್ ಟವರ್‌ನಿಂದ 1400 ಮೀಟರ್ ಉದ್ದ ಹೊಂದಿರುವ ಪ್ರದೇಶವನ್ನು ತತ್ ಕ್ಷಣದಿಂದ ಜಾರಿಗೆ ಬರುವಂತೆ "ಮತ್ಸ್ಯಧಾಮ" ವೆಂದು ಘೋಷಿಸಿದೆ.

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ 1996 ರ ಅಧ್ಯಾಯ II ರ ಪ್ರಕರಣ 7(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲೆ, ಮಳವಳ್ಳಿ, ತಾಲ್ಲೂಕಿನ ಬೆಳಕವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲೆ ತಿಳಿಸಿದ ಸರ್ವೆ ನಂಬರುಗಳಲ್ಲಿ ಬರುವ ಶಿವನಸಮುದ್ರ ಜಲಾಶಯ ಮತ್ತು ಜಲಾಶಯಕ್ಕೆ ಬರುವ ಚಾನಲ್ ಹೆಡ್ ಟವರ್‌ನಿಂದ 1400 ಮೀಟರ್ ಉದ್ದ ಹೊಂದಿರುವ ಪ್ರದೇಶದಲ್ಲಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಮೀನು ಹಿಡಿಯುವುದನ್ನು ಮತ್ತು ಯಾವುದೇ ತರಹದ ಮೀನುಗಾರಿಕೆ ಚಟುವಟಿಕೆ ನಡೆಸುವುದನ್ನು ನಿಷೇಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಎಂ. ರಾಜಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಪಿ.ಆರ್. 561

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 386 ಪಿಎಂಎಸ್ 2009, ಬೆಂಗಳೂರು, ದಿನಾಂಕ: 24ನೇ ಸೆಪ್ಟೆಂಬರ್, 2009

1872ರ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ ಕಾಯಿದೆಯ 9ನೇ ಕಲಂನಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇಂಡಿಯನ್ ಕ್ರಿಶ್ಚಿಯನ್ ಮ್ಯಾರೇಜ್ (ಕರ್ನಾಟಕ) ನಿಯಮಗಳು 1961 ರಂತೆ ಕಾರ್ಯನಿರ್ವಹಿಸಲು ಪಾಸ್ಟರ್ ಎಂ.ಕೆ. ಜೋಸೆಫ್, ಪವರ್ ಆಫ್ ಜೀಸಸ್ ಪ್ರೇಯರ್ ಮಿನಿಸ್ಟ್ರಿ (ರಿ), ನಂ 69/.ಬಿ, ಚರ್ಚ್‌ಸ್ಟ್ರೀಟ್, ಮುನಿಸ್ವಾಮಿ ಲೇಔಟ್, ಬ್ರಿಗೇಡ್ ಮಿಲೇನಿಯಂ ಹತ್ತಿರ, ಬೆಂಗಳೂರು–78 ಇವರಿಗೆ ಮೇಲಿನ ಕಾಯ್ದೆಯಡಿಯಲ್ಲಿ ಬೆಂಗಳೂರು ಜಿಲ್ಲೆ ಆಡಳಿತ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಿ, ವಿವಾಹ ವಿಧಿಯನ್ನು ನೆರವೇರಿಸಲು ಸದರಿ ಕಾಯ್ದೆಯಡಿಯಲ್ಲಿ ಸೂಚಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅನುಮತಿಯನ್ನು ಈ ಮೂಲಕ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆಲಿಸ್ ಗೊನ್ಸಾಲ್ವಿಸ್

ಪಿ.ಆರ್. 562 ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ರಹದಾರಿ ಮತ್ತು ವಿದೇಶಿಯರು)

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-67), ಬೆಂಗಳೂರು, ದಿನಾಂಕ: 24ನೇ ಸೆಪ್ಟೆಂಬರ್, 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಶ್ರೀನಿವಾಸಪುರ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಮುನಿರೆಡ್ಡಿ ಬಿನ್ ಬಾಲಪ್ಪ, ವೆಂಕಟೇಶ್ವರ ಎಕ್ಸಟೆಂಷನ್, ಕೆ.ಎನ್. ಕಾಂಪ್ಲೆಕ್ಸ್, ಶ್ರೀನಿವಾಸಪುರ
2. ಶ್ರೀ ಚಂದ್ರಶೇಖರ ಜಿ.ಎಫ್.ಬಿನ್ ಜಿ. ಶ್ರೀನಿವಾಸಯ್ಯ, ತೋಟಗಾರಿಕೆ ಮುಂಭಾಗ, ಎಂ.ಜಿ. ರಸ್ತೆ, ಶ್ರೀನಿವಾಸಪುರ ತಾ:
3. ಶ್ರೀ ಪಲ್ಲಾರೆಡ್ಡಿ ಬಿನ್ ಮುನಿವೆಂಕಟಪ್ಪ, ರಾಮಕೃಷ್ಣರಸ್ತೆ, ಶ್ರೀನಿವಾಸಪುರ ತಾಲ್ಲೂಕು
4. ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಬಿನ್ ಶಿವರುದ್ರಪ್ಪ, ಎಂ.ಜಿ.ರಸ್ತೆ, ಶ್ರೀನಿವಾಸಪುರ ತಾಲ್ಲೂಕು
5. ಶ್ರೀ ಎಂ. ವೇವಣ್ಣ ಬಿನ್ ಮುನಿವೆಂಕಟಪ್ಪ, ವೆಂಕಟೇಶ್ವರ ಬಡಾವಣೆ, ಶ್ರೀನಿವಾಸಪುರ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. ರವೀಂದ್ರ

ಪಿ.ಆರ್. 563 ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-38), ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನರಸಿಂಹರಾಜಪುರ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಜೆ.ಜಿ. ನಾಗರಾಜ್ ಬಿನ್ ಗಣೇಶ್ ರಾವ್, ನರಸಿಂಹರಾಜಪುರ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ
2. ಶ್ರೀ ಟಿ.ಆರ್. ಜಯರಾಮ್ ಬಿನ್ ಲೇ:ರಾಮಯ್ಯ ಟಿ.ವಿ. ಹಳೇ ಅಂಚೆ ಕಛೇರಿ ರಸ್ತೆ, ನರಸಿಂಹರಾಜಪುರ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.
3. ಶ್ರೀ ಎಂ. ಸುಬ್ರಮಣ್ಣ ಬಿನ್ ಮುನಿರಾಜು, ಮೇದರಬೀದಿ, ನರಸಿಂಹರಾಜಪುರ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. ರವೀಂದ್ರ

ಪಿ.ಆರ್. 564 ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-39), ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಶೃಂಗೇರಿ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಹರೀಶ್ ವಿ. ಶೆಟ್ಟಿ ಬಿನ್ ವೆಂಕಟರಮಣ ಶೆಟ್ಟಿ, ಕೆರೆದಂಡೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
2. ಶ್ರೀ ಮಂಜುನಾಥ ಪಂಡಿತ್ ಬಿನ್ ನಾರಾಯಣ್ ಪಂಡಿತ್, ಕೆರೆದಂಡೆ, ಶೃಂಗೇರಿ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.
3. ಡಾ: ನರಸಿಂಹಪ್ರಸಾದ್ ಬಿನ್ ರಾಮಸ್ವಾಮಿ, ಅಶ್ವಿನಿ ಕ್ಲಿನಿಕ್, ಭಾರತೀ ಬೀದಿ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಆರ್. ರವೀಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 565

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-40), ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಕೊಪ್ಪ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಕಣ್ಣನ್ ಎಂ.ಆರ್. ಬಿನ್ ಶ್ರೀ ಎಂ.ಆರ್.ಆರ್. ಅಯ್ಯಂಗಾರ್, ಕಾಮಧೇನು ಎಂಟರ್‌ಪ್ರೈಸಸ್, ಮುಖ್ಯರಸ್ತೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ
2. ಶ್ರೀ ಸುಧಾಕರ್ ಭಟ್, ಬಿನ್ ಶ್ರೀ ನರಹರಿ ಆಚಾರ್, ವಿವೇಕಾನಂದ ರಸ್ತೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ,
3. ಶ್ರೀ ಶ್ರೀಪತಿ ಪ್ರಭು ಬಿನ್ ಶ್ರೀ ಸನಾತನ ಪ್ರಭು, ಸುಭಾಷ್ ರಸ್ತೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಆರ್. ರವೀಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 566

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-43), ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2009

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಶಿರಾಳಕೊಪ್ಪ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಅಗಡಿ ಅಶೋಕ್ ಬಿನ್ ಶ್ರೀ ಅಗಡಿ ಕೃಷ್ಣಮೂರ್ತಿ, ಹಳೇ ಪೋಸ್ಟ್ ಆಫೀಸ್ ರಸ್ತೆ, ಶಿರಾಳಕೊಪ್ಪ
2. ಡಾ: ಮುರುಘರಾಜ್ ಬಿನ್ ಶ್ರೀ ಜಯದೇವಪ್ಪ ಸೊರಣಗಿ, ಕುಂಬಾರಕೇರಿ, ಶಿರಾಳಕೊಪ್ಪ
3. ಶ್ರೀ ಐ.ಎಂ. ಶಿವಾನಂದಯ್ಯ ಬಿನ್ ಶ್ರೀ ಮೂಕಯ್ಯ, ನೆಹರೂ ಕಾಲೋನಿ, 1ನೇ ಕ್ರಾಸ್ ಶಿರಾಳಕೊಪ್ಪ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಆರ್. ರವೀಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 567

HOME SECRETARIAT

NOTIFICATION

No. HD 222 POP 2009, Bangalore, Dated: 30th September, 2009

In exercise of the powers conferred by clause (s) of section 2 of the Code of Criminal Procedure, 1973 (Central Act 2 of 1974), the Government of Karnataka hereby declare that with effect from the date

of publication of this notification in the Official Gazette, the areas and places specified in column (3) of the schedule below, shall cease to be within the jurisdiction of the police station specified in column (4) thereof and the said areas and places shall be included in the Police Station specified in column (2) thereof.

SCHEDULE

ಜಿಲ್ಲೆಯ ಹೆಸರು, ಉಪ ವಿಭಾಗ ಹಾಗೂ ಠಾಣೆ	ಅಂಕಣ (3)ರಲ್ಲಿರುವ ಪ್ರದೇಶಗಳನ್ನು ಸೇರಿಸಬೇಕಾದ ಪೊಲೀಸ್ ಠಾಣೆ	ಪ್ರದೇಶಗಳು	ಕಾಲಂ 3ರಲ್ಲಿ ಸೂಚಿಸಿದ ಪ್ರದೇಶವನ್ನು ಹೊರತುಪಡಿಸಿದ ಠಾಣೆ ಹೆಸರು
ಬಳ್ಳಾರಿ ಜಿಲ್ಲೆ	ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆ	ಅಲ್ಲಿಪುರ ಎದುರುಗಡೆ –ಬಳ್ಳಾರಿ ರೂರಲ್ ಇಂಜನಿಯರಿಂಗ್ ಕಾಲೇಜ್ ವರೆಗೆ	ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ
ಬಳ್ಳಾರಿ ನಗರ ಉಪ ವಿಭಾಗ ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆ		ಅಲ್ಲಿಪುರ ಬಲಗಡೆ–ಎಂ.ಆರ್.ಎಫ್. ನೈಜ್‌ಟ್ ರಿಮೋಟ್ ಫ್ಯಾಕ್ಟರಿ ವರೆಗೆ ಕೊಳಗಲ್ಲು ರಸ್ತೆ,ಸಿಮೆಂಟ್ ಫ್ಯಾಕ್ಟರಿ ಕಲ್ಲು ಬೋರ್ಡ್ 93–94	
		ತಾಳೂರು ರಸ್ತೆ–ರೈಸ್ ಮಿಲ್ ವರೆಗೆ	
		ಕಪ್ಪಗಲ್ ರಸ್ತೆ, ಡ್ರೀಮ್ ವರ್ಲ್ಡ್ ಸ್ಕೂಲ್ ಕಾಂಪೌಂಡ್ ಗೋಡೆ ವರೆಗೆ	
		ಸಂಗನಕಲ್ಲು ರಸ್ತೆ–ಸ್ಮಶಾನದ ವರೆಗೆ	
		ಬಿಸಲಹಳ್ಳಿ ರಸ್ತೆ–ಆರ್ಮ್ಸ್ & ಅಮ್ಯುನಿಷನ್ ಫ್ಯಾಕ್ಟರಿ ನಂತರ ಸಬ್ ಕೆನಾಲ್ ಸಂ:13 ವರೆಗೆ	
		ಬಿ. ಗೋನಾಳ್ ರಸ್ತೆ–ಚಿಕ್ಕದು ಬ್ರಿಡ್ಜ್ ನಂತರ ಕೆನಾಲ್ ವರೆಗೆ	
		ಅಂದ್ರಾಳ್ ರೋಡ್, ಇಬ್ರಾಹಿಂಪುರ ಹತ್ತಿರ, ಸಬ್ ಕೆನಾಲ್ ವರೆಗೆ	
		ಬೊಮ್ಮನಾಹಾಳ್ ರಸ್ತೆ, ಮಂಗಮ್ಮ ಕ್ಯಾಂಪ್ ಬರುವುದಕ್ಕಿಂತ ಮುಂಚೆ ಸಬಾಕೆನಾಲ್ ವರೆಗೆ	
		ಸಂಜೀವರಾಯನಕೋಟೆ–ಮುಂಡ್ರಿಗಿ ಒಳಗಿನಿಂದ ಹೋದರೆ ಅಲ್ಲಿ ಕೆನಾಲ್ ಇದೆ ಅಲ್ಲಿಯವರೆಗೆ	
		ಬೆಂಗಳೂರು ರಸ್ತೆ–ಹಲ್ಕುಂದಿ ಮಠ ಆದಮೇಲೆ ಹಳ್ಳದ ಬ್ರಿಡ್ಜ್ ರೈಲ್ವೆ ಕ್ರಾಸ್ ವರೆಗೆ	
		ಹೊನ್ನಳ್ಳಿ ರಸ್ತೆ–ಬೆಗ್ಗರ್ಸ್ ಕಾಲೋನಿಯವರೆಗೆ ಬೆಳಗಲ್ ರಸ್ತೆ–ವೃದ್ಧಾಶ್ರಮ ಆದಮೇಲೆ ಪ್ರಶಾಂತ ನಗರ ದಾಟಿದ ಮೇಲೆ ಬಲಗಡೆ ಎ.ಆರ್. ಮೂರ್ತಿ ರವರ ಸಮಾಧಿ ವರೆಗೆ	
		ಆಲದ ಹಳ್ಳಿ ರಸ್ತೆ– ಆಲದಹಳ್ಳಿ ಗ್ರಾಮದ ವರೆಗೆ	

The Traffic Police Stations specified in column (2) shall be responsible for investigation of the offences under:

1) the Karnataka Traffic Control Act, 1960 (Karnataka Act No. 18 of 1960)
2) the Karnataka Traffic (Control of Public Vehicles) Rules, 1979
3) the Karnataka Traffic Control (Regulation of Traffic on Highways) Rules, 1979 and the Karnataka Traffic Control Rules 1979.
4) the Karnataka Public Conveyance Act, 1961 (Karnataka Act 20 of 1962)
5) the Motor Vehicles Act, 1988 (Central Act 59 of 1988) and the Karnataka Motor Vehicle Rules 1989
6) offences under sections 279, 304[A], 337, 338 and 427 of Indian Penal Code, 1860.

By Order and in the name of the Governor of Karnataka,

G.R. SRINIVASA RAO

P.R. 568

Under Secretary to Government [I/c],
Home Department (Police Expenditure)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಮಮಇ 60 ಮಅನಿ 2009, ಬೆಂಗಳೂರು, ದಿನಾಂಕ: 19ನೇ ಸೆಪ್ಟೆಂಬರ್, 2009

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ನಿಯಮಗಳು 2000ದ ಅನ್ವಯ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ಮೈಸೂರು ದಸರಾ ಮತ್ತು ವಸ್ತು ಪ್ರದರ್ಶನ 2009ರಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮಳಿಗೆಗಳನ್ನು ಏರ್ಪಡಿಸುವ ಕುರಿತು ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಧಿನಿಯಮ ಕಲಂ 7ರಂತೆ ಉಪಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಯನ್ನಾಗಿ ಹಾಗೂ ಅಧಿನಿಯಮ ಕಲಂ 9ರ (i)(ii)ರಂತೆ ಟೆಂಡರ್ ಆಹ್ವಾನಿಸುವ ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವನ್ನಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರನ್ನು ನೇಮಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000ದ ಕಲಂ 17(2)ರಂತೆ ಟೆಂಡರ್ ಬುಲೆಟಿನ್‌ನಲ್ಲಿ ಟೆಂಡರ್ ನೋಟೀಸ್ ಆಹ್ವಾನಿಸುವ ಪ್ರಕಟಣೆ ದಿನಾಂಕ ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕದ ನಡುವೆ ಕನಿಷ್ಟ 60 ದಿನಗಳ ಸಮಯ ನೀಡಬೇಕಾಗಿದ್ದು, ವಸ್ತು ಪ್ರದರ್ಶನದಲ್ಲಿ ಇಲಾಖೆಯ ಬಾಗವಹಿಸುವಿಕೆ ಅತ್ಯಂತ ಜರೂರಾಗಿ ಆಗಬೇಕಾಗಿರುವುದರಿಂದ ಸದರಿ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಟೆಂಡರ್ ಬುಲೆಟಿನ್‌ನಲ್ಲಿ ಟೆಂಡರ್ ನೋಟಿಸ್ ಆಹ್ವಾನಿಸುವ ಪ್ರಕಟಣೆ ದಿನಾಂಕ: ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು 8 ದಿನಗಳಿಗೆ ಮಿತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಮಂಜುನಾಥ್

ಪಿ.ಆರ್. 569

ಸರ್ಕಾರದ ಉಪ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

PERSONNEL AND ADMINISTRATIVE REFORMS SECRETARIAT

NOTIFICATION

No. DPAR 11 SMR 2009, Bangalore, Dated: 29th September, 2009

In exercise of the powers conferred by clause (ff) of rule 3 of the Karnataka Government Servants' (Medical Attendance)Rules 1963, the Government of Karnataka hereby adds the following item after item 240 of Schedule I to the said rules, namely:

(241) NewCity Multispeciality Hospital, Opp .Shanieshwara Temple, Vidyaranya Marg, Kadbettu Udupi-576 101

By Order and in the name of the Governor of Karnataka,

P. MARKANDEYA

Under Secretary to Government,
Department of Personnel and Administrative Reforms (Services Rules-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 11 ಎಸ್ಎಂಆರ್ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 3 ರ ಖಂಡ (ಎಫ್ಎಫ್) ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್-I ರ ಐಟಂ 240 ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ:

(241) ನ್ಯೂಸಿಟಿ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್, ಶನೀಶ್ವರ ದೇವಸ್ಥಾನದ ಎದುರಿಗೆ, ವಿದ್ಯಾರಣ್ಯ ಮಾರ್ಗ, ಕಾಡಬೆಟ್ಟು, ಉಡುಪಿ-576 101.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಮಾರ್ಕಂಡೇಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-2)

ಪಿ.ಆರ್. 570

KARNATAKA GOVERNOR'S SECRETARIAT

NOTIFICATION

No. GS 11 TUM 2007, Bangalore, Dated: 7th October, 2009

WHEREAS, in Notification No. GS 11 TUM 2007 dated 14th November, 2007 the Executive Council of Visvesvaraya Technological University, Belgaum, was re-constituted by H.E. the Chancellor and Dr. D.H. Rao, Principal Gogte Institute of Technology, Belgaum ,was nominated as a Member on the Executive Council of the Visvesvaraya Technological University, Belgaum, in terms of Section 19(3)(e) of the Visvesvaraya Technological University Act, 1994.

WHEREAS, the Vice-Chancellor, Visvesvaraya Technological University, Belgaum, vide his letter dated:16.9.2009 has intimated that Dr. D.H. Rao,. Principal, Gogte Institue of Technology, Belgaum, has relinquished from the office of the Principal, Gogte Institute of Technology, Belgaum on 24.8.2009 and therefore he ceases to be a Member on the Executive Council of the said University.

AND NOW THEREFORE, in exercise of the powers conferred under Section 19(3)(e) read with Section 19(4) of the VTU Act, 1994, I, H.R. BHARDWAJ, Governor of Karnataka and Chancellor of the Universities in Karnataka, hereby nominate Dr. K.N. Balasubramanya Murthy, Principal, PES Institute of Technology, Banashankari, Hosakerehalli, Bangalore-560 085 as Member on the Executive Council of the Visvesvaraya Technological University, Belgaum, in place of Dr. D.H. Rao, for the residuary period of the term of Dr. D.H. Rao.

H.R. BHARDWAJ
Governor and Chancellor

P.R.571

K.H. SESHAGIRI
Under Secretary to Governor

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 200 ಎಲ್ಸಿಎಲ್ 2007, ಬೆಂಗಳೂರು, ದಿನಾಂಕ: 7ನೇ ಅಕ್ಟೋಬರ್, 2009

ಪ್ರಾವಿನ್ ಶಿಯಲ್ ಇನ್ ಸಾಲ್ವೆನ್ಸಿ ಅಧಿನಿಯಮ 1920 (ಕೇಂದ್ರ ಅಧಿನಿಯಮ 1920ರ 5) ನಿಯಮ 57ರ ಉಪ ನಿಯಮ (1)ರಲ್ಲಿ ಮತ್ತು ಪ್ರಾವಿನ್ ಶಿಯಲ್ ಇನ್‌ಸಾಲ್ವೆನ್ಸಿ (ಕರ್ನಾಟಕ ಎಕ್ಸ್‌ಟೆನ್‌ಷನ್ ಅಂಡ್ ಅಮೆಂಡ್ ಮೆಂಟ್) ಅಧಿನಿಯಮ 1962ರನ್ವಯ ಪ್ರದತ್ತವಾದ ಅಧಿಕಾರವನ್ನು ಬಳಸಿಕೊಂಡು ಕರ್ನಾಟಕ ಸರ್ಕಾರವು ಶ್ರೀ ಹೆಚ್. ರವಿಶಂಕರ್, ವಕೀಲರು, ಹಿರಣ್ಯ ಕೃಪ, ಶಂಕರ ಕಾಲೋನಿ, ಶಂಕರಮಠ ರಸ್ತೆ, ಶಿವಮೊಗ್ಗ ಇವರನ್ನು ದಿನಾಂಕ:1.10.2009ರಿಂದ ಮೂರು

ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಶಿವಮೊಗ್ಗ ಜಿಲ್ಲೆಯ ಅಫಿಷಿಯಲ್ ರಿಸೀವರನ್ನಾಗಿ ಶ್ರೀಮತಿ ಕೆ.ಜಿ. ಕಲ್ಪನಾ ಇವರ ರಾಜೀನಾಮೆಯಿಂದ ತೆರವಾದ ಜಾಗದಲ್ಲಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಕುಂತಲಾ ಹೆಚ್.ಆರ್.

ಪಿ.ಆರ್. 572

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

KARNATAKA GOVERNOR'S SECRETARIAT

NOTIFICATION

No.GS 3 KOM 2007, Bangalore, Dated: 29th September, 2009

WHEREAS Prof .B.A. Viveka Rai, Vice Chancellor, Karnataka State open University, Mysore has tendered his resignation for the post of Vice-Chancellor, on his selection for an assignment as a Guest Professorship at the University of Wurzburg, Germany His resignation has been accepted with effect from 30.9.2009 afternoon vide Notification No. GS 3 KOM 2007 dated 29th September, 2009.

WHEREAS, on account of the resignation of Prof. B.A. Viveka Rai, Vice-Chancellor, Karnataka State Open University, Mysore, the post of Vice-Chancellor of the said University falls vacant with effect from 1.10.2009.

NOW, THEREFORE, I H.R. BHARDWAJ,GOVERNOR OF KARNATAKA AND CHANCELLOR OF THE UNIVERSITIES IN KARNATAKA in exercise of the powers conferred by Sub Clause 6 of Clause 1 of First Statutes of the Second Schedule of Karnataka State Open University,hereby appoint Sri K.R. Jayaprakash Rao, Registrar, Karnataka State Open University Mysore, to act as Vice-Chancellor, Karnataka State Open University, Mysore, until a new Vice-Chancellor is appointed in terms of section 10 (1) of the Karnataka State Open University Act 1992.

H.R. BHARDWAJ

P.R. 573

Governor & Chancellor

SHARADA SUBRAMANIAM

Secretary to Governor

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 120 ಸಿಎಸ್ಎಸ್ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ರಾಯಚೂರು ಜಿಲ್ಲೆ ಮತ್ತು ತಾಲ್ಲೂಕಿನ ರೈತರ ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ನಿ. ರಾಯಚೂರು ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಜಿ. ಶಂಕರ ರೆಡ್ಡಿ ಮಕ್ತಲಪೇಟೆ, ರಾಯಚೂರು
2. ಶ್ರೀಮತಿ ಶೀಲಾ ಜಾಗಿರದಾರ
3. ಶ್ರೀ ಚೆನ್ನಪ್ಪ ಹರಿಜನವಾಡ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 578

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಅಕ್ಟೋಬರ್ ೧೫, ೨೦೦೯ (ಆಶ್ವಯುಜ ೨೩, ಶಕ ವರ್ಷ ೧೯೩೧)	ಸಂಚಿಕೆ ೪೧

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ

ಅಧ್ಯಕ್ಷರು ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಕೊಪ್ಪಳ

ಅಧಿಸೂಚನೆ

ಸಂ. ಕಂದಾಯ/ಸಿಬ್ಬಂದಿ-1/158/2008-09, ದಿನಾಂಕ: 22ನೇ ಸೆಪ್ಟೆಂಬರ್ 2009

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30-10-2009

ಕೊಪ್ಪಳ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ (36) ಗ್ರಾಮಲೆಕ್ಕಿಗರ ಹುದ್ದೆಗಳಿಗೆ ವರ್ಗೀಕರಣ ಮತ್ತು ಮೀಸಲಾತಿ ಅನ್ವಯ ಕರ್ನಾಟಕ ನಾಗರಿಕ ಸೇವೆಗಳು (Revenue subordinate Branch) (Cadre & Recruitment) (Amendment) ನಿಯಮಗಳು 2008 ನಿಯಮ 2 ರ ಅನ್ವಯ ನೇಮಕಾತಿಯನ್ನು ಮಾಡಲು ಅರ್ಹ ಅಭ್ಯರ್ಥಿಗಳಿಂದ ಪ್ರಾಧಿಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಈ ನೇಮಕಾತಿಯಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಅವರು ಗಳಿಸಿರುವ ಅಂಕಗಳನ್ನು ಆಧರಿಸಿ ಅರ್ಹತಾನುಸಾರ ಮತ್ತು ಚಾಲ್ತಿಯಲ್ಲಿರುವ ಮೀಸಲಾತಿಯನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಆಯ್ಕೆ ಮಾಡಲಾಗುತ್ತದೆ.

ನಿಬಂಧನೆಗಳು

1. ಈ ನೇಮಕಾತಿಯು ಗ್ರಾಮಲೆಕ್ಕಿಗರ ಹುದ್ದೆಗೆ ಮಾತ್ರ ಅನ್ವಯಿಸುತ್ತದೆ.

2. ಅರ್ಜಿ ಶುಲ್ಕವನ್ನು ಪ.ಜಾ/ಪ.ಪಂ/ಮಾಜಿ ಸೈನಿಕರು/ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ರೂ.100/- ಹಾಗೂ ಇತರೆ ಅಭ್ಯರ್ಥಿಗಳಿಗೆ ರೂ.200/- ಅಭ್ಯರ್ಥಿಗಳು ಅರ್ಜಿಯನ್ನು ಪಡೆಯುವ ವೇಳೆ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ ಕೊಪ್ಪಳ ಇವರ ಹೆಸರಿಗೆ ಖರೀದಿಸಿದ ಡಿ.ಡಿ.ಯನ್ನು ಸಲ್ಲಿಸಿ ಅರ್ಜಿಯನ್ನು ಪಡೆಯಬಹುದು.

3.) **1) ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ:01-10-2009 ರಿಂದ ಸರಕಾರಿ ರಜಾದಿನ ಹೊರತುಪಡಿಸಿ ಕಚೇರಿ ವೇಳೆಯಲ್ಲಿ.**

2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-10-2009 ಸಾಯಂಕಾಲ 5-30 ಗಂಟೆ ಒಳಗಾಗಿ.

4. ಅರ್ಜಿ ನಿಗದಿತ ನಮೂನೆಯ ಮೂಲ ಪ್ರತಿಯಲ್ಲಿಯೇ ಇರಬೇಕು. ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಕಚೇರಿಯಿಂದಲೇ ಪಡೆಯಬೇಕು. (ಜೆರಾಕ್ಸ್ ಅರ್ಜಿ ಸಲ್ಲಿಸುವಂತಿಲ್ಲ)

5. ಆಯ್ಕೆ ದಿನಾಂಕದಂದು ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳಿಗೆ. ರೋಸ್ಟರ್ ಮತ್ತು ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.

V-F1-(0)

6. ನೇಮಕಾತಿ ಸಮಿತಿಯ ಮೂಲಕ ಮಾತ್ರ ಈ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಯಾವುದೇ ವ್ಯಕ್ತಿಗಳ ಅಥವಾ ಸಂಸ್ಥೆಗಳ ಆಸೆ ಆಮಿಷಗಳಿಗೆ ಒಳಗಾಗದಿರಲು ತಿಳುವಳಿಕೆ ನೀಡಿದೆ.

7. ಸರಕಾರಿ ರಜಾ ದಿನಗಳಂದು ಅರ್ಜಿ ನೀಡಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ.

8. ಭರ್ತಿ ಮಾಡಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಅಂಚೆ ಮೂಲಕವಾಗಲಿ ಅಥವಾ ಕೊರಿಯರ್ ಮೂಲಕವಾಗಲಿ ಕಳುಹಿಸಬಾರದು.

9. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.

10. ಅರ್ಜಿಗಳನ್ನು ಸ್ವೀಕರಿಸುವ ದಿನಾಂಕದಂದು ಸರಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ/299/ ಬಿಎಸ್‌ಸಿ/2006 ದಿನಾಂಕ: 24-07-2009 ರ ಮೂಲಕ ಪಿ.ಯು.ಸಿ ಅಥವಾ 12ನೇ ವರ್ಗ ಪರೀಕ್ಷೆ ಪಾಸಾಗಿರತಕ್ಕದ್ದು. (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ)

11. ಹುದ್ದೆಗಳ ವರ್ಗೀಕರಣ ಈ ರೀತಿ ಇರುತ್ತದೆ.

ಕ್ರಮ ಸಂಖ್ಯೆ	ಮೀಸಲಾತಿ	ಇತರೆ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಮಾಜಿ ಸೈನಿಕರು	ಅಂಗವಿಕಲರು	ಯೋಜನಾ ನಿರಾಶ್ರಿತರು	ಕನ್ನಡ ಮಾಧ್ಯಮ	ಒಟ್ಟು
1	ಪ.ಜಾ.	1	2	1	–	1	–	–	5
2	ಪ.ಪಂ.	1	–	–	–	–	–	–	1
3	ಪ್ರ.ವರ್ಗ–1	1	–	–	–	–	–	–	1
4	ಪ್ರ.ವರ್ಗ–2ಎ	1	2	1	–	1	–	–	5
5	ಪ್ರ.ವರ್ಗ–2ಬಿ	1	1	–	–	–	–	–	2
6	ಪ್ರ.ವರ್ಗ–3ಎ	1	1	–	–	–	–	–	2
7	ಪ್ರ.ವರ್ಗ–3ಬಿ	1	1	–	–	–	–	–	2
8	ಸಾಮಾನ್ಯ	3	6	5	1	1	1	1	18
ಒಟ್ಟು		**10**	**13**	**7**	**1**	**3**	**1**	**1**	**36**

12. ಗ್ರಾಮಲೆಕ್ಕಿಗರ ವೇತನ ಶ್ರೇಣಿ

ರೂ.5800-100-6000-125-6500-150-7100-175-7800-200-8600-225-9500-250-10500

13. ವಯೋಮಿತಿ:– ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಅ)ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಆ)ಗರಿಷ್ಠ ವಯೋಮಿತಿ ವಿವಿಧ ವರ್ಗಗಳಿಗೆ ಈ ಕೆಳಗಿನಂತೆ ಇರುತ್ತದೆ.

1. ಸಾಮಾನ್ಯ ವರ್ಗ	35 ವರ್ಷ
2. 2ಎ, 2ಬಿ, 3ಎ, 3ಬಿ	38 ವರ್ಷ
3. ಪ.ಜಾ/ಪ.ಪಂಗಡ/ ಪ್ರ.ವರ್ಗ–1	40 ವರ್ಷ
4. ವಿಧವೆಯರು, ಅಂಗವಿಕಲರು	ಚಾಲ್ತಿಯಲ್ಲಿ ನಿಗದಿಪಡಿಸಿರುವ ವಯೋಮಿತಿಗೆ 10 ವರ್ಷ ಹೆಚ್ಚಿಗೆ ಸೇರಿಸಿಕೊಳ್ಳಲಾಗುವುದು.
5. ಮಾಜಿ ಸೈನಿಕರು	ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

14. ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರವನ್ನು ಪಡೆದಿರಬೇಕು/ಚಾಲ್ತಿಯಲ್ಲಿರಬೇಕು. ನಂತರ ಪಡೆದ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.

15. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಸಂಬಂಧಪಟ್ಟ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

16. ಗ್ರಾಮೀಣ ಮೀಸಲಾತಿಯನ್ನು ಕೋರಿರುವ ಪ.ಜಾತಿ/ಪ.ಪಂ/ಪ್ರ.ವರ್ಗ–1, 2ಎ, 2ಬಿ, 3ಎ, 3ಬಿ, ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ–2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

17. ಯೋಜನೆಗಳಿಂದ ನಿರ್ವಸತಿಗರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರ ಪಡೆದಿರಬೇಕು.

18. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರದ ಉದ್ಧೃತಭಾಗವನ್ನು (Extract of Cummulative Record)ಲಗತ್ತಿಸತಕ್ಕದ್ದು. ಈ ದಾಖಲೆಗಳಲ್ಲಿ ನಮೂದಿಸಿರುವಂತೆ ಜನ್ಮ ದಿನಾಂಕವನ್ನು ನೇಮಕಾತಿ ಪ್ರಾಧಿಕಾರ ಪರಿಗಣಿಸುವುದು. ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

19. ಪ.ಜಾತಿ/ಪ.ಪಂ/ಪ್ರ.ವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ./ಇ/ಎಫ್/ ನಲ್ಲಿ ತಹಶೀಲ್ದಾರರವರಿಂದ ಪಡೆದಿರುವ ಪ್ರಮಾಣ ಪತ್ರದ ಪ್ರತಿ ಲಗತ್ತಿಸತಕ್ಕದ್ದು. ಜಾತಿ ಅಡಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ)ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

20. ನೇಮಕಾತಿ ಪ್ರಾಧಿಕಾರದ ತೀರ್ಮಾನವೇ ಅಂತಿಮ. ಇದರಿಂದ ಅಭ್ಯರ್ಥಿಗಳಿಗೆ ಅನಾನುಕೂಲವಾದಲ್ಲಿ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

21. ನೇಮಕಾತಿ ಪ್ರಕ್ರೀಯೆ ಬಗ್ಗೆ ಯಾವುದೇ ರೀತಿಯ ವಾದ ವಿವಾದಗಳಿಗೆ ಆಸ್ಪದವಿರುವುದಿಲ್ಲ. ಎಲ್ಲಾ ರೀತಿಯ ನಿಯಂತ್ರಣಾಧಿಕಾರವನ್ನು ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.

22. ಅಭ್ಯರ್ಥಿಗಳು ಪಡೆದಿರುವ ಶೇಕಡಾವಾರು ಅಂಕಗಳ ಆಧಾರದ ಹಾಗೂ ಮೀಸಲಾತಿ ಆಧಾರದ ಮೇಲೆ ಆಯ್ಕೆಯನ್ನು ಮಾಡಲಾಗುವುದು ಮತ್ತು ಸರಕಾರದ ಆದೇಶದ ಸಂಖ್ಯೆ:ಡಿಪಿಎಆರ್/26/ಎಸ್.ಬಿ.ಸಿ/2002 ದಿನಾಂಕ:11–04–2003 ಹಾಗೂ ಕಾಲಕಾಲಕ್ಕೆ ಆಗಿರುವ ತಿದ್ದುಪಡಿಗಳನ್ವಯ ಆಯ್ಕೆ ಮಾಡಲಾಗುವ ಸಂಖ್ಯೆಗೆ ಶೇ.10 ರ ಅನುಪಾತದಲ್ಲಿ ಅಧಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವುದು ಮತ್ತು ಆಯ್ಕೆ ಹೊಂದಿದ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿ, ಉಪ ವಿಭಾಗಾಧಿಕಾರಿಗಳ ಕಚೇರಿ ಹಾಗೂ ಎಲ್ಲಾ ತಾಲೂಕು ಕಚೇರಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲಾಗುವುದು.

23. ಆಯ್ಕೆ ಪಟ್ಟಿಯಲ್ಲಿ ಕಂಡುಬರುವ ಅಭ್ಯರ್ಥಿಗಳು ನೇಮಕಾತಿಯನ್ನು ಹಕ್ಕು ಎಂದು ಪರಿಗಣಿಸುವಂತಿಲ್ಲ.

24. ನೇಮಕಾತಿ ಆದೇಶವನ್ನು ಪಡೆದ ಅಭ್ಯರ್ಥಿಗಳು ನೇಮಕಾತಿ ಆದೇಶದಲ್ಲಿ ತಿಳಿಸಿದ ನಿಗದಿತ ಅವಧಿಯ ಒಳಗೆ ಕರ್ತವ್ಯದ ಮೇಲೆ ಹಾಜರಾಗದಿದ್ದಲ್ಲಿ ಸದರಿ ಹುದ್ದೆಗಳನ್ನು ಅಧಿಕ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಂದ ತುಂಬಲಾಗುವುದು.

25. ಅಭ್ಯರ್ಥಿಗಳು ಕಂಪ್ಯೂಟರ್ ಜ್ಞಾನ ಹೊಂದಿರುವುದು ಹೆಚ್ಚುವರಿ ಅರ್ಹತೆ ಎಂದು ಆದ್ಯತೆ ನೀಡಲಾಗುವುದು.

26. ಅರ್ಹತಾ ಷರತ್ತುಗಳು.

1. ಭಾರತೀಯ ನಾಗರೀಕನಾಗಿರತಕ್ಕದ್ದು.

2. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

3. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

27. ಈ ಕೆಳಕಂಡ ದಾಖಲಾತಿಗಳನ್ನು ಅರ್ಜಿಯ ಜೊತೆ ಲಗತ್ತಿಸಿರತಕ್ಕದ್ದು.

1) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಾದ ಪಿ.ಯು.ಸಿ ಅಥವಾ 12ನೇ ತರಗತಿ ಪಾಸಾದ ವಿದ್ಯಾರ್ಹತೆಯ ಅಂಕಪಟ್ಟಿ.

2) ಜನ್ಮದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ(ಟಿ.ಸಿ)/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record)

ಮೀಸಲಾತಿ ಹಾಗೂ ವಯೋಮಿತಿ ರಿಯಾಯತಿ ಕೋರಿದ್ದಲ್ಲಿ ಹಾಜರುಪಡಿಸಬೇಕಾದ ಪ್ರಮಾಣಪತ್ರಗಳು:

ಅ) ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ.

ಆ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್/ ನಲ್ಲಿ ತಹಶೀಲ್ದಾರರವರಿಂದ ಪಡೆದಿರುವ ಪ್ರಮಾಣ ಪತ್ರ.

ಇ) ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಅರ್ಜಿಯಲ್ಲಿನ ನಿಗದಿತ ಅಂಕಣವನ್ನು ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

ಈ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ (ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2ರ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ–1 ರಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರರವರಿಂದ ಪಡೆದಿರತಕ್ಕದ್ದು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ)

ಉ) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ.

ಊ) ಯೋಜನಾ ನಿರಾಶ್ರಿತ ಅಭ್ಯರ್ಥಿಗಳು, ವಿಧವೆಯರು, ಜೀತಕಾರ್ಮಿಕರು, ಗ್ರಾಮ ಸಮೂಹ ಪರಿಶೀಲಕರು ಮತ್ತು ಕ್ಯಾಡೆಟ್ ಪರಿವೀಕ್ಷಕರು ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.

ಋ) ನೇಮಕಾತಿ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.

(ಈ) ಮೇಲಿನ ಅರ್ಹತೆ, ಮೀಸಲಾತಿ ಇತ್ಯಾದಿಗಳನ್ನು ನೇಮಕಾತಿ ಪ್ರಾಧಿಕಾರ ಕೂಲಂಕುಷವಾಗಿ ಪರಿಶೀಲಿಸಿದ ನಂತರವೇ ಅಭ್ಯರ್ಥಿಗಳನ್ನು ಜೇಷ್ಠತೆ ಮತ್ತು ಮೀಸಲಾತಿ ಹಾಗೂ ಮೆರಿಟ್ ಆಧಾರದ ಮೇಲೆ ಪರಿಗಣಿಸಲಾಗುವುದು).

28 ಪ್ರಮುಖ ಸೂಚನೆಗಳು.

1) ಅಭ್ಯರ್ಥಿಗಳು ತಮ್ಮ ಮಾಹಿತಿಗಾತಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳಲು ಸೂಚಿಸಿದೆ.

2) ಅಭ್ಯರ್ಥಿಗಳು ಸಲ್ಲಿಸುವ ಅರ್ಜಿಗಳನ್ನು ಸ್ಕ್ಯಾನ್ ಮಾಡುವುದರಿಂದ ಅರ್ಜಿಗಳನ್ನು ಮಡಿಚಬಾರದು ಹಾಗೂ ಪಿನ್ ಮಾಡಬಾರದು ಮತ್ತು ಯಾವುದೇ ರೀತಿ ಹಾಳು ಮಾಡಬಾರದು.

3) ಒಬ್ಬನೇ ಅಭ್ಯರ್ಥಿ ಒಂದಕ್ಕಿಂತ, ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಯಾವುದಾದರೂ ಒಂದು ಅರ್ಜಿಯನ್ನು ಮಾತ್ರ (ಕ್ರಮಬದ್ಧವಾಗಿದ್ದಲ್ಲಿ)ಪರಿಗಣಿಸಲಾಗುವುದು. ಈ ವಿಚಾರದಲ್ಲಿ ನೇಮಕಾತಿ ತೀರ್ಮಾನವೇ ಅಂತಿಮ. ಇದರಿಂದ ಅಭ್ಯರ್ಥಿಗಳಿಗೆ ಅನಾನುಕೂಲವಾದಲ್ಲಿ ನೇಮಕಾತಿ ಪ್ರಾಧಿಕಾರ ಹೊಣೆಯಾಗುವುದಿಲ್ಲ.

4) ಅಭ್ಯರ್ಥಿಗಳು ಅರ್ಜಿಯೊಂದಿಗೆ ಪಡೆದಿರುವ ಮಾಹಿತಿ ವಿವರವನ್ನು ಅಂತಿಮ ಆಯ್ಕೆಪಟ್ಟಿ ಪ್ರಕಟವಾಗುವವರೆಗೂ ಸುರಕ್ಷಿತವಾಗಿಟ್ಟುಕೊಳ್ಳತಕ್ಕದ್ದು. ಈ ಪುಸ್ತಕದಲ್ಲಿ ಅರ್ಜಿಯನ್ನು ಭರ್ತಿ ಮಾಡುವ ವಿಧಾನ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆ, ಮೀಸಲಾತಿಯ (Horizontal & Veritical Reservations) ವಿಶ್ಲೇಷಣೆ ಇತ್ಯಾದಿ ವಿಷಯಗಳ ಬಗ್ಗೆ ಕೂಲಂಕುಷವಾಗಿ ವಿವರಿಸಿದ್ದು, ಅವುಗಳನ್ನು ಅಭ್ಯರ್ಥಿಗಳು ಗಮನವಿಟ್ಟು ಓದಿಕೊಳ್ಳತಕ್ಕದ್ದು.

5) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮದಿನಾಂಕ, ವಿದ್ಯಾರ್ಹತೆ, ಹಾಗೂ ವಯೋಮಿತಿ ಸಡಿಲಿಕೆ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆಯನ್ನು ಪುರಸ್ಕರಿಸುವುದಿಲ್ಲ.

6) ನೇಮಕಾತಿ ಪ್ರಾಧಿಕಾರವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ.

7) **ದುರ್ನಡತೆ:–** ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು/ಸುಳ್ಳು ಹೇಳಿಕೆ ನೀಡಿರುವನೆಂದು ತಿಳಿದುಬಂದಲ್ಲಿ ಕ್ರಿಮಿನಲ್ ವ್ಯವಹಾರಗಳಿಗೆ ಒಳಪಡಿಸಲಾಗುತ್ತದೆ.

29. ಅಧಿಸೂಚನೆ ಹೊರಡಿಸಿದ ಹುದ್ದೆಗಳ ಸಂಖ್ಯೆ ಹೆಚ್ಚು ಅಥವಾ ಕಡಿಮೆ ವ್ಯತ್ಯಾಸಕ್ಕೆ ಒಳಪಟ್ಟಿರುತ್ತದೆ.

ಚಕ್ರವರ್ತಿ ಮೋಹನ್ ಭಾ.ಆ.ಸೇ

ಜಿಲ್ಲಾಧಿಕಾರಿಗಳು ಹಾಗೂ

ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ, ಕೊಪ್ಪಳ ಜಿಲ್ಲೆ, ಕೊಪ್ಪಳ

ಕಂದಾಯ ಇಲಾಖೆ

ಗ್ರಾಮಲೆಕ್ಕಿಗರ ಹುದ್ದೆಗಾಗಿ ಅರ್ಜಿ

ಅರ್ಜಿ ಸಂಖ್ಯೆ:

ಇತ್ತೀಚಿನ ಭಾವ ಚಿತ್ರ ಅಂಟಿಸಲು ಸ್ಥಳ

ಇವರಿಗೆ,
ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿಗಳ ಆಯ್ಕೆ ಮತ್ತು
ನೇರ ನೇಮಕಾತಿ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಕೊಪ್ಪಳ.

ಮಾನ್ಯರೆ,

ತಮ್ಮ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ: ಕಂದಾಯ: ಸಿಬ್ಬಂದಿ–1/ 158/ 2008–09 ದಿನಾಂಕ: 26.09.2009ರ ಪ್ರಕಾರ ತಮ್ಮ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಾಗಿ ನನ್ನ ಅರ್ಜಿಯನ್ನು ಇತ್ತೀಚಿನ ಭಾವಚಿತ್ರದೊಂದಿಗೆ ಈ ಕೆಳಕಂಡ ಮಾಹಿತಿಯೊಂದಿಗೆ ಸಲ್ಲಿಸುತ್ತಿದ್ದೇನೆ.

1	ಅಭ್ಯರ್ಥಿಯ ಹೆಸರು ಮತ್ತು ವಿಳಾಸ (ಬಿಡಿ ಅಕ್ಷರದಲ್ಲಿ)	
2	ತಂದೆ / ತಾಯಿ/ ಗಂಡನ/ ಪೋಷಕರ ಹೆಸರು	
3	ಎ) ಅಭ್ಯರ್ಥಿಯ ಅಂಚೆ ವಿಳಾಸ (ಪತ್ರ ವ್ಯವಹಾರಕ್ಕಾಗಿ) ಬಿ) ಖಾಯಂ ವಿಳಾಸ	
	ಸಿ) ದೂರವಾಣಿ ಸಂಖ್ಯೆ:	
4	ಅಭ್ಯರ್ಥಿಯು ಪ.ಜಾ./ಪ.ಪಂ. ಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರು ನೀಡಿದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.	ಜಾತಿ : ಉಪಜಾತಿ :
5	ಅಭ್ಯರ್ಥಿಯು ಹಿಂದುಳಿದ ವರ್ಗ ಪ್ರವರ್ಗಕ್ಕೆ ಸೇರಿರುವವರೆ? ತಹಶೀಲ್ದಾರರು ನೀಡಿದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.	ಪ್ರ ವರ್ಗ I ಪ್ರ ವರ್ಗ II ಎ ಪ್ರ ವರ್ಗ II ಬಿ ಪ್ರ ವರ್ಗ III ಎ ಪ್ರ ವರ್ಗ III ಬಿ
6	ಜನ್ಮ ದಿನಾಂಕ ಹಾಗೂ ವಯಸ್ಸು (ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ / ವರ್ಗಾವಣೆ ಪತ್ರ) ದೃಢೀಕರಿಸಿ ಲಗತ್ತಿಸತಕ್ಕದ್ದು.	ಅ. ಜನ್ಮ ದಿನಾಂಕ ದಿನಾಂಕ ತಿಂಗಳು ವರ್ಷ ಅ. ವಯಸ್ಸು ಆ. ಹುಟ್ಟಿದ ಸ್ಥಳ ಇ. ತಾಲೂಕು ಈ. ಜಿಲ್ಲೆ ಉ. ರಾಜ್ಯ
7	ಅಭ್ಯರ್ಥಿಯ ಲಿಂಗ	ಗಂಡು / ಹೆಣ್ಣು ವಿವಾಹಿತರೇ/ಅವಿವಾಹಿತರೇ

8	ಮೀಸಲಾತಿ: ಗ್ರಾಮೀಣ/ಕನ್ನಡ ಮಾಧ್ಯಮ/ಮಾಜಿ ಸೈನಿಕ/ಯೋಜನಾ ನಿರಾಶ್ರಿತರು/ಅಂಗವಿಕಲರೇ/ ಮಹಿಳಾ ವಿಧವೆಯರೇ*				
9	ವಿದ್ಯಾರ್ಹತೆ:				
	ವ್ಯಾಸಂಗ ಮಾಡಿದ ತರಗತಿ	ವ್ಯಾಸಂಗ ಮಾಡಿದ ಶಾಲೆಯ/ಸಂಸ್ಥೆಯ ಹೆಸರು	ಗರಿಷ್ಠ ಅಂಕಗಳು	ಪಡೆದ ಅಂಕಗಳು	ಶೇಕಡಾ ವಾರು
10	ಅರ್ಜಿ ಶುಲ್ಕ	ಪ.ಜಾ/ಪ.ಪಂ/ಮಾಜಿ ಸೈನಿಕರು/ಪ್ರವರ್ಗ–1	ಇತರೆ		
11	ಶುಲ್ಕ ಸಂದಾಯಿಸಿದ ವಿವರ (ಪ.ಜಾ/ಪ.ಪಂ./ಪ್ರ.ವರ್ಗ–1/ ಮಾಜಿಸೈನಿಕರಿಗೆ ರೂ.100/–, ಇತರರಿಗೆ ರೂ.200/–)	ಡಿ.ಡಿ.ನಂ. ದಿನಾಂಕ	ಮೊತ್ತ	ಬ್ಯಾಂಕ್ ಶಾಖೆ ಹೆಸರು	
12	ನೀವು ಸರ್ಕಾರಿ/ ಅರೆ ಸರ್ಕಾರಿ ನೌಕರಿಯಲ್ಲಿದ್ದೀರಾ? ಅ) ಇಲಾಖೆಯ ಹೆಸರು ಆ) ಹೊಂದಿರುವ ಹುದ್ದೆಯ ಪದನಾಮ ಇ) ಸೇವಾ ಅವಧಿ ಈ) ವೇತನ ಶ್ರೇಣಿ ಉ) ತಾತ್ಕಾಲಿಕ/ಖಾಯಂ				
13	ಅರ್ಜಿಯ ಜೊತೆಯಲ್ಲಿ ಲಗತ್ತಿಸಿದ ದಾಖಲೆಗಳ ಪತ್ರಗಳ ವಿವರ				

ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆ ಎಂದು ಹಾಗೂ ಸರಕಾರಿ ಉದ್ಯೋಗ ಸೇರಲು ಅನರ್ಹರಾಗುವಂತಹ ಪೂರ್ವೋತ್ತರಗಳು ಇರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ.

ಸೂಚನೆಗಳು:–

1. ಅರ್ಜಿಯಲ್ಲಿ ಕೇಳಿರುವ ವಿವರಗಳನ್ನು ಅಭ್ಯರ್ಥಿಯು ಸ್ವಂತ ಬರಹದಲ್ಲಿ ಭರ್ತಿ ಮಾಡತಕ್ಕದ್ದು.
2. ಅಗತ್ಯವಿರುವ ಪ್ರಮಾಣ ಪತ್ರಗಳ ಸ್ವಯಂ ದೃಢೀಕರಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.
3. ಅಪೂರ್ಣ ಮಾಹಿತಿ ಹಾಗೂ ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ಸಂಬಂಧ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

*ಚಾಲ್ತಿಯಲ್ಲಿರುವ ಸರಕಾರಿ ಆದೇಶದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದ ಪ್ರಮಾಣಪತ್ರ ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸುವುದು.

ರಾಜ್ಯ ಸರಕಾರಿ/ಕೇಂದ್ರ ಸರಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ:–. . . . . .ರವರು ರಾಜ್ಯ/ಕೇಂದ್ರ ಸರಕಾರದಲ್ಲಿ. . . . .(ಪದನಾಮ). . . . . ಇಲಾಖೆಯಲ್ಲಿ ಖಾಯಂ/ತಾತ್ಕಾಲಿಕ ಹುದ್ದೆಯನ್ನು ದಿನಾಂಕ:. . . . . .ವರೆಗೆ ಹೊಂದಿರುವರು ಈ ಹುದ್ದೆಗೆ ಇವರು ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದು, ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅವರಿಗೆ ಅನುಮತಿ ನೀಡಲಾಗಿದೆ.

ಸ್ಥಳ:

ದಿನಾಂಕ: ನೇಮಕಾತಿ ಪ್ರಾಧಿಕಾರದ ಸಹಿ

ಪಿ.ಆರ್. 835 ಇಲಾಖೆಯ ಹೆಸರು ಮತ್ತು ಮೊಹರಿನೊಂದಿಗೆ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು
ದೂರವಾಣಿ ಸಂ:0821-2424079 ಫ್ಯಾಕ್ಸ್ ಸಂ:2429012 & 2428383
e.mail : deo.mysore@gmail.com.dcmys-ka@nic.in

ಅಧಿಸೂಚನೆ

ಸಂ:ಗ್ರಾಲೆಸಿ.101/2008-2009, ದಿನಾಂಕ: 29ನೇ ಸೆಪ್ಟೆಂಬರ್ 2009

ವಿಷಯ: ಮೈಸೂರು ಜಿಲ್ಲಾ, ಕಂದಾಯ ಘಟಕದ, ಭೂಮಿ ಕೇಂದ್ರಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಸುತ್ತೋಲೆ ಸಂ: ಕಂಇ.34.ಪ್ರಕಾ/2009 ದಿ: 26-9-2009
2.ಈ ಕಾರ್ಯಾಲಯ ಸಮಸಂಖ್ಯೆ ಅಧಿಸೂಚನೆ ದಿನಾಂಕ. 26-9-2009

ಸರ್ಕಾರದ ಉಲ್ಲೇಖ (1)ರ ಸುತ್ತೋಲೆಯನ್ವಯ, ಮೈಸೂರು ಜಿಲ್ಲಾ ಕಂದಾಯ ಘಟಕದ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ (2)ರ ಈ ಕಾರ್ಯಾಲಯದ ಅಧಿಸೂಚನೆಯನ್ನು, ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

1 ಅಭ್ಯರ್ಥಿಗಳು ಅರ್ಜಿಗಳನ್ನು on line / ಅಂಚೆ / ಖುದ್ದಾಗಿ ಸಲ್ಲಿಸಬಹುದು
2 on line ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಚಲನ್‌ನ ಮುದ್ರಿತ ಪ್ರತಿಯನ್ನು ತೆಗೆದುಕೊಂಡು ನಿಗದಿಪಡಿಸಿದ ಬ್ಯಾಂಕ್‌ನಲ್ಲಿ ನಿಗದಿತ ಶುಲ್ಕವನ್ನು ಪಾವತಿಸಿ ಸ್ವೀಕೃತಿಯನ್ನು ಪಡೆಯತಕ್ಕದ್ದು.
3 ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿ ಸಲ್ಲಿಸಲಿಚ್ಛಿಸುವ ಅಭ್ಯರ್ಥಿಗಳು ಈ ಕಾರ್ಯಾಲಯದ ಉಲ್ಲೇಖ (2)ರ ಅಧಿಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು.
4 ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗದಿಪಡಿಸಿದ ದಿನಾಂಕದೊಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ, ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ಅವಧಿ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
5 ಅಂಚೆ ಅಥವಾ ಖುದ್ದಾಗಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು on line ವಿಳಾಸದಿಂದ http://recruitment.kar.nic.in/mysore-va. ಪಡೆಯಬಹುದಾಗಿದೆ.
6 ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಗೆ ರೂ:100-00 (ಒಂದು ನೂರು)ಗಳ ಶುಲ್ಕ ನಿಗದಿಪಡಿಸಲಾಗಿದೆ.

ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು

ಪಿ.ಆರ್. 836

ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ

ಅಧಿಸೂಚನೆ

ನಂ: ಸಿಬ್ಬಂದಿ(1) ವಹಿ-52: 2009-10, ಹಾವೇರಿ, ದಿನಾಂಕ: 26ನೇ ಸೆಪ್ಟೆಂಬರ್ 2009

ವಿಷಯ: ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ನಂ:ಆರ್‌ಡಿ: 299: ಬಿಎಸ್‌ಸಿ: 2006: ದಿನಾಂಕ: 3-2-2009 ಮತ್ತು 24-7-2009.
2. ಸರ್ಕಾರದ ಅಧಿಸೂಚನೆ ನಂ: ಕಂಇ: 299: ಬಿಎಸ್‌ಸಿ: 2006: ದಿನಾಂಕ: 8-9-2009.

